ನಿಂದ ಬಂದೆ. ಸರ್ಕಾರದ ಆದೇಶದ ಪ್ರಕಾರ ಕಾರ್ಖಾನೆಗಳವರು ನಡೆದುಕೊಂಡಿಲ್ಲ. ಮಲಿನ ನೀರು ಯಾವ ರೀತಿ ಹೋಗುತ್ತಿದೆಯೆಂದರೆ ವಾಟರ್ ಪಂಪ್‌ಸೆಟ್ಟುಗಳಿಂದ ಎಲ್ಲಿ ನೀರು ತೆಗೆಯುತ್ತಾರೋ ಅದರ ಪಕ್ಕದಲ್ಲೇ ಈ ಕಲುಷಿತ ನೀರು ಹೋಗುತ್ತಿದೆ. ಆ ನೀರನ್ನು ನಾನೂ ಸಹ ಕುಡಿಯುತ್ತಿದ್ದೇನೆ. ಆದರೆ ಕಾರ್ಮಿಕರೇ ಹೆಚ್ಚಾಗಿ ಈ ನೀರನ್ನು ಉಪಯೋಗಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಇಂತಹ ನೀರನ್ನು ಕುಡಿಯುವುದರಿಂದ ಕರುಳುಬೇನೆ ಬರುತ್ತದೆಂದು ಆರೋಗ್ಯ ಇಲಾಖೆಯವರೇ ಹೇಳುತ್ತಿದ್ದಾರೆ. ಇದರ ಮೇಲೆ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ ಅಲ್ಲಿನ ಬಹಳ ಜನರ ಆರೋಗ್ಯದ ಸ್ಥಿತಿ ಇನ್ನೂ ಹೆಚ್ಚಾಗಿ ಹದಗೆಡುತ್ತದೆಂದು ಆಸ್ಪತ್ರೆಯಲ್ಲಿನ ವೈದ್ಯಾಧಿಕಾರಿಗಳು ಹೇಳುತ್ತಿದ್ದಾರೆ. ಸರ್ಕಾರದವರು ಈ ಬಗ್ಗೆ ಸೂಕ್ತವಾದ ಆದೇಶವನ್ನು ನೀಡಿದ್ದಾರೆಯೇ ಅಥವಾ ಅವರಿಗೆ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆಯೇ ಎಂಬುದನ್ನು ತಿಳಿಸಬೇಕು. ಹಾಗೆಯೇ ಇದರ ಬಗ್ಗೆ ಕಟ್ಟುನಿಟ್ಟಾದ ಆದೇಶ ಕೊಡದೇ ಇದ್ದರೆ ಅದನ್ನು ತಕ್ಷಣ ಕೊಡಿಸುತ್ತಾರೆಯೇ? ಇವತ್ತು ಈ ನೀರಿನಿಂದ ಬಡಬಗ್ಗರ ಆರೋಗ್ಯದ ಮೇಲೆ ಏನು ಪರಿಣಾಮವಾಗುತ್ತಿದೆ ಎಂದರೆ ಅವರು ಔಷಧಿಯನ್ನು ಕೊಂಡುಕೊಳ್ಳಲೂ ಸಹ ಶಕ್ತಿಯಿಲ್ಲದಂಥ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ಇದರಿಂದ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ಮಹದೇವ್‌ರವರೇ, ತಾವು ಕ್ಲಾರಿಫಿಕೇಷನ್ ಕೇಳಬೇಕು, ಭಾಷಣವಲ್ಲ.

ಶ್ರೀ ಎಂ. ಮಹದೇವ್.—ನನ್ನ ಕ್ಷೇತ್ರದಲ್ಲಿ ಸಮಸ್ಯೆ ಬಹಳ ದೊಡ್ಡದಾಗಿದೆ.

ಅಧ್ಯಕ್ಷರು.—ನಿಮ್ಮ ಸಮಸ್ಯೆ ದೊಡ್ಡದಾದರೂ ನಿಮಗಿರುವ ಸಮಯ ವ್ಯಾಪ್ತಿ ಬಹಳ ಚಿಕ್ಕದು.

ಶ್ರೀ ಎಂ. ಮಹದೇವ್.—ಸರ್ಕಾರದವರು ಕಾರ್ಖಾನೆಯ ಮಾಲೀಕರಿಗೆ ಅನುಕೂಲ ಮಾಡುತ್ತಿದ್ದಾರೆಯೇ ಎನ್ನುವ ಸಂಶಯ ಬರುತ್ತಿದೆ. ಏಕೆಂದರೆ ಸರ್ಕಾರ ಆದೇಶ ಕೊಟ್ಟರೂ ಕೂಡ ಅವರು ಅದನ್ನು ಪಾಲಿಸಿಲ್ಲ. ಸರ್ಕಾರ ಕೂಡ ಸುಮ್ಮನಿದೆ. ನಂಜನಗೂಡಿನಲ್ಲಿ ವಿರೋಧಪಕ್ಷದ ಶಾಸಕರು ಇದ್ದಾರೆಂದು ಸರ್ಕಾರ ಸುಮ್ಮನಿದೆಯೇ ಎನ್ನುವ ಸಂಶಯ ನನಗೆ ಬರುತ್ತಿದೆ. ಆದ್ದರಿಂದ ಇದರ ಬಗ್ಗೆ ಒಂದು ವಾರದೊಳಗೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸುದೈವದಿಂದ ಈ ಎಲ್ಲಾ ಕಾರ್ಖಾನೆಗಳೂ ನಗರದ ಮೇಲ್ಭಾಗದಲ್ಲಿವೆ. ಅಲ್ಲಿ ನೀರು ಹರಿದು ಅಪಾಯ ಇರುವುದರ ಬಗ್ಗೆ ಸರ್ಕಾರ ಈಗಾಗಲೇ ಕಾರ್ಖಾನೆಯವರಿಗೆ ಆದೇಶ ಕೊಟ್ಟಿದೆ. ಅವರು ಆದೇಶವನ್ನು ಉಲ್ಲಂಘನೆ ಮಾಡಿದ್ದರೆ ಕಾನೂನು ಪ್ರಕಾರ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಪುನಃ ಈ ತಿಂಗಳಲ್ಲಿ ಹೋಗಿ ಅಲ್ಲಿ ಪರೀಕ್ಷೆ ಮಾಡಲಿದ್ದಾರೆ. ನಗರಕ್ಕೆ ಮಲಿನವಾದ ನೀರು ಅಲ್ಲಿಂದ ಬರುತ್ತದೆ. ನಗರಸಭೆಯವರು ಇದನ್ನು ಸರಿಯಾದ ರೀತಿಯಿಂದ ಪೈಪ್ ಹಾಕಿ ಮುಂದಕ್ಕೆ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇವೆ. ಈ ವಾರದಲ್ಲಿ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇವೆ. ಕಾರ್ಖಾನೆಯವರದ್ದು ತಪ್ಪಿದ್ದರೆ ಉಗ್ರ ಕ್ರಮ ಕೈಗೊಳ್ಳುವ ಭರವಸೆಯನ್ನು ಕೊಡುತ್ತೇನೆ. ಇನ್ನು, ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ವಿರೋಧಪಕ್ಷಕ್ಕೆ ಸೇರಿದವರು ಎಂದು ಸರ್ಕಾರ ಯೋಚನೆ ಮಾಡಿಲ್ಲ. ಇದು ಯಾವುದೇ ಪಕ್ಷದ ವಿಚಾರವಲ್ಲ. ನಾಗರಿಕರಿಗೆ ಸೌಕರ್ಯ ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ.

ಶ್ರೀ ಪಂಪಾಪತಿ.—ನಂಜನಗೂಡಿನಲ್ಲಿ ಮಾತ್ರವಲ್ಲ, ಎಲ್ಲಾ ಭಾಗಗಳಲ್ಲೂ ಈ ರೀತಿಯ ಪರಿಸ್ಥಿತಿ ಇದೆ ಸ್ವಾಮಿ.

ಅಧ್ಯಕ್ಷರು.—ನಂಜನಗೂಡಿನ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ತಾವು ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪಂಪಾಪತಿ.—ಇದು ನಂಜನಗೂಡಿಗೆ ಮಾತ್ರ ಸೀಮಿತವಾಗಿದೆಯೆಂದು ತಿಳಿದುಕೊಳ್ಳಬೇಡಿ ಎಂದು ಹೇಳಿದೆ.

ಶ್ರೀ ಎಂ. ಮಹದೇವ್.—ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. ಪಂಪುಸೆಟ್ಟು ಇರತಕ್ಕಂಥ ಜಾಗವನ್ನು ಮೇಲ್ಗಡೆಗೆ ಬದಲಾಯಿಸಿಬಿಟ್ಟರೆ ಈ ತೊಂದರೆ ತಪ್ಪುತ್ತದೆ. ಇದನ್ನು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಗರಸಭೆ ವತಿಯಿಂದ ಇದು ಆಗಬೇಕು.

ಅಧ್ಯಕ್ಷರು.—ವಿದ್ಯಾ ಇಲಾಖೆಯ ಬೇಡಿಕೆ ಮೇಲೆ ಮಾತನಾಡುವವರ ಪಟ್ಟಿ ದಿನೇ ದಿನೇ ಬೆಳೆಯುತ್ತಿದೆ. ಈ ಪಟ್ಟಿಯನ್ನು ಬೆಳೆಸುವುದರಿಂದ ಬಹಳ ಕಷ್ಟವಾಗುತ್ತದೆ. ಇವತ್ತು ಎರಡೂವರೆ ಗಂಟೆಯಷ್ಟು ಹೊತ್ತಿಗೆ ಮಂತ್ರಿಗಳನ್ನು ಕರೆಸಿಬಿಡುತ್ತೇನೆ. ಅಲ್ಲಿಯವರೆಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಮಾತನಾಡಿ. ಶ್ರೀ ಗೋವಿಂದಗೌಡರವರೇ ಈಗ ನೀವು ಮಾತನಾಡಿ.

ವಿತ್ತೀಯ ಕಾರ್ಯಕಲಾಪಗಳು

ವಿದ್ಯಾ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ

ಶ್ರೀ ಹೆಚ್. ಜಿ. ಗೋವಿಂದಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಈ ಬೇಡಿಕೆಯ ಬಗ್ಗೆ ಅನೇಕ ಜನ ಸ್ನೇಹಿತರು ಹೆಚ್ಚಿನ ಮಾಹಿತಿಗಳನ್ನು ಕೊಡುವಂತಹ ರೀತಿಯಲ್ಲಿ ಮಾತನಾಡಿದ್ದಾರೆ. ಈ ಎಲ್ಲಾ ಸ್ನೇಹಿತರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಈ ವಿದ್ಯಾ ಇಲಾಖೆಯ ಸಮಸ್ಯೆಗಳ

ಬಗ್ಗೆ ಮಾತನಾಡಲು ನಾನು ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ನಾನು ತುಂಬಾ ಹಿಂದುಳಿದ ಹಳ್ಳಿಯಿಂದ ಬಂದಿರತಕ್ಕ ಶಾಸಕನಾಗಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಸಮಸ್ಯೆ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ.. ಈ ದೇಶದಲ್ಲಿ ನಾವು ವಿದ್ಯೆಗೆ ಹೆಚ್ಚಿನ ಮಹತ್ವವನ್ನು ಕೊಡುತ್ತೇವೆ ಮತ್ತು ಹೆಚ್ಚಿನ ವಿಶೇಷ ಗಮನವನ್ನು ಕೂಡ ಕೊಡುತ್ತೇವೆ. ಈ ದೃಷ್ಟಿಯಿಂದ ಯಾವ ಕೆಲಸ ಮಾಡುವುದಾದರೂ ಅದನ್ನು ವ್ಯವಸ್ಥಿತವಾಗಿ ಮಾಡತಕ್ಕದ್ದು ಒಳ್ಳೆಯದು. ಬಹಳ ವರ್ಷಗಳಿಂದ ನಾವು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದೇವೆ. ಅದರಲ್ಲೂ ಮಲೆನಾಡಿನಲ್ಲಿರತಕ್ಕಂಥ ಜನರ ಕಷ್ಟ ಹೇಳತೀರದು. ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಬಹಳ ವರ್ಷಗಳಿಂದ ಹಳ್ಳಿ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಪಡೆಯತಕ್ಕಂಥ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಥಮಿಕ ಪಾಠಶಾಲೆಗಳಲ್ಲಿ 18–20 ಅಡಿ ವಿಸ್ತೀರ್ಣ ಇರತಕ್ಕಂಥ ಸ್ಥಳದಲ್ಲಿ 60–70–80 ಮಕ್ಕಳು ವಿದ್ಯಾಭ್ಯಾಸ ಮಾಡತಕ್ಕಂಥ ಪ್ರಸಂಗ ಸಾಮಾನ್ಯವಾಗಿ ಹಳ್ಳಿಯ ಶಾಲೆಗಳಲ್ಲಿ ಇರತಕ್ಕದ್ದು ಆಗಿದೆ. ಅವುಗಳಲ್ಲಿ ಏಕೋಪಾಧ್ಯಾಯ ಇರತಕ್ಕಂಥ ಶಾಲೆಗಳೇ ಜಾಸ್ತಿ. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯುವರೆಗೆ ಏಕೋಪಾಧ್ಯಾಯರೇ ಪಾಠ ಮಾಡುತ್ತಾರೆ. ನನಗೆ ತಿಳಿದ ಹಾಗೆ ಒಬ್ಬರೇ ಉಪಾಧ್ಯಾಯರು ಇರುವ ಕಡೆ ಅವರು ಏಕಪಾತ್ರಾಭಿನಯ ಮಾಡಬೇಕಾಗುತ್ತದೆ. ಒಂದೇ ಕಡೆಯಲ್ಲಿ ನಿಂತು ಆ ಕಡೆ ಈ ಕಡೆ ಬೇರೆ ಬೇರೆ ವರ್ಗದವರಿಗೆ ಪಾಠ ಮಾಡಬೇಕಾಗುತ್ತದೆ. ಈ ಕಡೆ ತಿರುಗಿ ಒಂದನೇ ತರಗತಿಗೆ ಪಾಠ ಮಾಡಿದರೆ ಆ ಕಡೆಗೆ ತಿರುಗಿ ಎರಡನೇ ತರಗತಿಗೆ ಪಾಠ ಮಾಡಬೇಕು. ಇದು ಒಂದು ರೀತಿಯಲ್ಲಿ ಏಕಪಾತ್ರಾಭಿನಯವೇ ಸರಿ. ಹೀಗೆ ಏಕಪಾತ್ರಾಭಿನಯ ಮಾಡತಕ್ಕಂಥ ಏಕೋಪಾಧ್ಯಾಯ ಇರುವ ಶಾಲೆಗಳು ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಅವ್ಯವಸ್ಥೆಯನ್ನು ಪರಿಹಾರ ಮಾಡದೇ ಇದ್ದರೆ ವಿದ್ಯಾಭ್ಯಾಸ ಪಡೆಯತಕ್ಕ ಮಕ್ಕಳಿಗೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ನಲವತ್ತು ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ ಇರಬೇಕೆಂದು ಸರ್ಕಾರ ಏನು ಆದೇಶ ಮಾಡಿದೆ, ಆ ರೀತಿ ಯಾವುದೂ ನಡೆಯುತ್ತಿಲ್ಲ. ಕೆಲವು ಕಡೆ 60–70 ವಿದ್ಯಾರ್ಥಿಗಳಿಗೆ ಸಹ ಒಬ್ಬ ಉಪಾಧ್ಯಾಯ ಇರುವಂತಹ ಪರಿಸ್ಥಿತಿ ಇದೆ. ಕೆಲವು ಕಡೆ ಇರತಕ್ಕಂಥ ಏಕೋಪಾಧ್ಯಾಯ ಬಾಗಿಲು ಹಾಕಿಕೊಂಡು ಶಾಲೆಗೆ ಹೋಗದೆ ಇರತಕ್ಕಂಥ ನಿದರ್ಶನಗಳೂ ಕೂಡ ಇವೆ. ಸರ್ಕಾರದವರು ಇದರ ಕಡೆಗೆ ಗಮನ ಕೊಡುವುದು ಅಗತ್ಯವಾಗಿದೆ. ನಾನು ಶೃಂಗೇರಿ ಕ್ಷೇತ್ರದಿಂದ ಬಂದಿರುವವನು. ಬೆಂಗಳೂರು ಇಲ್ಲಿಗೆ ಬಹಳ ದೂರದಲ್ಲಿದೆ. ಡಿಡಿಪಿಐ ಅವರ ಕಚೇರಿ ಇರುವುದು ಚಿಕ್ಕಮಗಳೂರಿನಲ್ಲಿ. ಆದರೆ, ಮಲೆನಾಡಿನಲ್ಲಿ ಇರತಕ್ಕ ಜನರ ಕಷ್ಟ ಕಾರ್ಪಣ್ಯಗಳು ಏನಿವೆ, ಅವರ ಸಮಸ್ಯೆಗಳು ಏನಿವೆ ಎಂದು ತಿಳಿಯಲು ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳು ಆಗಿಂದಾಗ್ಯೆ ಅಲ್ಲಿ ಭೇಟಿಕೊಟ್ಟು ನೋಡಿದರೆ ಮಾತ್ರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಆದರೆ ಈ ದಿಸೆಯಲ್ಲಿ ಯಾವ ಕೆಲಸವೂ ಆಗಿಲ್ಲ. ನಾನು ಯಾರ ಮೇಲೂ ದೂರು ಹೇಳುತ್ತಿಲ್ಲ. ವಾಸ್ತವವಾಗಿ ವಿಷಯ ತಿಳಿದುಕೊಂಡು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ದಿಸೆಯಲ್ಲಿ ಹಳ್ಳಿಗಳಲ್ಲಿ ಎಲ್ಲೆಲ್ಲಿ ಶಾಲೆಗಳು ಇಲ್ಲವೋ, ಅಲ್ಲಿ ಶಾಲೆಗಳನ್ನು ಕೊಡಬೇಕು, ಮಾತ್ರವಲ್ಲ, ಅಲ್ಲಿ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲಿಕ್ಕೆ ಬೆಂಚು, ಬೋರ್ಡು, ಇನ್ನೇನು ಸೌಕರ್ಯಗಳು ಬೇಕೋ ಅವುಗಳನ್ನು ಒದಗಿಸಬೇಕು. ಹಾಗೆ ಮಾಡದೇ ಇದ್ದರೆ ವಿದ್ಯಾಭ್ಯಾಸ ಪಡೆಯತಕ್ಕಂಥ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತದೆ. ಆದಷ್ಟು ತೀವ್ರವಾಗಿ ಇದರ ಬಗ್ಗೆ ಯೋಚನೆ ಮಾಡಿ ನಲವತ್ತು ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ ಎಂದು ಸರ್ಕಾರದ ಏನು ಆದೇಶ ಇದೆ, ಅದನ್ನು ಪರಿಪಾಲಿಸಿಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಹಳ್ಳಿಗಳಲ್ಲಿ ಮಳೆಯಾದರೆ ಸರಿಯಾದ ವಾಹನ ಸೌಕರ್ಯ ಇರುವುದಿಲ್ಲ. ಇದರ ಬಗ್ಗೆ ಕೂಡ ಗಮನ ಕೊಡಬೇಕು. ಅವರಿಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡತಕ್ಕದ್ದು, ಶಾಲಾ ಕಟ್ಟಡ ಒದಗಿಸಿಕೊಡತಕ್ಕದ್ದು ಮಾಡಿದರೆ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಒಳ್ಳೆಯ ವಿದ್ಯಾಭ್ಯಾಸ ದೊರೆತರೆ ಮುಂದೆ ಮಾಧ್ಯಮಿಕ ಶಾಲೆಯಲ್ಲಿ, ಪ್ರೌಢಶಾಲೆಯಲ್ಲಿ ನಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಒಳ್ಳೆ ವಿದ್ಯಾಭ್ಯಾಸ ಸಿಗಲು ಅನುಕೂಲವಾಗುತ್ತದೆ. ಆದ್ದರಿಂದ ಪ್ರಾಥಮಿಕ ಪಾಠಶಾಲೆಗಳಲ್ಲಿ ಅನುಕೂಲತೆಗಳನ್ನು ಮಾಡಬೇಕು. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಇದನ್ನು ಮಾಡಲು ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಅಧಿಕಾರ ವರ್ಗದವರು ಇದರತ್ತ ತೀವ್ರವಾಗಿ ಯೋಚನೆ ಮಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ. ತಮಗೆ ಗೊತ್ತಿದೆ. ಹಳ್ಳಿಗಳಲ್ಲಿ ಮಳೆ ಜಾಸ್ತಿ ಇದ್ದರೆ ಅಲ್ಲಿಯ ಪರಿಸ್ಥಿತಿ ಹೇಗಿರುತ್ತದೆ? ಮಕ್ಕಳಿಗೆ ಶಾಲೆಗೆ ಬರಲು ಸಾಧ್ಯವಾಗುವುದಿಲ್ಲ. ಸರ್ಕಾರದವರು ಇದರ ಕಡೆಗೆ ವಿಶೇಷ ಗಮನ ಕೊಟ್ಟು ಇರತಕ್ಕಂಥ ಪರಿಸ್ಥಿತಿಯನ್ನು ತೀವ್ರವಾಗಿ ಯೋಚನೆ ಮಾಡಿ ಇದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾಂಪೋಸಿಟ್ ಜ್ಯೂನಿಯರ್ ಕಾಲೇಜುಗಳನ್ನು ಇತ್ತೀಚೆಗೆ ಜಾಸ್ತಿ ಮಾಡಿರತಕ್ಕಂಥದ್ದು ಆ ಒಂದು ಕಾಲೇಜು ನಮ್ಮಲ್ಲಿರುವ ಮುನಿಸಿಪಲ್ ಹೈಸ್ಕೂಲ್‌ನ ಕಟ್ಟಡದಲ್ಲೇ ಪ್ರಾರಂಭವಾಯಿತು. ಆ ಒಂದು ಕಟ್ಟಡದಲ್ಲೇ ಹೈಸ್ಕೂಲು ಹಾಗೂ ಕಾಂಪೋಸಿಟ್ ಜ್ಯೂನಿಯರ್ ಕಾಲೇಜು ಎರಡೂ ನಡೆಯುತ್ತಿವೆ. ಈ ರೀತಿ ಕಳೆದ 3–4 ವರ್ಷಗಳಿಂದಲೂ ನಡೆಯುತ್ತಿದೆ. ಅಲ್ಲಿ ನ್ಯಾಯವಾಗಿ ಬೇಕಾಗಿರತಕ್ಕ ಉಪಾಧ್ಯಾಯರುಗಳು

ಇಲ್ಲ. ಇದರಿಂದ ಆ ಮಕ್ಕಳು ತುಂಬಾ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಜೊತೆಯಲ್ಲಿ ಆ ಹೈಸ್ಕೂಲು ಹಾಗೂ ಕಾಲೇಜು ಎರಡೂ ಒಂದೇ ಕಟ್ಟಡದಲ್ಲೇ ನಡೆಯುತ್ತಿದ್ದು ಕಾಲೇಜಿಗಾಗಿ ಪ್ರತ್ಯೇಕ ಕಟ್ಟಡ ಇಲ್ಲ. ಇದರಿಂದಾಗಿ ಬೆಳಗ್ಗೆ 8 ಗಂಟೆಯಿಂದ 12 ಗಂಟೆಯವರೆಗೆ ಹೈಸ್ಕೂಲು ಮತ್ತೆ 12 ಗಂಟೆಯಿಂದ 4–30 ಗಂಟೆಯವರೆಗೆ ಕಾಲೇಜು— ಈ ರೀತಿ ನಡೆಯುತ್ತಿದೆ. ಆದ್ದರಿಂದ ಇದರ ಕಟ್ಟಡಕ್ಕಾಗಿ ಸಾಧ್ಯವಾದಷ್ಟುಮಟ್ಟಿಗೆ ಹೆಚ್ಚು ಹಣ ವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಜ್ಯೂನಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡತಕ್ಕಂಥ ಮಕ್ಕಳು 5–6 ಮೈಲಿ ದೂರದಿಂದ ನಡೆದುಕೊಂಡು ಬರಬೇಕಾಗಿದೆ. ಜೊತೆಗೆ ಅಲ್ಲಿ ಕೆಲಸ ಮಾಡತಕ್ಕಂತಹ ಉಪಾಧ್ಯಾಯರು ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಇರಬೇಕಾಗಿರುವುದರಿಂದ, ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತದೆ. ಮತ್ತೆ ಉಪಾಧ್ಯಾಯರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಇದರ ಬಗ್ಗೆ ಗಮನ ಹರಿಸಿ ಶಾಲಾ ಕಟ್ಟಡದಲ್ಲಿರುವ ಜ್ಯೂನಿಯರ್ ಕಾಲೇಜಿಗೆ ಪ್ರತ್ಯೇಕ ಕಟ್ಟಡವನ್ನು ಕಟ್ಟಿಸುವುದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಆ ಹೈಸ್ಕೂಲಿನಲ್ಲಿರತಕ್ಕಂತಹ 8 ರೂಮುಗಳಲ್ಲೇ ಕಾಲೇಜು ಹಾಗೂ ಹೈಸ್ಕೂಲು ಎರಡೂ ನಡೆಯುತ್ತಿವೆ. ಮತ್ತೆ ಆ ಹೈಸ್ಕೂಲಿನ ಕಟ್ಟಡದಲ್ಲಿ ಸುಮಾರು 200 ಜನ ವಿದ್ಯಾರ್ಥಿನಿಯರು ಇದ್ದಾರೆ. ಅಲ್ಲಿ ಒಂದು ಶೌಚ ಗೃಹ ಇಲ್ಲ. ಇದರ ಬಗ್ಗೆ ಹಿಂದಿನ ಶಿಕ್ಷಣ ಸಚಿವರಾಗಿದ್ದಂತಹ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು. ಅಲ್ಲಿಗೆ ಬಂದಿದ್ದಾಗ ಆ ವಿದ್ಯಾರ್ಥಿನಿಯರೆಲ್ಲ ಸೇರಿ ಶೌಚಗೃಹ ಬೇಕೆಂಬ ಮನವಿಯೊಂದನ್ನು ಅರ್ಪಿಸಿದ್ದರು. ಸಚಿವೆಯವರು 2 ತಿಂಗಳಲ್ಲಿ ಇದನ್ನು ಮಾಡಿಸಿಕೊಡುತ್ತೇವೆಂಬ ಭರವಸೆಯನ್ನೂ ಕೊಟ್ಟರು. ಯಾವುದೋ ಕಾರಣದಿಂದ ಇವತ್ತಿಗೂ ಆ ಕೆಲಸ ಆಗಿಲ್ಲ. ಆ ಜ್ಯೂನಿಯರ್ ಕಾಲೇಜಿನಲ್ಲಿ ಹೆಣ್ಣುಮಕ್ಕಳು ಇದ್ದಾರೆ. ಹೆಣ್ಣುಮಕ್ಕಳು ಇರುವಂತಹ ಕಡೆಯೂ ಕೂಡ ಶೌಚಗೃಹ ಇಲ್ಲ ಎಂದರೆ ಹೇಗೆ ? ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಕಾಳಜಿ ವಹಿಸಿ ಇದನ್ನು ಮಾಡಿಸಿ ಕೊಡಬೇಕು. ಆ ಕಡೆ ಹೆಚ್ಚಿನ ಗಮನ ಕೊಡ ಬೇಕಾದುದು ನಮ್ಮ ಆದ್ಯ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ನರಸಿಂಹರಾಜಪುರದಲ್ಲಿರುವ ಜ್ಯೂನಿಯರ್ ಕಾಲೇಜಿನಲ್ಲಿ ಇವತ್ತಿನವರೆಗೂ ಉಪಧ್ಯಾಯರುಗಳನ್ನು ಪೋಸ್ಟ್ ಮಾಡಿಲ್ಲ. ಈ ವಿಚಾರವನ್ನು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ವಿದ್ಯಾರ್ಥಿಗಳು ನನ್ನ ಹತ್ತಿರ ತಿಳಿಸಿದ್ದಾರೆ. ನಾನು ಕೂಡಲೇ ಸಂಬಂಧಪಟ್ಟ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಅಧಿಕಾರಿಗಳಿಗೂ ಹೇಳಿದ್ದೇನೆ. ನಿನ್ನೆ ದಿವಸದಿಂದ ಆ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆಂದು ನನಗೆ ಫೋನೋಗ್ರಾಂ ಬಂದಿದೆ. ಹುಡುಗರು ಏತಕ್ಕಾಗಿ ಗಲಾಟೆ ಮಾಡುತ್ತಿದ್ದಾರೆಂದರೆ, ಅಲ್ಲಿ ಮುಖ್ಯವಾಗಿ ಬೇಕಾದಂತಹ ಉಪಾಧ್ಯಾಯರು ಗಳೇ ಇಲ್ಲ. ಉದಾಹರಣೆಗೆ ಒಂದೆರಡನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಫಿಜಿಕ್ಸ್ ಲೆಕ್ಚರರ್ಸ್ ಇಲ್ಲ. ಸೈನ್ಸ್‌ನ ಲೆಕ್ಚರರ್ಸ್ ಇಲ್ಲ. ಸಿ.ಬಿ.ಜಡ್‌ನ ಲೆಕ್ಚರರ್ಸ್ ಇಲ್ಲ. ಇದೇ ರೀತಿ ಇನ್ನೂ ಹಲವಾರು ಉಪಾಧ್ಯಾಯರು ಇಲ್ಲ. ಜ್ಯೂನಿಯರ್ ಕಾಲೇಜಿಗೆ ಮುಖ್ಯವಾಗಿ ಯಾರ್‍ಯಾರು ಇರಬೇಕೋ ಅಂತಹವರೇ ಇಲ್ಲದಿದ್ದರೆ ಪಾಠವನ್ನು ಮಾಡತಕ್ಕಂತಹವರು ಯಾರು ? ಪಾಠವನ್ನು ಕೇಳತಕ್ಕಂತಹವರು ಯಾರು ? ಇಂತಹ ಅವ್ಯವಸ್ಥೆ ಅಲ್ಲಿರು ವುದರಿಂದ ಆ ಮಕ್ಕಳು ಯಾವ ರೀತಿ ತಮ್ಮ ವಿದ್ಯಾಭ್ಯಾಸವನ್ನು ಮಾಡಬೇಕು ? ಆದರೆ ನಾವು ಇವತ್ತು ನೋಡುತ್ತಿದ್ದೇವೆ. ಒಬ್ಬ ವಿದ್ಯಾರ್ಥಿ ಮೆಡಿಕಲ್ ಕಾಲೇಜಿಗೆ ಸೇರಬೇಕಾದರೆ ಆತನು 93 ಪರ್ಸೆಂಟ್ ತೆಗೆಯ ಬೇಕಾಗಿದೆ. ಅದೇ ರೀತಿ ಇಂಜಿನಿಯರಿಂಗ್ ಕಾಲೇಜಿಗೆ ಸೇರಬೇಕಾದರೆ 88 ಪರ್ಸೆಂಟ್ ಇರಬೇಕಾಗುತ್ತದೆ. ಆದರೆ ನಮ್ಮ ಜ್ಯೂನಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದವರಿಗೆ ಎಲ್ಲಿ ಸೀಟು ಸಿಕ್ಕುತ್ತದೆ. ನಮ್ಮ ನರಸಿಂಹರಾಜಪುರದ ಜ್ಯೂನಿಯರ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡಿದಂತಹ ಮಕ್ಕಳ ಲೆಕ್ಕವನ್ನು ತೆಗೆದು ಕೊಂಡರೆ ಅವರು ಎಂ.ಬಿ.ಬಿ.ಎಸ್. ಗೂ ಹೋಗುವುದಕ್ಕಾಗುವುದಿಲ್ಲ ಅಥವಾ ಇಂಜಿನಿಯರಿಂಗ್‌ಗೂ ಹೋಗುವು ದಕ್ಕಾಗುವುದಿಲ್ಲ. ಅವರಿಗೆ ಯಾವುದು ಸೀಟು ಸಿಕ್ಕುತ್ತದೆ ಎಂದರೆ, ಯಾರೂ ಹೋಗದಿದ್ದವುಗಳಲ್ಲಿ ಇವರಿಗೆ ಸೀಟು ಸಿಕ್ಕುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ನರಸಿಂಹರಾಜಪುರದ ಜ್ಯೂನಿಯರ್ ಕಾಲೇಜು ನಡೆಯುತ್ತಿದೆ. ನನ್ನ ಮನಸ್ಸಿನಲ್ಲಿರತಕ್ಕಂತಹ ಕಳಕಳಿಯನ್ನು ಸರ್ಕಾರ ಅರ್ಥಮಾಡಿಕೊಂಡು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಕಳೆದ ವರ್ಷ ನಮ್ಮ ಕೊಪ್ಪದಲ್ಲಿ ಫಸ್ಟ್‌ಗ್ರೇಡ್ ಜ್ಯೂನಿಯರ್ ಕಾಲೇಜು ಪ್ರಾರಂಭವಾಯಿತು. ಕಾಲೇಜು ಮಂಜೂರಾದರೂ ಅಲ್ಲಿ ಖಾಯಂ ಕೆಲಸ ಮಾಡತಕ್ಕಂತಹ ಲೆಕ್ಚರರ್ಸ್ ಇಲ್ಲ. ಹೋದ ವರ್ಷ ತಾತ್ಕಾಲಿಕವಾಗಿ ಲೆಕ್ಚರರ್ಸ್ ಅನ್ನಾಗಿ ತೆಗೆದುಕೊಂಡಿದ್ದರು. ಅವರೇ ಇವತ್ತೂ ಮುಂದುವರೆಯುತ್ತಿದ್ದಾರೆ. ಕಳೆದ ವರ್ಷ ಅದಕ್ಕೆ ಬೇಕಾದ ಪೀಠೋಪಕರಣಗಳನ್ನು ಮಾರ್ಚಿ 27 ನೇ ತಾರೀಖು ಒದಗಿಸಿದ್ದೇವೆಂದು ಆರ್ಡರ ಬಂತು. ಆದರೆ 27 ನೇ ತಾರೀಖು ಮಾಲು ಬರಲಿಲ್ಲ. ನಿಯಮದ ಪ್ರಕಾರ ಆ ಆರ್ಡರ್‌ನಲ್ಲಿ ನಮೂದಿಸಿರುವು ದನ್ನು ತೆಗೆದುಕೊಂಡಿದ್ದೇವೆಂದು ಹೇಳಿ ಆ ಕಾಲೇಜಿನ ಪ್ರಿನ್ಸಿಪಾಲರು ರುಜು ಹಾಕಬೇಕು. ಆದರೆ ಆ ಫಸ್ಟ್ ಗ್ರೇಡ್ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲರು ಮಾಲು ಬರದಿರುವಾಗ ನಾನು ಕಂಟೆಂಟ್ಸ್ ರಿಸೀವ್ಡ್ ಅಂತ ರುಜು ಮಾಡುವುದಿಲ್ಲ ಅಂತ ಹೇಳಿದರು. ಅವರು ಅದಕ್ಕೆ ಸಹಿ ಮಾಡದಿದ್ದರೆ ಬಹುಶಃ ಆ ವರ್ಷದ ಬಡ್ಜೆಟ್ಟಿ ನಲ್ಲಿ ಇಟ್ಟಂತಹ ಹಣ ಲ್ಯಾಪ್ಸ್ ಆಗುತ್ತದೆ. ಅಥವಾ ಮಾಲು ಬಂದಿದೆ ಅಂತ ಆ ಪ್ರಿನ್ಸಿಪಾಲರು ಸಹಿ ಹಾಕಿದರೆ ಮಾಲು ಬರುವುದಿಲ್ಲ, ಇದು ಆಗಬಾರದು, ಇದರಿಂದ ಆ ಅಧಿಕಾರಿಗಳಿಗೆ ತೊಂದರೆಯಾಗುವುದಿಲ್ಲವೇ ?

ಇನ್ನು ಮುಂದೆಯಾದರೂ ಸಮಯಕ್ಕೆ ಸರಿಯಾಗಿ ಟೆಂಡರನ್ನು ಕರೆದು ಸಕಾಲಕ್ಕೆ ಆರ್ಡರ್‌ನ ಜೊತೆ ಮಾಲೂ ಕೂಡ ಸರಬರಾಜು ಆಗುವ ವ್ಯವಸ್ಥೆಯಾಗಬೇಕು. ಮತ್ತೆ ಆ ರೀತಿ ಸರಬರಾಜು ಮಾಡತಕ್ಕಂತಹ ಪೀಠೋಪ ಕರಣಗಳು ಏನಿವೆ ಅವುಗಳನ್ನು ಸರಬರಾಜು ಮಾಡುವುದಕ್ಕೆ ಯಾರಿಗಾದರೂ ಒಬ್ಬರಿಗೆ ಕೊಡಿ. ನೀವು ಏನು ಮಾಡುತ್ತೀರೆಂದರೆ, ಕುರ್ಚಿಯನ್ನು ಸರಬರಾಜು ಮಾಡುವುದಕ್ಕೆ ಹಾಸನದವರಿಗೆ ಕೊಡುವುದು, ಮೇಜನ್ನು ಸರಬರಾಜು ಮಾಡುವುದಕ್ಕೆ ಗುಲ್ಬರ್ಗದವರಿಗೆ ಕೊಡುವುದು, ಬಾಕಿ ಉಳಿದವುಗಳನ್ನು ಸರಬರಾಜು ಮಾಡು ವುದಕ್ಕೆ ಬೆಂಗಳೂರಿನವರಿಗೆ ಕೊಡುವುದು. ಈ ರೀತಿ ಆಗುವುದನ್ನು ಇನ್ನು ಮುಂದೆಯಾದರೂ ತಪ್ಪಿಸಿ ಯಾರಿಗಾದರೂ ಒಬ್ಬರಿಗೆ ಕೊಟ್ಟು ಅವುಗಳನ್ನು ಒಂದೇ ಸಾರಿ ಸರಬರಾಜು ಆಗುವಂತಹ ವ್ಯವಸ್ಥೆಯನ್ನು ಮಾಡಬೇಕು. ಇನ್ನೂ ತುಂಬಾ ವಿಷಯಗಳಿವೆ. ಕಾಲಾವಕಾಶ ಇಲ್ಲವೆಂದು ನನಗೂ ಗೊತ್ತಿದೆ. ನಿನ್ನೆಯಿಂದ ನಾವು ನೋಡುತ್ತಿದ್ದೇವೆ, ಮೊದಲು ಮಾತನಾಡತಕ್ಕಂತಹವರಿಗೆ ಒಂದು ಗಂಟೆ ಸಮಯ ಸಿಕ್ಕುತ್ತದೆ. ಕೊನೆಯಲ್ಲಿ ಮಾತನಾಡುವವರಿಗೆ 5 ನಿಮಿಷವೂ ಸಿಕ್ಕುವುದಿಲ್ಲ. ನನಗಿಂತ ತುಂಬಾ ಉತ್ಸಾಹದಿಂದ ಮಾತ ನಾಡಬೇಕೆಂಬ ಮಾನ್ಯ ಸದಸ್ಯರು ಇದ್ದಾರೆ. ಇರತಕ್ಕಂತಹ ಎಲ್ಲಾ ತೊಂದರೆಗಳ ಬಗ್ಗೆ ವಿಷಯಗಳನ್ನು ಹೇಳ ಬೇಕಾದರೆ 3–4 ಗಂಟೆಗಳಾದರೂ ಮುಗಿಯುವುದಿಲ್ಲ. ನಮ್ಮ ಮನಸ್ಸಿನಲ್ಲಿರತಕ್ಕಂತಹ ಕಳಕಳಿಯನ್ನು ನಮ್ಮ ಅಧಿಕಾರಿ ಸ್ನೇಹಿತರು, ಸರ್ಕಾರ ಹಾಗೂ ಮಂತ್ರಿಗಳು ಅರ್ಥಮಾಡಿಕೊಂಡು ಸಾಧ್ಯವಾದಮಟ್ಟಿಗೆ ಈ ಸಮಸ್ಯೆ ಯನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಕೊನೆಯದಾಗಿ ನನ್ನದೊಂದು ಸಲಹೆ ಇದೆ. ಮಲೆನಾಡು ಪ್ರದೇಶಗಳಲ್ಲಿ ಜುಲೈಯಿಂದ ಆಗಸ್ಟ್ ವರೆಗೆ ತುಂಬಾ ಮಳೆಯಾಗುತ್ತದೆ. ಸಾಧಾರಣ ದಿವಸಕ್ಕೆ 7–8 ಇಂಚು ಮಳೆಯಾಗುವುದೂ ಉಂಟು. ಆದ್ದರಿಂದ ಮಲೆನಾಡು ಪ್ರದೇಶಗಳಲ್ಲಿ ಇರತಕ್ಕಂತಹ ಶಾಲಾ ಕಾಲೇಜುಗಳಿಗೆ ಅಕ್ಟೋಬರ್ ತಿಂಗಳ ಬದಲು ಜುಲೈ ಮತ್ತು ಆಗಸ್ಟ್ ತಿಂಗಳು ರಜೆಯನ್ನು ಕೊಟ್ಟು, ಅಕ್ಟೋಬರ್ ತಿಂಗಳಲ್ಲಿ ಶಾಲಾ ಕಾಲೇಜುಗಳು ನಡೆಯುವಂತಹ ಅನುಕೂಲವನ್ನು ಕಲ್ಪಿಸಿದರೆ ಇದರಿಂದ ಮಕ್ಕಳು ಪ್ರತಿ ದಿವಸ ದೂರದ ಊರುಗಳಿಂದ ಮಳೆಯಲ್ಲಿ ಬಂದು ಹೋಗುವುದು ತಪ್ಪುತ್ತದೆ. ಇದನ್ನು ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುವುದು ಅವಶ್ಯಕ. ಕೊನೆಗೆ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ, ಹೃತ್ಪೂರ್ವಕವಾಗಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯ್ಲಿ (ವಿರೋಧಪಕ್ಷದ ನಾಯಕರು) . —ಸನ್ಮಾನ್ಯ ಅಧ್ಯಕ್ಷರೇ, ನಾನು ಎಲ್ಲ ವಿಚಾರಗಳ ಬಗ್ಗೆಯೂ ಮಾತನಾಡುವುದಕ್ಕೆ ಹೋಗದೆ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂಬ ಉದ್ದೇಶದಿಂದ ನಿಂತಿದ್ದೇನೆ. ಪ್ರಥಮವಾಗಿ ಪುರಾತನ ವಸ್ತು ಸಂಶೋಧನಾ ಶಾಸ್ತ್ರ. ಈ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂಬ ಮನಸ್ಸು ಇದೆ. ಸಚಿವರು ಸ್ವಲ್ಪ ಈ ಕಡೆ ಗಮನ ಕೊಡಬೇಕು. ಇದರ ಸಂಬಂಧದಲ್ಲಿ ವಿಜಯನಗರದ ಹಂಪೆ ಅವರಿಗೆ ಬರುತ್ತದೆ. ಈ ಇಲಾಖೆಯಲ್ಲಿ ಇರತಕ್ಕಂತಹ ಒಂದು ಪ್ರಮುಖ ಅಂಗ ವಿಜಯನಗರ ಹಂಪೆ. ವಿಜಯನಗರದ ಹಂಪೆಯ ಪುರಾತನದ ಬಗ್ಗೆ ಹಿಂದಿನ ಸರ್ಕಾರ ಇದಕ್ಕೆ ಒಂದು ಸಮಿತಿಯನ್ನೂ ಕೂಡ ರಚನೆಮಾಡಿ "ಹಂಪೆ ರಿಸರೆಕ್ಷನ್ ಪ್ರಾಜೆಕ್ಟ್ ಅಥಾರಿಟಿ" ಅಂತ ಕರೆದಿತ್ತು. ಆ ಸಮಿತಿ ಪುರಾತನ ವಸ್ತು ಸಂಶೋಧನೆ., ಅದರ ಬಗ್ಗೆ ವಿದ್ಯಾಭ್ಯಾಸದ ಬಗ್ಗೆ ಮತ್ತು ಪ್ರವಾಸಿಗರನ್ನು ಹೆಚ್ಚು ಆ ಕಡೆ ಆಕರ್ಷಣೆ ಮಾಡುವ ಬಗ್ಗೆ ಒಂದು ವಿಶೇಷವಾದ ರೂಪುರೇಷೆಗಳನ್ನು ಕಲ್ಪನೆ ಮಾಡಿತ್ತು. ಈ ಪುರಾತನ ವಸ್ತು ಸಂಶೋಧನಾ ವಿಚಾರದಲ್ಲಿ ಪ್ರಮುಖವಾಗಿ ಹಂಪೆಯಲ್ಲಿರತಕ್ಕಂತಹ ಶಿಲ್ಪಕಲೆ ಅದರ ಹಿಂದಿನ ಗತ ವೈಭವ, ಇವುಗಳ ಬಗ್ಗೆ ಸಂಶೋಧನೆ ಮಾಡಬೇಕಾಗಿದೆ. ಅಲ್ಲಿ ಅನೇಕ ರೀತಿಯ ದೇವಸ್ಥಾನಗಳು ಇವೆ. ಅರಮನೆಗಳು ಮತ್ತು ಬೇರೆ ಬೇರೆ ವಿಶೇಷ ರೀತಿಯಲ್ಲಿರತಕ್ಕಂತಹ ಕಟ್ಟಡಗಳು ಭೂಮಿಯ ಅಡಿಯಲ್ಲಿ ಅಡಗಿರುವುದರಿಂದ ಅವುಗಳನ್ನು ಮೇಲೆ ತೆಗೆದು ಹಿಂದಿನ ವೈಭವದ ಸ್ವರೂಪವನ್ನು ರಾಷ್ಟ್ರದ ಮತ್ತು ಪರ ರಾಷ್ಟ್ರದ ಪ್ರವಾಸಿಗರಿಗೆ ಮತ್ತು ಸಂಶೋಧನಾ ತಜ್ಞರಿಗೆ ಪರಿಚಯ ಮಾಡತಕ್ಕಂತಹ ಒಂದು ದೊಡ್ಡ ಪ್ರಯತ್ನ ಕಳೆದ 2–3 ವರ್ಷಗಳಿಂದ ಅಲ್ಲಿ ನಡೆಯುತ್ತಿದೆ.

ಈ ಬಗ್ಗೆ ಒಂದು ಮಿನಿ ಯೂನಿವರ್ಸಿಟಿ ಮಾಡಬೇಕು, ಮತ್ತು ಇದಕ್ಕಾಗಿ ಒಂದು ಸಂಶೋಧನಾ ಸಂಸ್ಥೆಯನ್ನೂ ಕೂಡ ಮಾಡಬೇಕು ಎಂದು 6 ಎಕರೆ ಜಾಗವನ್ನೂ ಸಹ ಸ್ವಾಧೀನಕ್ಕೆ ತೆಗೆದುಕೊಂಡು ಈ ಬಗ್ಗೆ ಒಂದು ಯೋಜನೆಯನ್ನೂ ಸಹ ಹಿಂದಿನ ಸರ್ಕಾರ ಮಂಜೂರು ಮಾಡಿತ್ತು. ಈ ಕೆಲಸ ಈಗ ಯಾವ ಹಂತ ದಲ್ಲಿ ಇದೆ ? ಈ ವರದಿಯಲ್ಲಿ ಅದರ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಿದಂತೆ ಕಾಣುತ್ತಾ ಇಲ್ಲ. ಅಷ್ಟೇ ಅಲ್ಲದೆ ಇನ್ನೂ ಬೇರೆ ಬೇರೆ ರೀತಿಯಾದ ಕೆಲಸಗಳಿಗೆ ಅದನ್ನು ಅಗೆಯುವ ಕೆಲಸವೂ ಸಹ ಸ್ವಲ್ಪ ಮಟ್ಟಿಗೆ ಆಗಿತ್ತು. ಆದರೆ ಅದನ್ನು ಮುಂದುವರೆಸುವುದಕ್ಕೆ ಅಲ್ಲಿಯ ಸ್ಥಳೀಯ ಜನರು ಸ್ವಲ್ಪ ಆಕ್ಷೇಪಣೆ ಮಾಡಿದರು. ಕಾರಣ ಆ ಸ್ಥಳೀಯ ಜನರು ತಮ್ಮನ್ನು ಎಲ್ಲಿ ಓಡಿಸುತ್ತಾರೋ ಅನ್ನುವ ಅನುಮಾನ ಬಂದಿದ್ದರಿಂದ ಆಕ್ಷೇಪಣೆ ಮಾಡಿದರು. ಆದರೆ ಇಂತಹ ಕಾರ್ಯಕ್ರಮಗಳನ್ನು ಮಾಡುವಾಗ ಆ ಜನರನ್ನೂ ಸಹ ವಿಶ್ವಾಸಕ್ಕೆ ತೆಗೆದು ಕೊಂಡು ಈ ಕೆಲಸ ಆಗಲೇಬೇಕಾದ ಕೆಲಸ ಎಂದು ಸಮಾಧಾನ ಪಡಿಸಿ ಮಾಡಬೇಕು. ಅದು ಬಹಳ ಮಹತ್ವದ ಕೆಲಸ, ಇದರ ಅವಶ್ಯಕತೆ ಇದೆ, ಈ ಕೆಲಸವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಹಂಪೆಯ

ಜೀರ್ಣೋದ್ಧಾರದ ಯೋಜನೆಯ ಪ್ರಾಧಿಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗ ತಾವು ಎಷ್ಟು ಬಾರಿ ಸಭೆ ಕರೆದಿದ್ದೀರಿ ಮತ್ತು ಸಾಧನೆ ಏನು ಮಾಡಿದ್ದೀರಾ ? ಮತ್ತು ಈ ವರ್ಷದಲ್ಲಿ ಅದರ ಬಗ್ಗೆ ಏನು ಕಾರ್ಯಕ್ರಮ ಮಾಡಬೇಕು ಅಂತ ಹೊರಟಿದ್ದೀರಾ ಎನ್ನುವ ಬಗ್ಗೆ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಬಹು ಪ್ರಾಮುಖ್ಯವಾದ ವಿಚಾರ ಏನೆಂದರೆ ಗೋಕಾಕ್ ವರದಿಯನ್ನು ಸಂಪೂರ್ಣವಾಗಿ ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುತ್ತೇವೆ ಅಂತ ಹೇಳಿ ತಾವು ಅಧಿಕಾರಕ್ಕೆ ಬಂದಿದ್ದೀರಿ. ಈ ವಿಚಾರದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಸಾಕಷ್ಟು ಹೇಳಿಕೆಗಳನ್ನು ಕೊಟ್ಟದ್ದು ಪತ್ರಿಕೆಗಳ ಮುಖಾಂತರ ಓದಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಬಿ. ರಾಚಯ್ಯನವರು ಬೇರೆ ಬೇರೆ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ಇದು ಹೈಕೋರ್ಟಿನಲ್ಲಿರುವುದರಿಂದ ಇದನ್ನು ಅಮಾನತ್‌ನಲ್ಲಿಟ್ಟಿದ್ದೇವೆ, ಈಗ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು. ಮಾನ್ಯ ಶಿಕ್ಷಣ ಸಚಿವರು ಏನು ಹೇಳಿದ್ದಾರೆ ಎಂದರೆ ಇಲ್ಲ; ಇಲ್ಲ ಈ ಗೋಕಾಕ್ ವರದಿಯನ್ನು ಜಾರಿಗೆ ತರಲಿಕ್ಕೆ ಹಿಂದಿನ ಸರ್ಕಾರ ಏನು ಆಜ್ಞೆ ಮಾಡಿದೆ ಅದರಂತೆ ಈಗಾಗಲೇ ಜಾರಿಗೆ ಕೊಟ್ಟಿದ್ದೇವೆ ಎಂದು. ಈ ರೀತಿಯಾಗಿ ಇಬ್ಬರ ಹೇಳಿಕೆಗಳೂ ಬೇರೆ ಬೇರೆಯಾಗಿವೆ. ಆದರೆ ನಾನು ಇದರ ಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಕೂಡ ನಾನು ನೋಡಿದರೆ ಈ ಗೋಕಾಕ್ ಸಮಿತಿಯ ವಿಚಾರದಲ್ಲಿ ಹಿಂದಿನ ಸರ್ಕಾರ ಏನು ಒಂದು ಹುಕುಂ ಅನ್ನು ಕೊಟ್ಟಿದೆ ಅಂದರೆ 31–4–1982 ರಂದು ಸರ್ಕಾರಿ ಆಜ್ಞೆಯನ್ನು ಬಿಟ್ಟರೆ ಗೋಕಾಕ್ ವರದಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಈ ಸರ್ಕಾರ ಬಂದು 9 ತಿಂಗಳಾದರೂ ಕೂಡ ಯಾವುದೇ ರೀತಿಯಲ್ಲಿ ಆಗಲಿ ಒಂದು ಸರ್ಕಾರೀ ಆಜ್ಞೆಯೂ ಕೂಡ ಹೊರಬಿದ್ದಿಲ್ಲ. ಒಂದು ವಿಷಯ ಏನೆಂದರೆ ಈ ಗೋಕಾಕ್ ಸಮಿತಿಯ ಕೆಲವು ವಿಚಾರಗಳ ಮೇಲೆ ಹಿಂದಿನ ಸರ್ಕಾರ ಆಜ್ಞೆ ಕೊಟ್ಟಿದೆ. ಹಿಂದಿನ ಸರ್ಕಾರೀ ಆಜ್ಞೆಯನ್ನು ಜಾರಿಗೆ ತರಲಿಕ್ಕೆ ಕೆಲವು ವಿಚಾರದ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇ ಕೊಟ್ಟಿದ್ದಾರೆ. ಆದರೆ ಈ ಗೋಕಾಕ್ ವರದಿಯ ಒಂದು ಸಮಗ್ರ ವಿಚಾರದಲ್ಲಿ ಕೆಲವು ವಿಚಾರಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅಡ್ಡಿ ಏನೂ ಆಗಲಾರದು. ಅಲ್ಲದೇ ಈಗ ಸ್ಟೇ ಆರ್ಡರ್ ಮಾಡಿದ್ದಾರಲ್ಲಾ ಆ ಕೇಸಸ್ ಬಗ್ಗೆ ವೆಕೇಟ್ ಮಾಡಿಸುವುದಕ್ಕೆ ಇನ್ನೂ ಆಗಿಲ್ಲ. ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಾ ? ಈ ಬಗ್ಗೆ ರಾಷ್ಟ್ರಕವಿ ಶ್ರೀ ಕುವೆಂಪುರವರೂ ಸಹ ತಮ್ಮ ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಗೋಕಾಕ್ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದಂಥಾ ಈ ಸರ್ಕಾರ ಇದರ ತತ್ವ ಮತ್ತು ಸ್ಫೂರ್ತಿ ಬಗ್ಗೆ ಒಂದು ಹೆಜ್ಜೆಯನ್ನೂ ಸಹ ಮುಂದೆ ಇಟ್ಟಿಲ್ಲ. ಅದರ ಬದಲಾಗಿ ಹಿಂದೆ ಹಿಂದಕ್ಕೆ ಹೆಜ್ಜೆ ಇಟ್ಟಿದ್ದಾರೆ. ಇವರ ಪ್ರಾಮಾಣಿಕತೆಯ ಅಭಿಪ್ರಾಯ ಏನು ಎನ್ನುವುದು 9 ತಿಂಗಳಿಂದ ಈ ಸರ್ಕಾರ ನಡೆಸತಕ್ಕಂಥಾ ನಡವಳಿಕೆಗಳಿಂದ ಗೊತ್ತಾಗುತ್ತದೆ. ಇವತ್ತು ಈ ವಿಚಾರದಲ್ಲಿ ಹೇಳುವುದೇನೆಂದರೆ ಅವರು ಹೇಳತಕ್ಕಂಥಾ ಮಾತಿಗೂ ಮತ್ತು ಕೃತಿಗೂ ಯಾವ ತರಹದ ಹೊಂದಾಣಿಕೆಯೂ ಇಲ್ಲ. ಇದರ ಬಗ್ಗೆ ಉದಾಹರಣೆ ಕೊಡುತ್ತೇನೆ. ಅನೇಕ ಕಡೆಗಳಲ್ಲಿ ಇವರು ಏನು ಹೇಳಿದ್ದಾರೆ ಎಂದರೆ ನಾವು ಇನ್ನು ಮುಂದೆ ಇಂಗ್ಲೀಷ್ ಶಾಲೆಗಳಿಗೆ ಅನುಮತಿ ಕೊಡುವುದಿಲ್ಲ ಅಂತ. ನಾನು ಅವರು ಹೇಳಿದಂಥಾ ಎಲ್ಲಾ ವಿವರಗಳನ್ನೂ ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಸ್ವಲ್ಪ ವಿಚಾರ ಮಾತ್ರ ಪ್ರಸ್ತಾಪ ಮಾಡುತ್ತೇನೆ. ಲೋಂಡಾದಲ್ಲಿ ಒಂದು ಇಂಗ್ಲೀಷ್ ಮಾಧ್ಯಮ ಶಾಲೆಯನ್ನು ತೆರೆಯುವುದಕ್ಕೆ ಈ ಸರ್ಕಾರದವರು 22–4–1983 ರಂದು ಅನುಮತಿ ಕೊಟ್ಟಿದ್ದಾರೆ. ಎಜುಕೇಷನ್ ಕಮೀಷನರ್‌ರವರಿಂದ ಈ ಆಜ್ಞೆ ಬಂದಿದೆ. ಹಾಗೆಯೇ ಬೆಳಗಾಂನ ಯಮುನಾಪುರದಲ್ಲೂ ಕೂಡ ಒಂದು ಇಂಗ್ಲೀಷ್ ಪ್ರೈಮರಿ ಶಾಲೆಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರೀ ಆಜ್ಞೆಯಾಗಿದೆ. ಸರ್ಕಾರೀ ಕಾಗದದ ಆಜ್ಞೆ 7–5–1983ರ ಪ್ರಕಾರ ಇಂಗ್ಲೀಷ್ ಮಾಧ್ಯಮಿಕ ಶಾಲೆಗಳನ್ನು ಸ್ಥಾಪನೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಮೊದಲು ಅವರು ಏನು ಹೇಳಿದರು ಎಂದರೆ ಇನ್ನುಮುಂದೆ ತಾವು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಯಾವುದೇ ಹಂತದಲ್ಲಾಗಲೀ ಜಾರಿಗೆ ತರಲಿಕ್ಕೆ ಅವಕಾಶ ಕೊಡುವುದಿಲ್ಲ ಎಂದು. ಈಗ ಇವರು ಮಾಡಿರುವುದಾದರೂ ಏನು ? ಅದು ಕೃತಿಯಲ್ಲಿ ಬಂದಾಗ ಗೊತ್ತಾಗುತ್ತದೆ. ಮಾನ್ಯ ವಿದ್ಯಾಸಚಿವರು ಉತ್ತರ ಕೊಡುವಾಗ ಈ ವಿಚಾರದಲ್ಲಿ ಹೇಳಬೇಕು. ಇದರ ಬಗ್ಗೆ ನಾನು ಒಂದು ವಿಚಾರ ಕೇಳಬಯಸುತ್ತೇನೆ: ನೀವು ಈ ವಿಚಾರದಲ್ಲಿ ಆಲೋಚನೆ ಮಾಡದೇ ಮಾಡಿದ್ದೀರಾ ಅಥವಾ ಅಪ್ರಮಾಣಿಕವಾಗಿ ನಡೆದುಕೊಳ್ಳತಕ್ಕಂಥಾ ರೀತಿಯಲ್ಲಿ ಕೆಲಸ ಮಾಡುತ್ತಿದ್ದೀರಾ ಎಂದು. ತಾವು ನಡೆದುಕೊಳ್ಳತಕ್ಕಂಥಾ ವರ್ತನೆ ಇದಕ್ಕೆ ಸಾಕ್ಷೀಭೂತವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಈ ಸರ್ಕಾರದಲ್ಲಿ ಯಾವುದೇ ರೀತಿಯಲ್ಲಿಯೂ ಹೊಂದಾಣಿಕೆ ಇಲ್ಲ ಅನ್ನುವುದು ತೋರಿಸುತ್ತದೆ. ಈ ಸರ್ಕಾರದ ಈ ಒಂದು ದಿಸೆಯಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕು. ಒಂದು ಭಾಷಾನೀತಿಯನ್ನು ಅನುಷ್ಠಾನಕ್ಕೆ ತರುವಾಗ ಎಷ್ಟೇ ನಿಷ್ಠೂರವಾದರೂ ಕೂಡ ನಿಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ ಅದನ್ನು ಜಾರಿಗೆ ತರುವ ಹಾಗೆ ಮಾಡಬೇಕು. ಇಲ್ಲದೇ ಹೋದರೆ ನಿಮ್ಮಲ್ಲಿ ಪ್ರಾಮಾಣಿಕತೆಯ ಪ್ರಶ್ನೆಯೇ ಇಲ್ಲ, ಒಂದು ಭಾಷಾ ನೀತಿಯಲ್ಲಿ ಒಂದು ನಿರ್ದಿಷ್ಟವಾದ ನೀತಿ ಇಲ್ಲ; ಹಾಗೆಯೇ ವಿದ್ಯೆಯಲ್ಲೂ ಕೂಡಿ ಒಂದು ನಿರ್ದಿಷ್ಟವಾದ ನೀತಿ ಇಲ್ಲ ಎಂದು ಹೇಳಿದರೆ ತಪ್ಪಾಗ

ಲಾರದು. ಏತಕ್ಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ರೀತಿಯಲ್ಲಿ ಹೇಳುವುದು, ಮಾನ್ಯ ಶಿಕ್ಷಣ ಸಚಿವರು ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದು, ಅಲ್ಲದೆ, ನಿಮ್ಮ ಸಚಿವ ಸಂಪುಟದಲ್ಲೇ ಕಾರ್ಮಿಕ ಮಂತ್ರಿಗಳು ಒಂದು ರೀತಿಯಲ್ಲಿ ಹೇಳುವುದು, ಲೋಕೋಪಯೋಗಿ ಇಲಾಖಾ ಮಂತ್ರಿಗಳು ಒಂದು ರೀತಿಯಲ್ಲಿ ಹೇಳುವುದು. ಹೀಗೆ ಭಾಷಾ ವಿಷಯದಲ್ಲಿ ಸರ್ಕಾರದಲ್ಲೇ ವಿವಿಧವಾದ ಧ್ವನಿಗಳು ಕಂಡು ಬರುತ್ತಾ ಇದೆ. ಅದರ ಬಗ್ಗೆ ಅನೇಕ ಮುಖಗಳು ತಲೆ ಎತ್ತಿವೆ. ಮನುಷ್ಯನಿಗೆ ಮುಖ ಇರುವುದು ಒಂದೇ. ದಶಕಂಠರಾಕ್ಷಸನಿಗೆ ಬಹುಮುಖ ಇದ್ದ ಹಾಗೆ ಸರ್ಕಾರದಲ್ಲಿಯೂ ಈ ವಿಷಯಗಳಲ್ಲಿ ವಿಭಿನ್ನ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂಥ ತಲೆಗಳು ಮಂತ್ರಿಮಂಡಲದಲ್ಲೇ ಎದ್ದಿವೆ ಎಂದು ಕಾಣುತ್ತದೆ.

ಉಪಾಧ್ಯಕ್ಷರು.—ಇದು ಪ್ರಜಾಪ್ರಭುತ್ವ. ಇನ್ನು ರನ್ನಿಂಗ್ ಕಾಮೆಂಟರಿ ಮಾಡುವುದು ಬೇಡ. ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಪ್ರಜಾಪ್ರಭುತ್ವ ಅಲ್ಲ, ಭೂತಪ್ರಭುತ್ವ.

ಶ್ರೀ ರಾಮಕೃಷ್ಣ ಹೆಗಡೆ.—ದೇಶಕ್ಕೆಲ್ಲಾ ಒಂದು ತಲೆ ಎಂದು ನಂಬಿಕೊಂಡಿರುವವರು ಕಾಂಗ್ರೆಸ್ಸಿನವರು ಮಾತ್ರ.

ಶ್ರೀ ಎಸ್. ಬಂಗಾರಪ್ಪ.—ತಲೆ ಇರುವುದು ಒಂದೇ ಆದರೂ ಏಕಮುಖದಲ್ಲಿ ನಿಮಗೆ ನಂಬಿಕೆ ಇಲ್ಲ. ತಮಗೆ ಯಾವಾಗಲೂ ಬಹುಮುಖದಲ್ಲೇ ನಂಬಿಕೆ ಇರುವುದು ಜಾಸ್ತಿ. ರಾವಣನಿಗೆ 10 ಮುಖ ಇದ್ದ ಹಾಗೆ ಅವರಿಗೆ ಇರುವುದು.

ಶ್ರೀ ರಾಮಕೃಷ್ಣ ಹೆಗಡೆ.—ಅದೇ ತಪ್ಪು. ರಾವಣನಿಗೆ 10 ಮುಖ ಇರಲಿಲ್ಲ. 10 ತಲೆ ಇದ್ದದ್ದು ಏತಕ್ಕೆಂದರೆ ಅವನು ಅಂಥಾ ಮಹಾಪಂಡಿತ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮೌಢ್ಯತನಕ್ಕೆ ನಾನೇನು ಹೇಳಬೇಕೋ. ಮುಖ ಇಲ್ಲದೆ ತಲೆ ಇರುವುದಕ್ಕೆ ಹೇಗಾಗುತ್ತದೆ ? ಸ್ವಾಮಿ, ನನಗಂತೂ ಗೊತ್ತಿಲ್ಲ. ಮುಖವನ್ನು ಕ್ಯಾನ್ಸಲ್ ಮಾಡಿ ತಲೆ ಅಂತ ವ್ಯಾಖ್ಯಾನ ಮಾಡಿದರೆ ನಾವು ಏನು ಮಾಡುವುದಕ್ಕಾಗುತ್ತದೆ ? ರಾವಣನ ತಲೆಯನ್ನಾಗಲೀ ಮುಖವನ್ನಾಗಲೀ ಇವರು ನೋಡಿದ್ದಾರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಏನಾದರೂ ಕೂಡ ರಾವಣನ ಚಿತ್ರ ತೆಗೆದದ್ದನ್ನು ನೋಡಿದ್ದರೇನು ? ಮತ್ತು ಆ ರಾವಣನ ಚಿತ್ರ ತೆಗೆದ ಫೋಟೋಗ್ರಾಫರ್ ಯಾರು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ರಾವಣ ಅಪ್ರತಿಮ ಪಂಡಿತ, ಅದರ ಕುರುಹು ಆಗಿ ಅವನ ತಲೆಯಲ್ಲಿ ಹತ್ತು ತಲೆಯಲ್ಲಿರುವ ಮೆದುಳು ಇತ್ತು. ಅದಕ್ಕಾಗಿ ಅವನಿಗೆ ಹತ್ತು ತಲೆಯನ್ನು ತೋರಿಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಬಂಗಾರಪ್ಪನವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಮಾಡಿದಂಥ ವಾದವನ್ನು ನಾನು ಒಪ್ಪುವುದಿಲ್ಲ. ನಾನು ಕದಂಬ ಎಂದು ಹೇಳುತ್ತೇನೆ. ಕದಂಬ ಎಂದರೆ ಮುಖವೇಗೊತ್ತಾಗುವುದಿಲ್ಲ, ಇವರು ಕದಂಬ ಸ್ವರೂಪವಾದಂಥ ಭಾಷಾ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಹೇಳಿದರೆ ಅದು ಯಾವ ವಾದಕ್ಕೂ ಅವಕಾಶ ಕೊಡುವುದಿಲ್ಲ. ಇವತ್ತು ಈ ಸರ್ಕಾರದವರು ಕದಂಬ ಸ್ವರೂಪದ ಭಾಷಾ ನೀತಿಯನ್ನು ಬೋಧಿಸುತ್ತಿದ್ದಾರೆ. ಇದರಿಂದ ದೇಶದಲ್ಲಿ ಅತ್ಯಂತ ಗೊಂದಲಮಯವಾದ ಪರಿಸ್ಥಿತಿಯನ್ನು ಈ ವಿಚಾರದಲ್ಲಿ ಕಲ್ಪಿಸಿಕೊಂಡಿದ್ದಾರೆ ಎಂದು ಹೇಳಿದರೆ ಅದು ಖಂಡಿತವಾಗಿಯೂ ತಪ್ಪಾಗುವುದಿಲ್ಲ. ಆದ್ದರಿಂದ ಇವರು ಕಳೆದ 9 ತಿಂಗಳುಗಳಿಂದ ಒಂದು ನಿರ್ದಿಷ್ಟವಾದ ಭಾಷಾ ನೀತಿಯನ್ನು ಹಾಕಿಕೊಂಡಿಲ್ಲ. ಏನಾದರೂ ಮಗು ಹುಟ್ಟಬೇಕಾದರೆ 9 ತಿಂಗಳು ಬೇಕಾಗುತ್ತದೆ, ಇವರದು 9 ತಿಂಗಳಾದರೂ ಇನ್ನೂ ಮಗು ಕೂಡ ಹುಟ್ಟಿಲ್ಲ. ಇವರು ಬಂಜೆಯ ತರಹ ಈ ವಿಷಯದಲ್ಲಿ ತೋರಿಸಿಕೊಂಡಿದ್ದಾರೆ.

ಶ್ರೀ ಪಿ. ರಾಮ್‌ದೇವ್.—ನೀವು ಆಡಳಿತದಲ್ಲಿದ್ದಾಗ ಷಂಡರಾಗಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—9 ತಿಂಗಳಾದರೂ ಇವರು ಇನ್ನೂ ಗರ್ಭತಾಳಿಲ್ಲ ಎಂದು ಹೇಳಲಿಕ್ಕೆ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಹನುಮಂತರಾವ್ ದೇಸಾಯಿ.—ಇನ್ನೊಂದು ಹತ್ತು ದಿವಸ ತಡೆಯಿರಿ. ಎಂಥ ಗಂಡು ಮಗು ಹುಟ್ಟುತ್ತದೆಯೆಂದು ನಿಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಈ ಮಧ್ಯೆ ಅಬಾರ್ಷನ್ ಆದರೆ ತಾವೇನು ಜವಾಬ್ದಾರಿಯನ್ನು ಹೊರುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಬಾರ್ಷನ್ ಆಗುವುದು ಹೋಗಲಿ, ಹುಟ್ಟಬೇಕಾದ್ದು ಬ್ರಹ್ಮ ರಾಕ್ಷಸ ಹುಟ್ಟಿದರೆ ಏನು ಮಾಡುವುದು ? ಅಧ್ಯಕ್ಷರೇ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬೇರೆ ಬೇರೆ ಮಂತ್ರಿಗಳು ಬೇರೆ ಬೇರೆ ರೀತಿಯಲ್ಲಿ ಭಾಷಾ ವಿಚಾರದಲ್ಲಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ.

ಶ್ರೀ ಬಿ. ಹೆಚ್. ಲಕ್ಷ್ಮಯ್ಯ.—ದುಷ್ಟನಿಗ್ರಹ ಶಿಷ್ಟಪರಿಪಾಲನೆ ಎಂದು ಕೇಳಿದ್ದೀರಲ್ಲ; ಅದಕ್ಕೆ ಸ್ವಲ್ಪ ತಡೆಯಿರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ರೀತಿಯಾಗಿ ಭಾಷಾ ಪ್ರಶ್ನೆ ತ್ರಿಶಂಕುವಾಗಿ ಉಳಿದಿದೆ. ಈ ವಿಚಾರದಲ್ಲಿ ಅಲ್ಪಸಂಖ್ಯಾತರಿಗೆ ಅನುಮಾನ ಕೂಡ ಬಂದಿದೆ. ಚುನಾವಣೆ ಬಂದಾಗ ಗೋಕಾಕ್ ವರದಿಯನ್ನು ನಾವು ಸಂಪೂರ್ಣವಾಗಿ ಅನುಷ್ಠಾನ ಮಾಡುತ್ತೇವೆಂದು ಹೇಳಿದ್ದಾರೆ. ಆಮೇಲೆ ಬೇರೆ ಬೇರೆ ವಿಚಾರವನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಇವರು ಸಣ್ಣ ಹಸುಳೆಯ ತರಹ ಒಂದು ಅಸ್ಥಿರತೆಯ ದಿಕ್ಕಿನಲ್ಲಿ ಉಯ್ಯಾಲೆ ತೂಗತಕ್ಕ ವ್ಯವಹಾರವನ್ನು ಏನು ಮಾಡುತ್ತಿದ್ದಾರೆ, ಇದರಿಂದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅತೀ ದೊಡ್ಡ ಗೊಂದಲವಾಗಿದೆ. ಇದು ಸಹಜವಾಗಿಯೂ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಒಂದು ರೀತಿಯ ಭಯ, ಶಂಕೆಯನ್ನು ಹುಟ್ಟಿಸಿದೆ ಎಂದು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಭಾಷಾ ವಿಚಾರವನ್ನು ತಾವು ನಿಷ್ಕರ್ಷೆ ಮಾಡದೆ ನಿಮಗೆ ಹಣ ಕೊಡತಕ್ಕ ವಿಚಾರದಲ್ಲಿ ನಾವು ಹಿಂದು ಮುಂದು ನೋಡಬೇಕಾಗಿದೆ. ಈ ಹಣದ ಉಪಯೋಗವನ್ನು ನೀವು ಮಾಡಿಕೊಂಡು ವಿದ್ಯಾ ಕ್ಷೇತ್ರದಲ್ಲಿ ಮತ್ತಷ್ಟು ಗೊಂದಲವನ್ನು ಮಾಡುವುದಾದರೆ ಅದಕ್ಕೆ ಖಂಡಿತವಾಗಿಯೂ ನಾವು ಒಪ್ಪಿಗೆಯನ್ನು ಕೊಡುವುದಕ್ಕಾಗುವುದಿಲ್ಲ.

ಇನ್ನು ನಾನು ಬಹಳ ಸೂಕ್ಷ್ಮವಾದ ವಿಚಾರವನ್ನು ಇಲ್ಲಿ ಎತ್ತಲಿಕ್ಕೆ ಬಯಸುತ್ತೇನೆ. 1980 ರಲ್ಲಿ ಯೂನಿವರ್ಸಿಟಿ ಎಜುಕೇಷನ್ ಮಟ್ಟದಲ್ಲಿ ಒಂದು ರೆವ್ಯೂ ಕಮಿಷನ್ ನೇಮಕವಾಗಿತ್ತು. ಅದರ ವರದಿಯನ್ನು ಅದರ ಅಧ್ಯಕ್ಷರಾದ ಡಾ|| ರಾಜ್ ಅವರು ಕೊಟ್ಟು ಕಳೆದ ವರ್ಷ 31-7-1982 ರಂದು ಸದನದ ಸದಸ್ಯರಿಗೂ ಕೊಡಲಾಗಿತ್ತು. ಅದರ ಕೆಲವು ಭಾಗಗಳನ್ನು ನಮ್ಮ ಸರ್ಕಾರ ಇರುವಾಗ ಅನುಷ್ಠಾನ ಮಾಡಿದ್ದೆವು. ಅದರಲ್ಲಿ ಡಾ|| ಜಗನ್ನಾಥರೆಡ್ಡಿ ಮತ್ತು ಇನ್ನೂ ಅನೇಕ ಶಿಕ್ಷಣ ತಜ್ಞರು ಒಮ್ಮತದಿಂದ ಒಂದು ವರದಿಯನ್ನು ಕೊಟ್ಟಿದ್ದರು.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರದವರು ಕೊಟ್ಟಿರುವ ವರದಿಯಲ್ಲಿ ಯೂನಿವರ್ಸಿಟಿ ಎಜುಕೇಷನ್ ಬಗ್ಗೆ ಅದರಲ್ಲಿಯೂ ಬೆಂಗಳೂರು ಯೂನಿವರ್ಸಿಟಿಯ ಬಗ್ಗೆ ಕರ್ನಾಟಕ ಯೂನಿವರ್ಸಿಟಿಯ ಬಗ್ಗೆ ಮತ್ತು ಮಂಗಳೂರು ಯೂನಿವರ್ಸಿಟಿಯ ಬಗ್ಗೆ ಎಷ್ಟು ವಿಚಾರಗಳನ್ನು ಕೊಟ್ಟಿದ್ದಾರೆ ಎಂದು ನಾವು ನೋಡಬಹುದು. ಇನ್ನು ಗುಲ್ಬರ್ಗ ಯೂನಿವರ್ಸಿಟಿಯ ವಿಷಯ ಎಷ್ಟು ಇದೆ ಎಂದು ತಾವೇ ನೋಡಿ. ಎಲ್ಲಾದ್ದನ್ನೂ ಇವರು ಕಂಡೆನ್ಸ್ ಮಾಡಿಬಿಟ್ಟಿದ್ದಾರೆ.

ಶ್ರೀ ಪಿ. ರಾಮ್‌ದೇವ್.—ಅದು ಅಟಾನಮಸ್ ಬಾಡಿ ಅಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ವರದಿಯ ಕೆಲವು ಅಂಶಗಳನ್ನು ನಾವು ಜಾರಿ ಮಾಡಿದ್ದೇವೆ. ಇದರಲ್ಲಿ ಸ್ವಲ್ಪ ಪ್ರಮುಖವಾದ ಅಂಶವೆಂದರೆ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡತಕ್ಕದ್ದು. ಇದಲ್ಲದೆ ಅವರು ಇನ್ನೂ ಕೆಲವು ವಿಚಾರಗಳನ್ನು ರೆಕಮೆಂಡ್ ಮಾಡಿದ್ದಾರೆ. ಈ ಕ್ಯಾಪಿಟೇಷನ್ ಫೀಯನ್ನು ಪ್ರೋಗ್ರೆಸ್ಸಿವ್‌ನಲ್ಲಿ ರದ್ದುಮಾಡಬೇಕು ಎಂದು ಅವರು ವರದಿಯನ್ನು ಕೊಟ್ಟಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ನಾವು ಮೆಡಿಕಲ್ ಕಾಲೇಜುಗಳಲ್ಲಿ ಅಥವಾ ಪ್ರೊಫೆಷನಲ್ ಕಾಲೇಜುಗಳಲ್ಲಿ ಈ ವಂತಿಗೆ ಶುಲ್ಕವನ್ನು ರದ್ದುಮಾಡತಕ್ಕದ್ದರ ಬಗ್ಗೆ ಒಂದು ನೀತಿಯನ್ನು ನಿರೂಪಿಸಿದ್ದೇವೆ. ಏಕೆಂದರೆ ಯಾವುದೇ ಸರ್ಕಾರದಲ್ಲಿ ಅಥವಾ ನಮ್ಮ ವಿದ್ಯಾ ಇಲಾಖೆಯಲ್ಲಿ ಯೂನಿವರ್ಸಿಟಿಗೆ ಸಂಬಂಧಪಟ್ಟ ವಿಚಾರದಲ್ಲಿ ರೆವ್ಯೂ ಕಮಿಷನ್‌ರವರು ಏನು ಪ್ರಮುಖವಾದಂಥ ಕೆಲವು ವಿಚಾರಗಳನ್ನು, ಸೂಚನೆಗಳನ್ನು ಕೊಟ್ಟಿದ್ದರೋ ಅವುಗಳನ್ನು ಅನುಷ್ಠಾನ ಮಾಡತಕ್ಕ ದೃಷ್ಟಿಯಲ್ಲಿ ಹಿಂದಿನ ಸರ್ಕಾರ ಪ್ರಯತ್ನ ಕೂಡ ಮಾಡಿತ್ತು. ಆದರೆ ಇಲ್ಲಿ ನಿಮಗೆ ಕ್ಯಾಪಿಟೇಷನ್ ವಿಚಾರದಲ್ಲಿ ಆಗಲಿ, ಬೇರೆ ವಿಚಾರದಲ್ಲಿ ಆಗಲಿ, ರೆವ್ಯೂ ಕಮಿಷನ್‌ನ ರೆಕಮೆಂಡೇಷನ್ಸ್ ಬೇಕಾಗಿಲ್ಲ. ಭಾಷಾನೀತಿಯಲ್ಲಿ ಬೇರೆ ವಿಚಾರಗಳಲ್ಲಿ ಶಿಕ್ಷಣ ತಜ್ಞರು ಒಂದು ಆಧಾರದ ಮೇಲೆ ಏನು ಒಂದು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಬಿಟ್ಟು ತಾವು ರಾಜಕೀಯದೃಷ್ಟಿಯಿಂದ ನೀತಿಯನ್ನು ಅನುಮೋದಿಸತಕ್ಕ ದೃಷ್ಟಿಕೋನ ಏನು ಇದೆ ಅದನ್ನು ನಾವು ಖಂಡಿಸಬೇಕಾಗುತ್ತದೆ. ಕ್ಯಾಪಿಟೇಷನ್ ವಿಷಯದಲ್ಲಿಯೂ ಸಹ ತಾವು ಕಮಿಷನ್‌ರವರ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ಮಾಡಿಲ್ಲ, ಅವರು ತಮ್ಮ ವರದಿಯಲ್ಲಿ progressively capitation fee should be abolished ಎಂದು ಹೇಳಿದ್ದಾರೆ. ಅದರ ಪ್ರಕಾರ ತಾವು ಕ್ರಮ ತೆಗೆದುಕೊಂಡಿದ್ದೀರಾ ? ಇದನ್ನು ಐದು ವರ್ಷಗಳಲ್ಲಿ ರದ್ದುಮಾಡುತ್ತೇವೆಂದು ನಮಗೆ ಆಶ್ವಾಸನೆಯನು ಕೊಟ್ಟಿದ್ದೀರಿ. ಈ ಆಶ್ವಾಸನೆಯನ್ನು ಸಭೆಯಲ್ಲಿ ಮಂಡಿಸಿದ ಬಿಲ್ಲಿನ ಕೊನೆಯ ಪ್ರಾವಿಸೋದಲ್ಲಿ ಕೊಟ್ಟಿದ್ದಾರೆ.

ಇನ್ನು ಇವರು ಕೊಟ್ಟಿರುವ ವರದಿಯ ಪುಟ 14 ರಲ್ಲಿ ರಿಪೋರ್ಟ್ ಆಫ್ ದಿ ರೆವ್ಯೂ ಕಮಿಷನ್—ಇದರಲ್ಲಿ ಹೊಸ ಯೂನಿವರ್ಸಿಟಿ ನಾನಾ ರೀತಿಯಾದಂಥ ಪ್ರಕ್ಷೋಭೆಗಳಿಗೆ, ನಾನಾ ರೀತಿಯಾದಂಥ ಜಾತಿಯ ಪ್ರಭಾವಗಳಿಗೆ—ಅದು ಹಣದ ಪ್ರಭಾವ ಇರಬಹುದು, ಗುಂಪಿನ ಪ್ರಭಾವ ಇರಬಹುದು—ಈ ಪ್ರಭಾವಗಳ ಪ್ರಪಾತದಲ್ಲಿ ಇದು ತತ್ತರಿಸಿಕೊಂಡು ಹೋಗಿದೆ ಎಂದು ಹೇಳಿದ್ದಾರೆ. ಈ ಪ್ರಭಾವಗಳ ಹಿಡಿತದಿಂದ ಯೂನಿವರ್ಸಿಟಿಯು ಹೊರಗೆ ಯಾವಾಗ ಹೋಗುತ್ತದೆ ಎಂಬುದನ್ನು ಪ್ರಾಮಾಣಿಕವಾಗಿ ಇಲ್ಲಿ ಹೇಳಿಲ್ಲ. ಇದರ ಬಗ್ಗೆ ಇಂಥ ಯಾವ ಒಂದು ಸೂಚನೆಯೂ ಇಲ್ಲಿ ಕಾಣುತ್ತಿಲ್ಲ. ಮೈಸೂರು ಯೂನಿವರ್ಸಿಟಿಯಲ್ಲಿ ಒಬ್ಬ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದ ಡಾ|| ವಿಶ್ವನಾಥಯ್ಯನವರನ್ನು ಬೆಂಗಳೂರು ಯೂನಿವರ್ಸಿಟಿಗೆ ತಂದು ವೈಸ್-ಛಾನ್ಸಲರ್ ಆಗಿ ನೇಮಕ ಮಾಡಿದರು. ಇದನ್ನು ಅನೇಕ ಶಿಕ್ಷಣ ತಜ್ಞರುಗಳ ನಿರ್ಣಯವನ್ನು ತೆಗೆದುಕೊಂಡು ಮಾಡಿದ್ದಾರೆ. ಇಲ್ಲಿ ಒಳ್ಳೆಯ ಶಿಕ್ಷಣ ತಜ್ಞರಿಗೆ ಯಾವ ರೀತಿಯಲ್ಲಿ ಅವರನ್ನು ಒತ್ತಡಗಳ ಸುಳಿಯ ವಿಷ

ವರ್ತುಲದಲ್ಲಿ ಸೇರಿಸಿ ಯಾವ ತರಹ ನುಚ್ಚುನೂರು ಮಾಡಿದ್ದಾರೆನ್ನುವುದಕ್ಕೆ ನಾನು ಈ ಮಾತನ್ನು ಹೇಳಬೇಕಾಗಿದೆ. ಈಗ ಏನಾಗಿದೆ ಅಂದರೆ 1982 ರಲ್ಲಿ ಸಿಂಡಿಕೇಟ್ ಸೆನೆಟ್ ಮೆಂಬರ್‌ಗಳು ಬೆಂಗಳೂರು ಯೂನಿವರ್ಸಿಟಿಯ ಛಾನ್ಸಲರ್‌ರವರಿಗೆ ಒಂದು ಮೆಮೊರ್‍ಯಾಂಡಮ್ ಕೊಟ್ಟರು. ಅವರು ಏನೆಂದು ಕೊಟ್ಟಿದ್ದಾರೆಂದರೆ ಬೆಂಗಳೂರು ಯೂನಿವರ್ಸಿಟಿ ವೈಸ್ ಛಾನ್ಸಲರ್‌ರವರು ನೀತಿನಿಯಮಗಳನ್ನು ಬಿಟ್ಟು ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯವರು ಕೋರ್ಸುಗಳನ್ನು ಮಾಡಲಿಕ್ಕೆ 1981–82 ರಲ್ಲಿ ಅನುಮತಿ ಕೊಟ್ಟರು. ಅದು ಕಾನೂನು ಬಾಹಿರ. ಈ ಒಂದು ವಿಚಾರ ಸದನದಲ್ಲೂ ಬಂತು. ಆಗ ಜಸ್ಟೀಸ್ ಗೋಪಿವಲ್ಲಭ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ಎನ್‌ಕ್ವೈಯಿರಿ ಕಮಿಷನ್ ಮಾಡಿ ಎನ್‌ಕ್ವೈಯರಿ ಮಾಡಲಾಯಿತು. ಎನ್‌ಕ್ವೈಯರಿ ಕಮಿಷನ್ ಕಳೆದ ವರ್ಷ ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಆ ಒಂದು ವರದಿ ಸರ್ಕಾರದಲ್ಲಿದೆ. ಇವತ್ತಿನವರೆಗೆ ಆ ವರದಿಯನ್ನು ಪ್ರಕಟಮಾಡಿಲ್ಲ. ನಮ್ಮ ಸರ್ಕಾರ ಇರುವಾಗಲೇ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ಪ್ರಪೋಸ್ ಮಾಡಿಕೊಂಡು ವರದಿಯನ್ನು ಪ್ರಕಟ ಮಾಡಬೇಕಾಗಿತ್ತು. ವರದಿಯನ್ನು ಪ್ರಕಟಮಾಡಿದ ಮೇಲೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಮಾಡಿರತಕ್ಕ ದೋಷಾರೋಪಣೆ ಸಾಬೀತು ಆಗಿದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾಗಿತ್ತು. ಆ ವರದಿಯನ್ನು ಇಲ್ಲಿಯವರೆಗೆ ಒಳಗಡೆ ಇಟ್ಟುಕೊಂಡು ಪ್ರಕಟಿಸದೆ ಅದನ್ನು ಅನುಷ್ಠಾನ ಮಾಡದೆ ಇರುವುದು ಸರಿಯಲ್ಲ. ಶಿಕ್ಷಣ ತಜ್ಞರಾದಂತಹ ಡಾ॥ ವಿಶ್ವನಾಥಯ್ಯನವರು ಆ ವರದಿಯಲ್ಲಿ ತಪ್ಪಿತಸ್ಥರಲ್ಲವೆಂದು ಬರೆದಿದ್ದಾರೆಯೇ ಅಥವಾ ತಪ್ಪಿತಸ್ಥರೆಂದು ಬರೆದಿದ್ದಾರೆಯೇ ಅದು ಹೊರಗಡೆ ಬರಲಿ. ಅವರು ತಪ್ಪಿತಸ್ಥರಲ್ಲವೆಂದು ವರದಿಯಲ್ಲಿ ಬರೆದಿದ್ದರೆ ಅವರು ದೋಷಮುಕ್ತರಾಗುತ್ತಾರೆ, ಮತ್ತು ಅವರಿಗೆ ಒಳ್ಳೆಯ ಶಿಕ್ಷಣ ತಜ್ಞರೆಂದು ಹೆಸರು ಬರಬಹುದು. ಜನತಾ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ಕಮಿಷನ್‌ಗಳಿಗೆ ಬಹಳ ಪ್ರಾಮುಖ್ಯತೆ ಕೊಡುತ್ತೇವೆಂದು ಹೇಳಿದಂತಹವರು ಕಮಿಷನ್ ಕೊಟ್ಟಂತಹ ವರದಿಯನ್ನು ಅನುಷ್ಠಾನಕ್ಕೆ ತಂದಿಲ್ಲ. ನೀವು ಕಮಿಷನ್‌ಗೆ ಪ್ರಾಮುಖ್ಯತೆ ಕೊಡುವಂತಹ ಜನ ಅಧಿಕಾರಕ್ಕೆ ಬಂದು 8 ತಿಂಗಳುಗಳು ಆಗಿಹೋಯಿತು. ನಿಮಗೆ ಇದರ ಬಗ್ಗೆ ಯಾರ ಒತ್ತಡವಿದೆ ? ಅವರಿಗೆ ಆಗತಕ್ಕ ತೇಜೋವಧೆ ಶಿಕ್ಷೆಯನ್ನು ತಪ್ಪಿಸಬೇಕು ಎನ್ನುವ ಗೂಡಾರ್ಥದಿಂದ ಆ ವರದಿಯನ್ನು ಅಡಗಿಸಿ ಇಟ್ಟಿದ್ದೀರಾ ? ನಿಮಗೆ ಯಾರ ಭಯವಿದೆ ? ನಿಮ್ಮ ಸರ್ಕಾರಕ್ಕೆ ಕುಂದುಂಟಾಗುತ್ತದೆಯೇ ಅಥವಾ ಯಾರದ್ದಾದರೂ ಭಯವಿದ್ದರೆ ಸಭೆಯ ಮುಂದೆ ಹೇಳಿಬಿಡಿ. ಅದರ ಬಗ್ಗೆ ಇದುವರೆಗೆ ಏನನ್ನೂ ಹೇಳಿಲ್ಲ.

ಶ್ರೀ ಧರ್ಮಸಿಂಗ್.—ರಿಪೋರ್ಟನ್ನು ಪ್ರಕಟ ಮಾಡಲಿಕ್ಕೆ ನಿಮ್ಮ ಕ್ಯಾಬಿನೆಟ್‌ನಲ್ಲಿ ಏನಾದರೂ ಭಿನ್ನಾಭಿಪ್ರಾಯವಿದೆಯೇ ; ಹಾಗಿದ್ದರೆ ಅದಾದರೂ ಹೊರಗಡೆ ಬರಲಿ.

ಶ್ರೀ ಡಾ ॥ ಹೆಚ್. ಎಲ್. ತಿಮ್ಮೇಗೌಡ.—ಈ ರಿಪೋರ್ಟ್ ಯಾವ ಸರ್ಕಾರ ಇದ್ದಾಗ ಬಂತು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಮ್ಮ ಸರ್ಕಾರ ಇದ್ದಾಗಲೇ ವರದಿಯನ್ನು ಒಪ್ಪಿಸಿದ್ದಾರೆ. ಅದನ್ನು ತಾವು ಪ್ರೋಸೆಸ್ ಮಾಡಬೇಕು. ಜಸ್ಟೀಸ್ ಗೋಪಿವಲ್ಲಭ ಅಯ್ಯಂಗಾರ್ ಅವರ ನೇತೃತ್ವದಲ್ಲಿ ಒಂದು ಕಮಿಷನ್ ಮಾಡಲಾಗಿದ್ದು ಅವರು ಕೆಲಸ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಪಬ್ಲಿಷ್ ಮಾಡಕೊಡಬೇಕಾದ್ದು ಮತ್ತು ಅದನ್ನು ಕಾರ್ಯಾಚರಣೆ ಮಾಡಬೇಕಾದ್ದು ಅವಶ್ಯಕತೆ ಇದೆ. ಇವತ್ತು ಡಾ॥ ವಿಶ್ವನಾಥಯ್ಯನವರು ತಪ್ಪಿತಸ್ಥರು ಅಲ್ಲದಿದ್ದರೆ ಅವರು ಮಾನಸಿಕವಾಗಿ ಅನುಭವಿಸತಕ್ಕಂತಹ ತೊಂದರೆಗೆ ತಡೆ ಹಾಕಿದ ಹಾಗೆ ಆಗುತ್ತದೆ. ಕೊಟ್ಟಿರತಕ್ಕ ವರದಿಯನ್ನು ತಮ್ಮ ಮುಂದೆ ಇಟ್ಟುಕೊಂಡು ಶಿಕ್ಷಣ ತಜ್ಞರಾದಂಥ ಡಾ ॥ ವಿಶ್ವನಾಥಯ್ಯನವರನ್ನು ತಮ್ಮ ಕೈಗೊಂಬೆಯನ್ನಾಗಿ ಕುಣಿಸತಕ್ಕ ಒಂದು ಅಭಿಪ್ರಾಯ ತಮಗೆ ಇದ್ದರೆ ಇದೊಂದು ರೀತಿ ಒತ್ತಡವೆಂದು ಹೇಳಬಹುದು.

ಡಾ ॥ ಹೆಚ್. ಎಲ್. ತಿಮ್ಮೇಗೌಡ.—ನಿಮ್ಮ ಸರ್ಕಾರವಿರುವಾಗಲೇ ರಿಪೋರ್ಟ್ ಬಂದರೂ ನೀವು ಏತಕ್ಕೆ ತೀರ್ಮಾನ ತೆಗೆದುಕೊಳ್ಳಲಿಲ್ಲ ? ದಯವಿಟ್ಟು ಅದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಈಗ ಮಾಡಿ. ನಿಮ್ಮ ಕಾಲದಲ್ಲಿ ಅದನ್ನು ಪ್ರೋಸೆಸ್ ಮಾಡಿ, ಆಧುನಿಕ ರೀತಿಯಲ್ಲಿ ಮಾಡಿ, Are you waiting for an opportunity to strike on the Government ? ಅದನ್ನು ಹೀಗೆ ಏಕೆ ಇಟ್ಟಿದ್ದೀರಿ ? ಅವರು ಉತ್ತಮ ಶಿಕ್ಷಣ ತಜ್ಞರು. ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ನೀವು ಯಾವುದೋ ಒತ್ತಡಕ್ಕೆ ಒಳಗಾಗಿ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದೀರಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಏನೊಂದು ಯೂನಿವರ್ಸಿಟಿ ಮಾರ್ಕ್ಸ್ ಸ್ಕ್ಯಾಂಡಲ್ ಆಯಿತು, ಅದರ ಬಗ್ಗೆ ಈಗ ಏತಕ್ಕೆ ಸುಮ್ಮನೆ ಇದ್ದೀರಿ ? ಮಾನ್ಯ ಸದಸ್ಯರಾದ ರಾಮ್‌ದೇವ್‌ರವರಿಗೆ ಯಾವುದೇ ಒತ್ತಡ ಇಲ್ಲ. ನೀವು ಈಗ ಏತಕ್ಕೆ ಸುಮ್ಮನೆ ಇದ್ದೀರಿ ?

ಶ್ರೀ ಪಿ. ರಾಮ್‌ದೇವ್.—ನಮಗೆ ಯಾವುದೇ ಒತ್ತಡವಿಲ್ಲ. ನಾನು ಆ ಕಡೆ ಇದ್ದಾಗಲೂ ಕೇಳಿದ್ದೇನೆ. ಮಾರ್ಕ್ಸ್ ಸ್ಕ್ಯಾಂಡಲ್‌ನಲ್ಲಿ ಸಿಕ್ಕಿಹಾಕಿಕೊಂಡಿರುವವರ ಹೆಸರನ್ನು ಹೇಳಲಿಲ್ಲ. ಈಗ ಅವರ ಮಕ್ಕಳು ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ಇತರೆ ತರಗತಿಗಳಲ್ಲಿ ಓದುತ್ತಿದ್ದಾರೆ. ಅದರಲ್ಲಿ ಗೌರ್ನ್‌ಮೆಂಟ್ ಅಧಿಕಾರಿಗಳ ಮಕ್ಕಳೂ ಇದ್ದಾರೆ.

ಡಾ || ಹೆಚ್. ಎಲ್. ತಿಮ್ಮೇಗೌಡ.—ಮಾರ್ಕ್ಸ್ ಸ್ಕ್ಯಾಂಡಲ್‌ನಲ್ಲಿ ಇಂತಿಂಥವರ ಹೆಸರನ್ನು ಸಿ.ಒ.ಡಿ.ಗೆ ರೆಫರ್ ಮಾಡಬೇಕೆಂದು ಮೊದಲು ಒಂದು ಲಿಸ್ಟ್ ಬಂತು. ಆಮೇಲೆ 8 ದಿವಸ ಆದ ಮೇಲೆ ಯಾರು ಮುಖ್ಯವಾಗಿ ತಪ್ಪುಮಾಡಿದ್ದಾರೆ ಅವರ ಹೆಸರನ್ನು ಬಿಟ್ಟು ಮಿಕ್ಕವರ ಹೆಸರನ್ನು ಸೇರಿಸಿ ಇನ್ನೊಂದು ಪಟ್ಟಿ ಕಳಿಸಲಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು ಅಂತಹದ್ದು ಯಾವುದನ್ನೂ ಮುಚ್ಚುಮರೆ ಮಾಡಲಿಕ್ಕೆ ಹೋಗಲಿಲ್ಲ. ತಾವು ಏತಕ್ಕೆ ಮುಚ್ಚುಮರೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ? ಇವತ್ತು ಮಾರ್ಕ್ ಸ್ಕ್ಯಾಂಡಲ್‌ನಲ್ಲಿ ಯಾರ್ಯಾರು ಸಿಕ್ಕಿಹಾಕಿಕೊಂಡಿದ್ದಾರೆ, ಯಾವ್ಯಾವ ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ ಅವರಿಗೆ ಶಿಕ್ಷೆ ಕೊಡಲಿಕ್ಕೆ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿಕೊಟ್ಟು ಸಿ.ಒ.ಡಿ. ತನಿಖೆ ಮಾಡಿ, ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿಕೊಟ್ಟಿದ್ದು ವರದಿ ಬಂದಿದ್ದರೆ, ಆ ವರದಿಯಲ್ಲಿ ಏನೊಂದು ತೀರ್ಮಾನ ಕೊಟ್ಟಿರುತ್ತಾರೆ. ಅದರ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಕೊಡಿ. ಈಗ ತಾವು ಸುಮ್ಮನೆ ಇರುವುದನ್ನು ಕಂಡು ನಾನು ಅನುಮಾನ ಪಡಬೇಕಾಗಿದೆ. ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆಂದು ಹೇಳುವ ತಾವು ಇಂತಹ ಕೆಲಸಗಳ ಕೈಹಾಕುತ್ತಿದ್ದೀರಿ ಎನ್ನುವ ಸಂಶಯ ಬರುತ್ತಿದೆ. ನಮಗೆ ಇರತಕ್ಕ ಅನುಮಾನವನ್ನು ಪರಿಹಾರ ಮಾಡಬೇಕಾಗುತ್ತದೆ. ಮಾನ್ಯ ಶಿಕ್ಷಣ ಸಚಿವರ ಬಗ್ಗೆ ನಮಗೆ ಗೊತ್ತಿದೆ. ಅವರು ಪ್ರಾಮಾಣಿಕತೆಯಿಂದ ಇದ್ದಾರೆ. ಆದರೆ ತಾವು ದಸ್ಕತ್ ಹಾಕಲಿಕ್ಕೆ ಅನುಮಾನ ಮಾಡುವುದನ್ನು ನೋಡಿದರೆ ಹೊರಗಡೆ ಯಾವುದೋ ಕೈವಾಡವಿದೆ, ಅದಕ್ಕೋಸ್ಕರ ನಿಮ್ಮ ಕೈ ಅಲ್ಲಾಡುತ್ತಿದೆ, ತಾವು ಧೈರ್ಯ ಮಾಡುತ್ತಿಲ್ಲ. ಒಂದು ಸಂಶಯ ಇದೆ. ಸದಸ್ಯರು ಹೇಳುತ್ತಿದ್ದರು ತಮಗೆ ಏತಕ್ಕೆ ಧೈರ್ಯ ಬರುತ್ತಿಲ್ಲ ? ಎಂದು. ಶಿಕ್ಷಣ ಕ್ಷೇತ್ರ ದೊಡ್ಡ ಸಮುದ್ರ, ಆ ಸಮುದ್ರದಲ್ಲಿ ತಿಮಿಂಗಿಲಗಳಿವೆ. ನೀವು ಈ ತಿಮಿಂಗಿಲಗಳಿಗೆ ಹೆದರಿ ಓಡಿ ಹೋಗುತ್ತೀರೇನೋ ಎನ್ನುವ ಅನುಮಾನ ನನಗೆ ಬರುತ್ತಿದೆ. ಆ ತಿಮಿಂಗಿಲಗಳನ್ನು ತಾವು ಹೆದರಿಸುವ ಧೈರ್ಯ ಕೆಚ್ಚು ನಿಮಗೆ ಬರಬೇಕು. ಮಾರ್ಕ್ಸ್ ಸ್ಕ್ಯಾಂಡಲ್‌ನಲ್ಲಿ ಎಂತಹ ಹೀನಾಯವಾದಂತಹ ಕೃತ್ಯವಾಗುತ್ತಿದೆ ಅಂದರೆ ಪ್ರಾಮಾಣಿಕವಾಗಿ ಹಗಲು ರಾತ್ರಿ ಓದಿದಂತಹ ವಿದ್ಯಾರ್ಥಿಗಳಿಗೆ ಹೆಚ್ಚು ಮಾರ್ಕ್ಸ್ ಸಿಗಲಿಕ್ಕೆ ಅವಕಾಶವಿಲ್ಲ. ಯೂನಿವರ್ಸಿಟಿ ಅಧಿಕಾರಿಗಳನ್ನು ಹಿಡಿದು ಹೆಚ್ಚು ಮಾರ್ಕ್ಸ್ ಮತ್ತು ಪಾಸ್‌ಮಾಡಿಕೊಳ್ಳತಕ್ಕಂತಹ ಪ್ರಯತ್ನ ಯಾವುದು ಇದೆ ಇದಕ್ಕಿಂತ ದೊಡ್ಡ ಹೀನಕೃತ್ಯ–ಕೊಲೆ ಬೇರೆ ಇಲ್ಲ. ಇದಕ್ಕೆ ಪರಿಹಾರ ಕಂಡುಹಿಡಿಯದಿದ್ದರೆ ವಿದ್ಯಾ ಕ್ಷೇತ್ರ ಖಂಡಿತವಾಗಿಯೂ ಸುಧಾರಣೆಯಾಗುವುದಿಲ್ಲ.

ಇನ್ನೊಂದು ಸ್ಟೂಡೆಂಟ್ಸ್ ವಿಚಾರದ ಬಗ್ಗೆ ನಾನು ಈಗಲೇ ಹೇಳಬೇಕೆಂದು ಇಚ್ಛೆಪಡುತ್ತಿದ್ದೇನೆ. ಅದು ಏನೆಂದರೆ ಆನ್ಸರ್‌ಸ್ಕ್ರಿಪ್ಟ್‌ಗಳನ್ನು ರೀಪ್ಲೇಸ್ ಮಾಡತಕ್ಕ ಪ್ರಸಂಗಯೂನಿವರ್ಸಿಟಿಯಲ್ಲಿ ನಡೆದಿರತಕ್ಕದ್ದು ಪತ್ರಿಕೆಗಳಲ್ಲಿಯೂ ಬಂದಿದೆ. ಇದರ ಬಗ್ಗೆ ಸಹ ತಾವು ಏನು ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಇದರ ಬಗ್ಗೆ ತಾವು ಎನ್‌ಕ್ವಯರಿ ಮಾಡಿಸಿ, ಯಾರೇ ತಪ್ಪು ಮಾಡಿರಲಿ ಅಂಥವರ ಮೇಲೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ನಾನು ಏನು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಅದಕ್ಕೆಲ್ಲಾ ಸರ್ಕಾರದವರು ಉತ್ತರ ಕೊಡುವಾಗ ಸರಿಯಾದ ಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕ ಉತ್ತರವನ್ನು ಅವರು ಹೇಳಲಿ, ಇದರಲ್ಲಿಯೂ ಕೂಡ ರಾಜಕೀಯ ಮಾಡತಕ್ಕಂತಹ ಕೆಲಸಕ್ಕೆ ಹೋಗುವುದು ಬೇಡವೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಸ್. ರಾಣೆ (ಕಾರವಾರ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ, ಶಿಕ್ಷಣ ಕ್ಷೇತ್ರದ ಒಂದು ಭದ್ರಬುನಾದಿ ಎಂದರೆ ಪೂರ್ವ ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯವಾಗಿದೆ. ಆದರೆ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಯಾವುದೇ ವಿಧವಾದ ಹೆಚ್ಚಿನ ಪ್ರೋತ್ಸಾಹವನ್ನು ಈ ಸರ್ಕಾರದವರು ಕೊಟ್ಟಿರುವ ಹಾಗೆ ಕಂಡು ಬರುತ್ತಿಲ್ಲ. ಈ ಪೂರ್ವ ಪ್ರಾಥಮಿಕ ಶಾಲೆಗಳನ್ನು ನಗರಗಳಲ್ಲಿ ಬೇರೆ ಬೇರೆ ಸಂಸ್ಥೆಗಳವರು ಖಾಸಗಿ ಸಂಸ್ಥೆಗಳವರು ಯಥೇಚ್ಛವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವವರು ಈ ಒಂದು ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿರುವುದರಿಂದ ಸರ್ಕಾರ ಈ ಪೂರ್ವ ಪ್ರಾಥಮಿಕ ಶಾಲೆಗಳನ್ನು ನಡೆಸುವಂಥಾ ಜವಾಬ್ದಾರಿಯನ್ನು ಹೊರಬೇಕಾದಂಥದ್ದು ಅವಶ್ಯಕವಾಗಿದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾಥಮಿಕ ಶಿಕ್ಷಣಕ್ಕೆ ಕೊಡತಕ್ಕ ಮಹತ್ವ ಕೂಡ ಬಹಳಷ್ಟು ಕಡಿಮೆಯಾಗುತ್ತಿದೆ. ಇಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಶಿಕ್ಷಣದ ಜವಾಬ್ದಾರಿಯಲ್ಲದೇ ಇನ್ನಿತರ ಅನೇಕ ಜವಾಬ್ದಾರಿಯನ್ನು ಹೊರಿಸಲಾಗುತ್ತಿದೆ. ಈಗಾಗಲೇ ಅನೇಕ ಸದಸ್ಯರು ಪ್ರಸ್ತಾಪ ಮಾಡಿ ಹೇಳಿದ ಹಾಗೆ ಈ ಶಿಕ್ಷಕರನ್ನು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸುತ್ತಿದ್ದಾರೆ. ಉದಾಹರಣೆಗೆ ಗಣತಿ ಮಾಡುವ ಕಾರ್ಯಕ್ರಮವನ್ನು ಅವರಿಗೆ ಹೊರಿಸಲಾಗಿದೆ. ಇದು ನಿಜವಾಗಿಯೂ ಶಿಕ್ಷಣದ ಹಿತದೃಷ್ಟಿಯಿಂದ ಮಾನವೀಯತೆಯ ದೃಷ್ಟಿಯಿಂದ ಇದನ್ನು ನಿಲ್ಲಿಸತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ತಾಲ್ಲೂಕ್ ಬೋರ್ಡಿನಲ್ಲಿರತಕ್ಕ ಜೀಪನ್ನು ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿಲ್ಲ, ಅದನು

ಹೆಚ್ಚಾಗಿ ಬೇರೆ ಬೇರೆ ಅಧಿಕಾರಿಗಳೇ ಉಪಯೋಗ ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಇವತ್ತು ಈ ಶಿಕ್ಷಕರನ್ನು ಶಿಕ್ಷಣಕ್ಕೆ ಹೆಚ್ಚಾಗಿ ಉಪಯೋಗಿಸಿಕೊಳ್ಳದೆ ಅವರನ್ನು ಬೇರೆ ಬೇರೆ ಕೆಲಸಗಳಿಗೆ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಇನ್ನು ಶಾಲಾ ಕಟ್ಟಡಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಪ್ರಾಥಮಿಕ ಶಾಲೆಗಳ ದುರಸ್ಥಿ ಕಾರ್ಯವಾಗಲೀ ಅಥವಾ ಕಟ್ಟಡದ ಕೆಲಸವಾಗಲೀ ಮುನಿಸಿಪಾಲಿಟಿಯಿಂದ ಅದನ್ನು ಪಿ.ಡಬ್ಲ್ಯೂ.ಡಿ.ಯವರಿಗೆ ಹೊರಿಸಿದ್ದೀರಿ. ಆದರೆ ಗ್ರಾಮೀಣ ಭಾಗದಲ್ಲಿ ಮಾತ್ರ ಅದು ಏನಾಗಿದೆ ಅಂದರೆ ತಾಲ್ಲೂಕ್ ಬೋರ್ಡ್ ಕಕ್ಷೆಯಲ್ಲಿ ಬರುತ್ತದೆ. ತಾಲ್ಲೂಕ್ ಬೋರ್ಡ್‌ನಲ್ಲಿ ಹಣಕಾಸಿನ ನೆರವು ಇಲ್ಲದೆ ಇರುವುದರಿಂದ ಗ್ರಾಮೀಣ ಭಾಗಗಳಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲ. ಮೊದಲೇ ಕಟ್ಟಡಗಳ ಅಭಾವ ಇದೆ, ಅದರಲ್ಲೂ ಇರುವ ಕಟ್ಟಡಗಳನ್ನು ಸರಿಯಾಗಿ ನೋಡಿಕೊಂಡು ಹೋಗುವಂಥ ವ್ಯವಸ್ಥೆ ಇಲ್ಲ. ಆದುದರಿಂದ ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹೇಳಬೇಂದರೆ ತಾವು ದುರಸ್ಥಿಗಾಗಿ ಮಂಜೂರು ಮಾಡಿದಂಥ ಹಣ ಏನೇನೂ ಸಾಕಾಗುವುದಿಲ್ಲ. ಪ್ರತಿ ವರ್ಷವೂ ಮಾನ್‌ಸೂನ್ ಪ್ರೊಟೆಕ್ಷನ್ ಮಾಡಬೇಕಾಗಿರುತ್ತದೆ. ತಾವು ಕೊಟ್ಟಂಥ ಹಣ ಪೂರ್ತಿಯಾಗಿ ಇದಕ್ಕೆ ಹೋಗುತ್ತದೆ. ಇನ್ನು ಉಳಿದ ಯಾವ ಮುರಸ್ಥಿ ಕೆಲಸಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಬೇರೆ ಜಿಲ್ಲೆಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿ ಹೆಚ್ಚಿನ ಹಣದ ಸಹಾಯವನ್ನು ಮಂಜೂರು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದೂ ಅಲ್ಲದೆ ಗ್ರಾಮೀಣ ಭಾಗಗಳಲ್ಲಿ ಇನ್ನೊಂದು ಅವ್ಯವಸ್ಥೆ ನಡೆಯುತ್ತಿದೆ. ಅದು ಏನೆಂದರೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹೆಸರಿಗೆ ಮಾತ್ರ ಅಲ್ಲಿಗೆ ತೋರಿಸಿ ಆನಂತರ ಅವರನ್ನು ಬೇರೆ ಕಡೆಗೆ ಡೆಪ್ಯುಟೇಷನ್ ಮೇಲೆ ಕಳುಹಿಸಿರುತ್ತಾರೆ. ಇದರಿಂದಾಗಿ ನಮ್ಮ ಕಡೆ ಎಷ್ಟೋ ಸ್ಕೂಲ್‌ಗಳಲ್ಲಿ ಶಿಕ್ಷಕರು ಇಲ್ಲದೆ ಶಾಲೆಗಳನ್ನು ಮುಚ್ಚುವಂಥಾ ಪರಿಸ್ಥಿತಿ ಉಂಟಾಗಿದೆ. ನಮ್ಮ ಸೂಪಾ ತಾಲ್ಲೂಕಿನಲ್ಲಿ ಸುಮಾರು ಕಳೆದ 2 ವರ್ಷಗಳಿಂದ 29 ಪ್ರಾಥಮಿಕ ಶಾಲಾ ಶಿಕ್ಷಕರುಗಳು ಇಲ್ಲದೆ ಶಾಲೆಗಳು ಮುಚ್ಚಿವೆ. ಇಂಥಾ ದಾರುಣ ಸ್ಥಿತಿಯಲ್ಲಿ ಗ್ರಾಮೀಣ ಶಾಲೆಗಳು ಇವೆ. ಹೀಗಾದರೆ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ? ಎನ್ನುವುದನ್ನು ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಗ್ರಾಮೀಣ ಭಾಗಗಳಲ್ಲಿ ಶಿಕ್ಷಕರು ಕೆಲಸ ಮಾಡುವುದಕ್ಕೆ ತಪ್ಪಿಸುವುದಕ್ಕೆ ಈ ಡೆಪ್ಯುಟೇಷನ್ ಎಂದು ಹೇಳತಕ್ಕದ್ದು ಒಂದು ಮಾರ್ಗ ಮಾಡಿಕೊಟ್ಟ ಹಾಗಾಗಿದೆ. ಗ್ರಾಮೀಣ ಶಾಲೆಗಳಲ್ಲಿ ಹೆಸರಿಗೆ ಮಾತ್ರ ಶಿಕ್ಷಕರು ಇರುತ್ತಾರೆ, ಆದರೆ ಆನಂತರ ಅವರು ಡೆಪ್ಯುಟೇಷನ್ ಮೇಲೆ ಬೇರೆ ಕಡೆ ಅಂದರೆ ನಗರಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದುದರಿಂದ ಈ ಡೆಪ್ಯುಟೇಷನ್ ನೀತಿಯನ್ನು ಕೂಡಲೇ ತೆಗೆದುಹಾಕಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಕಡ್ಡಾಯವಾಗಿ ಎಲ್ಲೆಲ್ಲಿ ಶಿಕ್ಷಕರು ಇಲ್ಲವೋ ಅಂಥಾ ಕಡೆಗಳಲ್ಲಿ ಎಲ್ಲಾ ಶಿಕ್ಷಕರನ್ನು ಹಾಕಬೇಕೆಂದು ಒತ್ತಾಯ ಮಾಡಬಯಸುತ್ತೇನೆ. ಇನ್ನು ಗುಣ ಮಟ್ಟದ ಬಗ್ಗೆ ಹೇಳುವುದಾದರೆ ಹೊಸ ಸರ್ಕಾರದವರು ಅಧಿಕಾರಕ್ಕೆ ಬಂದಿದ್ದಾರೆ,-ಇವರ ಕಾಲದಲ್ಲಿಯಾದರೂ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ಭರವಸೆಯನ್ನು ಹೊಂದಿದ್ದೇನೆ. ಇದರ ಬಗ್ಗ ತಮಗೆ ಒಂದು ಮಾತನ್ನು ಹೇಳುವುದಾದರೆ ನನ್ನ ಸೂಪಾ ತಾಲ್ಲೂಕಿನಲ್ಲಿ ಸರ್ಕಾರದಿಂದ ನಡೆಯುತ್ತಿರುವಂಥಾ 4 ಮಾಧ್ಯಮಿಕ ಶಾಲೆಗಳು ಇವೆ. ಅಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿದೆ. ಇದರ ಬಗ್ಗೆ ನಾನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಜೊತೆಯಲ್ಲೂ ಮಾತನಾಡಿದ್ದೇನೆ. ಆದರೂ ಸಹ ಅಲ್ಲಿ ಗುಣ ಮಟ್ಟವನ್ನು ಹೆಚ್ಚಿಸುವ ಬಗ್ಗೆ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತದೆ, ಆದರೆ ಇದರಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿದೆ. ತಮಗೊಂದು ಉದಾಹರಣೆಯನ್ನು ಕೊಡುವುದಾದರೆ, ಕಾರವಾರದ ಕೇಂದ್ರಕ್ಕೆ, ಅಂಕೋಲದಿಂದ, ಯಲ್ಲಾಪುರದಿಂದ ಹುಬ್ಬಳ್ಳಿ, ಧಾರವಾಡ, ಇನ್ನು ಬೇರೆ ಬೇರೆ ಭಾಗಗಳಿಂದ ವಿದ್ಯಾರ್ಥಿಗಳು ಬಂದು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೇನು ? ಅಲ್ಲಿ ಹೇಗೆ ಪರೀಕ್ಷೆಗಳು ನಡೆಯುತ್ತಿದೆ ಎನ್ನುವ ಬಗ್ಗೆ ಆಮೂಲಾಗ ವಾಗಿ ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಲ್ಲದೆ, ಕಾರವಾರದ ಖಾಸಗೀ ಪ್ರಥಮ ದರ್ಜೆ ಕಾಲೇಜನ್ನು 7–8 ವರ್ಷಗಳ ಹಿಂದೆ ಸರ್ಕಾರ ವಹಿಸಿಕೊಂಡಿದೆ. ಏಕೆಂದರೆ ಅಲ್ಲಿನ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ. ಅಲ್ಲಿರತಕ್ಕ ಶಿಕ್ಷಕರಿಗೆ ಸಂಬಳ ಸರಿಯಾಗಿ ಸಿಕ್ಕುತ್ತಿಲ್ಲವೆಂದು ಸರ್ಕಾರ ವಹಿಸಿಕೊಂಡಿದೆ. ಅವರ ಸ್ಥಿತಿ ಇನ್ನೂ ಸುಧಾರಣೆಯಾಗಿಲ್ಲ. ಆ ಕಾಲೇಜಿನಲ್ಲಿ ನಿವೃತ್ತರಾದ ಅಧ್ಯಾಪಕರಿಗೆ ನಿವೃತ್ತಿ ವೇತನ ಸಿಕ್ಕಿಲ್ಲ. ಆ ಕಾಲೇಜಿನ ಸಿಬ್ಬಂದಿ ವರ್ಗದವರನ್ನು ರೆಗ್ಯುಲರೈಸ್ ಮಾಡಿಲ್ಲ. ನಿವೃತ್ತಿ ಹೊಂದಿದ ಸಿಬ್ಬಂದಿ ವರ್ಗದವರು ಅನೇಕರು ತೀರಿಕೊಂಡಿದ್ದಾರೆ. ಸತ್ತ ಮೇಲಾದರೂ ಕೂಡ ಅವರಿಗೆ ನಿವೃತ್ತಿ ವೇತನ ಕೊಡತಕ್ಕ ವ್ಯವಸ್ಥೆ ಆಗಬೇಕು. ಅವರು ಇನ್ನು ಬಹಳ ಕಾಲ ಕಾಯುಬಾರದೆಂದು ಹೇಳುತ್ತೇನೆ. ಇನ್ನು ಪಾಲಿಟೆಕ್ನಿಕ್‌ನಲ್ಲಿರತಕ್ಕ ಪ್ರವೇಶ ಪದ್ಧತಿ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಸರ್ಕಾರದವರು ಪ್ರತಿಯೊಂದು ಜಿಲ್ಲೆಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಮಂಜೂರ್ಮಾಡಿದ್ದಾರೆ. ಅವು ನಡೆಯುತ್ತಿವೆ. ಅವುಗಳಲ್ಲಿ ಪ್ರವೇಶ ಕೊಡುವಾಗ ಆ ಜಿಲ್ಲೆಯ ಮಕ್ಕಳ ಹಿತದೃಷ್ಟಿಯಿಂದಲಾದರೂ ಪ್ರವೇಶ ನಿರ್ಬಂಧಗಳು ಇರಬೇಕು. ಇಲ್ಲದಿದ್ದರೆ ಆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಇದರಿಂದ ಅನ್ಯಾಯವಾಗುತ್ತದೆ. ಅಲ್ಲಿ ರಾಜ್ಯ ಮಟ್ಟದ ಅಂದರೆ ಬೇರೆ ಜಿಲ್ಲೆಯ ವಿದ್ಯಾರ್ಥಿಗಳು ಪ್ರವೇಶ ಮಾಡುವುದರಿಂದ ಆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ, ಆಯಾಯ

ಜಿಲ್ಲೆಯ ವಿದ್ಯಾರ್ಥಿಗಳಿಗೆ ಆಯಾಯ ಜಿಲ್ಲೆಯಲ್ಲೇ ಪ್ರವೇಶಾವಕಾಶದ ಅವಕಾಶವನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾರವಾರ ಪಾಲಿಟೆಕ್ನಿಕ್‌ನಲ್ಲಿ ಕಳೆದ ಅನೇಕ ವರ್ಷಗಳಿಂದ ಸಾಕಷ್ಟು ಸಿಬ್ಬಂದಿ ವರ್ಗ ಇಲ್ಲ. ಇದಕ್ಕಾಗಿ ಕಳೆದ ವರ್ಷ ವಿದ್ಯಾರ್ಥಿಗಳು ಚಳುವಳಿ ಹೂಡಿದ್ದರು. ಆಗ ಟೆಕ್ನಿಕಲ್ ಡೈರೆಕ್ಟರ್ ಸಿಬ್ಬಂದಿಯನ್ನು ನೇಮಕ ಮಾಡಿದರು. ಆದರೆ ಪರೀಕ್ಷೆಯಾದ ತಕ್ಷಣ ಅವರೆಲ್ಲರನ್ನೂ ಬೇರೆ ಕಡೆಗೆ ವರ್ಗ ಮಾಡಿದರು. ವರ್ಗ ಮಾಡಿದ್ದಕ್ಕೆ ಅಕ್ಷೇಪಣೆ ಇಲ್ಲ. ಆದರೆ ವರ್ಗ ಮಾಡಿದ ತಕ್ಷಣ ಆ ಜಾಗದಲ್ಲಿ ಬೇರೆಯವರನ್ನು ನೇಮಿಸುವ ವ್ಯವಸ್ಥೆ ಆಗಬೇಕು. ಇಲ್ಲದಿದ್ದರೆ ಆ ಕಾಲೇಜಿನ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಶಿಕ್ಷಣ ಇಲಾಖೆಯಲ್ಲಿ ನಡೆಯುತಕ್ಕ ಭ್ರಷ್ಟಾಚಾರದ ಬಗ್ಗೆ ಹೇಳಬೇಕಾಗಿದೆ. ಸಾಮಾನ್ಯವಾಗಿ ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ಇದ್ದೇ ಇದೆ. ಆದರೆ ಶಿಕ್ಷಣ ಇಲಾಖೆಯ ಭ್ರಷ್ಟಾಚಾರಕ್ಕೂ ಮತ್ತು ಬೇರೆ ಇಲಾಖೆಯ ಭ್ರಷ್ಟಾಚಾರಕ್ಕೂ ವ್ಯತ್ಯಾಸ ಇದೆ. ಲೋಕೋಪಯೋಗಿ ಇಲಾಖೆಯಲ್ಲಿ ದೊಡ್ಡ ದೊಡ್ಡ ಜನರು ಭ್ರಷ್ಟಾಚಾರಕ್ಕೆ ಬಲಿ ಬೀಳುತ್ತಾರೆ. ಆದರೆ ಶಿಕ್ಷಣ ಇಲಾಖೆಯಲ್ಲಿ ಇರತಕ್ಕ ಭ್ರಷ್ಟಾಚಾರಕ್ಕೆ ಬಡವರಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರು ಬಲಿ ಬೀಳುತ್ತಾರೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕಾರವಾರದ ಡಿಡಿಪಿಐ ಕಛೇರಿ ಭ್ರಷ್ಟಾಚಾರದ ಕೂಪವಾಗಿದೆ. ಅಲ್ಲಿ ಇಂತಿಂಥ ಕೆಲಸಕ್ಕೆ ಇಷ್ಟಿಷ್ಟು ಕೊಡಬೇಕೆಂದು ಪಟ್ಟಿ ಮಾಡಿದ್ದಾರೆ. ತಿಂಗಳ ಸಂಬಳ ಮಾಡಬೇಕಾದರೆ ಪ್ರತಿಯೊಂದು ಶಾಲೆಯವರು ಇಂತಿಷ್ಟು ಕೊಡಬೇಕೆಂಗು ಗೊತ್ತು ಮಾಡಿದ್ದಾರೆ. ಇನ್‌ಕ್ರಿಮೆಂಟ್ ಮಂಜೂರ್ಮಾಡಬೇಕಾದರೆ ಒಂದು ನೀತಿ, ನೌಕರಿ ಕೊಡಬೇಕಾದರೆ ಒಂದು ನೀತಿ ಇರುತ್ತದೆ. ಹೀಗೆ ಬಡಶಿಕ್ಷಕರನ್ನು ಸುಲಿಗೆ ಮಾಡತಕ್ಕ ವ್ಯವಸ್ಥೆ ನಡೆಯುತ್ತಿದೆ. ಈ ವಿಷಯದಲ್ಲಿ ಲಿಖಿತ ಮೂಲಕ ಸರ್ಕಾರಕ್ಕೆ ದೂರು ಕೊಟ್ಟಿದ್ದೇನೆ ಮತ್ತು ಇಬ್ಬರು ಅಧಿಕಾರಿಗಳ ಮೇಲೆ ನೇರವಾಗಿ ಆರೋಪ ಮಾಡಿದ್ದೇನೆ. ಆದ್ದರಿಂದ, ತಕ್ಷಣ ಆ ಬಗ್ಗೆ ಗೆಜೆಟೆಡ್ ಅಸಿಸ್ಟೆಂಟ್ಸ್ ಮತ್ತು ಇನ್‌ಚಾರ್ಜ್ ಡಿಡಿಪಿಐ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಅದಕ್ಕೆ ಮೊದಲು ಅವರಿಬ್ಬರನ್ನೂ ಅಲ್ಲಿಂದ ವರ್ಗ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಯುವಜನ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಯುವಜನ ಮಂತ್ರಿಗಳು ಯುವಕರಾಗಿದ್ದಾರೆ. ಇವೊತ್ತಿನ ದಿವಸ ಯುವಜನ ಇಲಾಖೆಯ ಅನೇಕ ಚಟುವಟಿಕೆಗಳು ಜಿಲ್ಲಾಮಟ್ಟದಲ್ಲಿ ಯುವಜನ ಸೇವಾ ಮಂಡಲಿಯ ಪರವಾಗಿ ನಡೆಯುತ್ತಿವೆ. ಈ ಯುವಜನ ಸೇವಾ ಮಂಡಲಿ ಏನಿದೆ ಇದು ಸರಿಯಾಗಿ ಕಾರ ನಿರ್ವಹಿಸುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಯುವಜನ ಸೇವಾ ಮಂಡಲಿಯ ಅಧ್ಯಕ್ಷಸ್ಥಾನವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿಕೊಟ್ಟಿರುವುದು. ಅವರಿಗೆ ಬೇರೆ ಕೆಲಸ ಕಾರ್ಯಗಳ ಹೊಣೆ ಇರುವುದರಿಂದ ಅವರಿಂದ ಅದನ್ನು ತಪ್ಪಿಸಿ ಶಿಕ್ಷಣ ಅಧಿಕಾರಿಗಳಿಗೋ ಅಥವಾ ಜಿಲ್ಲಾ ಯುವಜನ ಅಧಿಕಾರಿಗಳಿಗೋ ಸಂಪೂರ್ಣ ಜವಾಬ್ದಾರಿ ಕೊಟ್ಟು ಆ ಕಾರ್ಯ ನಡೆಯುವಂತೆ ಮಾಡಿದರೆ ತಮ್ಮ ಉದ್ದೇಶ ಸಫಲವಾಗುತ್ತದೆ ಮತ್ತು ಹೆಚ್ಚು ಸಕ್ರಿಯವಾಗಿ ಯುವಜನ ಚಟುವಟಿಕೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಸ್ಟೇಡಿಯಂ ಬಗ್ಗೆ ಹೇಳುವುದಾದರೆ, ಜಿಲ್ಲಾ ಸ್ಟೇಡಿಯಂ ಕಾರವಾರ ಜಿಲ್ಲೆಯಲ್ಲಿದೆ. ಈಗ ಸಿರಸಿಯಲ್ಲಿ ಒಂದು ಸ್ಟೇಡಿಯಂ ಅನ್ನು ಮಂಜೂರ್ಮಾಡಿದ್ದಾರೆ. ಅದಕ್ಕೆ ಸರ್ಕಾರದವರು 75 ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿದ್ದಾರೆ. ಆಮೇಲೆ, ಸಾರ್ವಜನಿಕರಿಂದ ವಂತಿಗೆ ರೂಪದಲ್ಲಿ 2 ಲಕ್ಷದ 74 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಆದರೆ ಇದುವರೆಗೆ ಆ ಕೆಲಸ ಸಮರ್ಪಕವಾಗಿ ಆಗಿಲ್ಲ. ಕೇವಲ 59 ಲಕ್ಷ ರೂಪಾಯಿ ಹಣ ಮಾತ್ರ ಖರ್ಚಾಗಿದೆ. ಮಾನ್ಯ ಸಚಿವರು ಆ ಕಡೆಗೆ ಹೆಚ್ಚಿಗೆ ಗಮನಕೊಟ್ಟು ಆ ಕಾರ್ಯವನ್ನು ಪೂರೈಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೂರಲ್ ಜಿಮ್ನಾಸಿಯಂ ಸಲುವಾಗಿ ತಮ್ಮ ವರದಿಯಲ್ಲಿ 75 ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿದ್ದೇವೆಂದು ಹೇಳಿದ್ದೀರಿ. ಎನ್.ಆರ್.ಇ.ಪಿ. ಮೂಲಕ ರೂರಲ್ ಜಿಮ್ನೇಸಿಯಂ ಅನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಎನ್.ಆರ್.ಇ.ಪಿ.ಯಲ್ಲಿ ಲೇಬರ್ ಮತ್ತು ಮೆಟೀರಿಯಲ್ ಪ್ರೊಪೋರ್‌ಷನ್ 60 : 40 ಇರುವುವರಿಂದ ರೂರಲ್ ಜಿಮ್ನೇಸಿಯಂ ಅನ್ನು ಕಟ್ಟಲಿಕ್ಕೆ ಆಗದೆ ಇರುವುದರಿಂದ ಅಲ್ಲಿ ಅನುವು ಮಾಡಿಕೊಟ್ಟ ಹಣದ ಜೊತೆಗೆ ಇಲಾಖೆಯಿಂದ ಸ್ವಲ್ಪ ಸಹಾಯ ಧನ ನೀಡಿದರೆ ಮಾತ್ರ ರೂರಲ್ ಜಿಮ್ನೇಸಿಯಂ ಅನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಲ್ಲಿ ಸರ್ಕಾರ ವಿಚಾರ ಮಾಡಬೇಕೆಂದು ಹೇಳುತ್ತೇನೆ. ರೂರಲ್ ಕೋರ್ಸ್ ಸೆಂಟರ್ಸ್ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸೆಂಟರ್‌ಗಳನ್ನು ಮಾಡಿದ್ದಾರೆ. ಆದರೆ ಅಲ್ಲಿರತಕ್ಕ ಸೆಂಟರ್‌ಗಳು ಹೆಸರಿಗೆ ಮಾತ್ರ ಇವೆ. ಯಾವ ಹೈಸ್ಕೂಲಿನ ಕಕ್ಷೆಗೆ ಆ ಸೆಂಟರನ್ನು ಒಪ್ಪಿಸಿಕೊಡುತ್ತಾರೆ ಅಲ್ಲಿರತಕ್ಕ ಫಿಸಿಕಲ್ ಎಜುಕೇಷನ್ ಟೀಚರ್ ಮಾತ್ರ ಸಹಾಯಧನ ಕೊಡುತ್ತಾರೆ. ಅದು ಬಿಟ್ಟರೆ ಬೇರೆ ಯಾವ ಕಾರ್ಯಕ್ರಮವೂ ಆಗುತ್ತಿಲ್ಲ. ರೂರಲ್ ಕೋರ್ಸ್ ಸೆಂಟರ್ಸ್‌ಗಳು ಏನಿವೆ ಅವು ನಿಜವಾದ ಅರ್ಥದಲ್ಲಿ ಗ್ರಾಮೀಣ ಭಾಗದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಹೆಚ್ಚಾಗಿ ಮಾಡಿ ಗ್ರಾಮೀಣ ಮಕ್ಕಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಹೆಚ್ಚು ಬೆಳಕಿಗೆ ತರಲು ಅನುಕೂಲವಾಗುವಂತೆ ಕೆಲಸ ಮಾಡಬೇಕು. ಆ ದೃಷ್ಟಿಯಿಂದ ಅವುಗಳನ್ನು ಬಲಯುತವಾಗಿ ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳಿಗೆ ಹೆಚ್ಚು ಸಹಾಯಧನವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಿ. ಶೆಟ್ಟಿ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಇವತ್ತು ಮಾತ್ರವಲ್ಲದೆ ನಿನ್ನೆ ದಿವಸ ಕೂಡ ವಿದ್ಯಾ ಇಲಾಖೆಯ ಬೇಡಿಕೆಯ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ. ಇವತ್ತಿನ ದಿವಸ, ಈ ವಿದ್ಯಾ ಇಲಾಖೆಯು ಚರ್ಚೆಯ ಸ್ವರೂಪವೇ ಬೇರೆ ರೀತಿಯಲ್ಲಿ ಮಾರ್ಪಾಡಾಗಿದೆ ಎಂದು ಭಾವಿಸುತ್ತೇನೆ. ನಮ್ಮ ಮೂಲ ಉದ್ದೇಶ ವೇನೆಂದರೆ ಮಕ್ಕಳ ಹಿತಾಸಕ್ತಿಯ ಬಗ್ಗೆ ಆಲೋಚನೆ ಮಾಡಿ ಅವರ ಬೆಳವಣಿಗೆಯ ಬಗ್ಗೆ ಮತ್ತು ವಿದ್ಯೆಯ ಬೆಳವಣಿಗೆಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುವಂತಹ ವಿಧಾನ ಆಗಬೇಕಾಗಿತ್ತು. ಆದರೆ ಇಲ್ಲಿ ನೋಡುವಾಗ ಮಕ್ಕಳ ಹಿತಾಸಕ್ತಿಯ ಬಗ್ಗೆ ಚರ್ಚಿಸುವ ಆಲೋಚನೆ ಕಡಿಮೆ ಎಂದು ಕಂಡುಬರುತ್ತದೆ. ಈ ವಿಚಾರದಲ್ಲಿ ಮೊದಲನೆಯದಾಗಿ ಹೇಳುವುದಾದರೇ, ಹಿಂದಿನ ಸರ್ಕಾರವಾಗಲೀ, ಈಗಿನ ಸರ್ಕಾರವಾಗಲೀ ಬಹುಮಟ್ಟಿಗೆ ನರ್ಸರಿ ಅಭ್ಯಾಸವನ್ನು ಕಡೆಗಾಣಿಸಿದೆ ಎಂದು ಅನ್ನಿಸುತ್ತದೆ. ಏಕೆಂದರೆ ಹಿಂದಿನ ಸರ್ಕಾರದ ಮಂತ್ರಿಗಳಾಗಲೀ ಅಥವಾ ಈಗಿನ ಸರ್ಕಾರದ ಮಂತ್ರಿಗಳಾಗಲೀ ನೋಡುವ ದೃಷ್ಟಿ ಒಂದೇ. ಯಾರಿಂದ ಓಟು ಸಿಗುತ್ತದೆ ಅವರಿಗೆ ಸಹಾಯ ಮಾಡೋಣ ಎಂಬುದು ಅವರಲ್ಲಿರುತ್ತದೆ. ಆದರೆ ಸಣ್ಣ ಮಕ್ಕಳಿಗೆ ಓಟಿನ ಹಕ್ಕು ಇಲ್ಲ. ಆದ್ದರಿಂದ ಅವರ ಬಗ್ಗೆ ಮಂತ್ರಿಗಳು ಆಲೋಚನೆ ಮಾಡುವುದಿಲ್ಲ. ಮುಂದೆ ಅವರಿಂದ ಓಟು ಸಿಗುತ್ತದೆಂದು ಹೇಳುವ ಆಸಕ್ತಿಯನ್ನು ಕೂಡ ಅವರು ತೋರಿಸಿದಂತೆ ಕಾಣುವುದಿಲ್ಲ. ಈ ವಿಚಾರದಲ್ಲಿ, ಪೋಸ್ಟ್ ಗ್ರಾಜ್ಯು ಯೇಟ್ಸ್ ಬಗ್ಗೆ ಮಾತನಾಡುವುದಕ್ಕೆ ಬದಲು ಪ್ರಾಥಮಿಕ ಶಾಲೆಯಿಂದ ಪಿ.ಯು.ಸಿ.ವರೆಗೆ ಈಗಿನ ಸರ್ಕಾರ ಎಷ್ಟರಮಟ್ಟಿಗೆ ಆಸಕ್ತಿ ವಹಿಸಿದೆ ಎಂಬುದನ್ನು ನೋಡುವುದು ಅಗತ್ಯ. ಪಾಶ್ಚಾತ್ಯ ದೇಶಗಳಲ್ಲಿ 3 ರಿಂದ 5 ವರ್ಷದವರೆಗೆ ಕೊಡುವ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಪ್ರೀ-ನರ್ಸರೀ ಶಾಲೆಗಳ ಬಗ್ಗೆ ಹೆಚ್ಚು ಗಮನ ನೀಡಿ ಎರಡು ವರ್ಷದ ಪ್ರೀ-ನರ್ಸರಿ ತರಗತಿಗಳನ್ನು ಪ್ರತಿ ಪ್ರಾಥಮಿಕ ಶಾಲೆಯಲ್ಲೂ ಇರುವಂತೆ ವ್ಯವಸ್ಥೆ ಮಾಡಬೇಕೆಂದು ಶಿಕ್ಷಣ ಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ. ಅದಕ್ಕೆ ಹೆಚ್ಚು ಖರ್ಚು ಕೂಡ ಬೀಳುವುದಿಲ್ಲ. ಹೆಚ್ಚು ತೊಂದರೆಯೂ ಆಗುವುದಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಅವರ ವಯೋಮಿತಿಗೆ ಮೀರಿದ ವಿಷಯಗಳನ್ನು ಪಾಠಗಳಲ್ಲಿ ತುಂಬುತ್ತಿದ್ದಾರೆ. ಅವರಿಗೆ ಅನೇಕ ಪುಸ್ತಕಗಳನ್ನಿಟ್ಟದ್ದು ಅವರ ತಂದೆ ತಾಯಿಗಳು ಆ ಮಕ್ಕಳ ಪುಸ್ತಕಗಳನ್ನು ಹೊತ್ತುಕೊಂಡು ಹೋಗಿ ಕೊಡಬೇಕಾಗುತ್ತದೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದ್ದು ವಾಸ್ತವ ಸಂಗತಿ ಯಾಗಿದೆ. ಒಳ್ಳೆಯ ಶಿಕ್ಷಣ ತಜ್ಞರಿಂದ ಸಿಲಬಸ್ ತಯಾರಿಸಿ ಅಗತ್ಯ ವಿಷಯಗಳನ್ನು ಅವಳಡಿಸುವ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ. ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಂಖ್ಯೆಯನ್ನು 1 : 40 ಇದ್ದುದನ್ನು 1 : 50ಕ್ಕೆ ಏರಿಸಿದ್ದಾರೆ. ಅಂದರೆ 50 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರಿರುತ್ತಾರೆ. ಹೀಗಿರುವುದರಿಂದ 70 ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ ವಿಂಗಡಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಷಯವನ್ನು ಮನಗಂಡು ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಕೊಡುವುದಕ್ಕೆ ಸೂಕ್ತ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಾಪಕರಿಗೆ ಸರ್ಕಾರ ಬೇರೆ ಬೇರೆ ರೀತಿಯ ಕೆಲಸಗಳನ್ನು ಕೊಡುತ್ತಿದೆ. ಜನಗಣತಿ, ಜಾನುವಾರು ಗಣತಿ ಮುಂತಾದ ಕೆಲಸಗಳನ್ನು ಕೊಡುತ್ತಿದ್ದಾರೆ. ಮೂರು ತಿಂಗಳಲ್ಲಿ ಮೂರು ಸಾರಿ ಈ ಕೆಲಸಕ್ಕೆ ಅವರನ್ನು ಹಾಕುತ್ತಿರುತ್ತಾರೆ. ಒಂದು ಸಾರಿ 7 ಉಪಾಧ್ಯಾಯರನ್ನು ಎರಡು ತಿಂಗಳವರೆಗೆ ಈ ಕೆಲಸಕ್ಕೆ ಒಪ್ಪಿಸಿ ಮಕ್ಕಳಿಗೆ ಶಾಲೆಯಲ್ಲಿ ಅಭ್ಯಾಸ ಮಾಡಲಿಕ್ಕೆ ಅನಾನುಕೂಲವಾಗಿತ್ತು. ಇಂಥ ಕೆಲಸಗಳನ್ನು ವಿಲೇಜ್ ಪಂಚಾಯತ್ ಸೆಕ್ರೆಟರಿಗಳು ಮುಂತಾದವರಿಗೆ ವಹಿಸಿ ಅಧ್ಯಾಪಕರಿಗೆ ಮಕ್ಕಳ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಜನಗಣತಿ ಮುಂತಾದ ಕೆಲಸಗಳನ್ನು ಅಧ್ಯಾಪಕರಿಗೆ ನಮೂದಿಸಬಾರದು ಎಂದು ಕೇಳಿಕೊಳ್ಳುತ್ತೇನೆ. ಏಕೋಪಾಧ್ಯಾಯ ಶಾಲೆಗಳು ಒಂದು ಶಾಪವಿದ್ದಂತೆ ಎಂಬುದು ನನ್ನ ಭಾವನೆ. ಹಿಂದೆ 10-12 ಮಕ್ಕಳಿದ್ದಾಗ ಏಕೋಪಾಧ್ಯಾಯರಿರುತ್ತಿದ್ದರು. ಆದರೆ ಈಗ 100 ಮಕ್ಕಳಿದ್ದರೂ ಕೂಡ ಏಕೋಪಾಧ್ಯಾಯರೇ ಇದ್ದಾರೆ. ಅವರು ಯಾವ ರೀತಿ ಕೆಲಸ ಮಾಡಬೇಕು ? ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ಶಿಕ್ಷಕರ ನೇಮಕ ಮಾಡುವಾಗ ಇತರ ವರ್ಗಗಳಲ್ಲಿ ಪರಿಗಣಿಸುವಂತೆ ಮೀಸಲಾತಿ ಯನ್ನು ಪರಿಗಣಿಸಬಾರದು ಎಂಬುದು ನನ್ನ ಭಾವನೆ. ಶಿಕ್ಷಕರ ಮಟ್ಟವನ್ನು ಆಧಾರವಾಗಿಟ್ಟುಕೊಂಡು ನೇಮಕ ಮಾಡಬೇಕು. ಹೀಗೆಂದಮಾತ್ರಕ್ಕೆ ನಾನು ಮೀಸಲಾತಿಯನ್ನು ವಿರೋಧಿಸುತ್ತೇನೆ ಎಂದು ಭಾವಿಸ ಬಾರದು. ಆಟದ ಮೈದಾನಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಹಲವಾರು ಭೂಮಿಗಳಿದ್ದು 5 ಸೆಂಟ್ಸ್ ಮೂರು ಸೆಂಟ್ಸ್ ಜಾಗವನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುತ್ತಿದ್ದಾರೆ. ಆ ರೀತಿ ಜಾಗವನ್ನು ಮಂಜೂರು ಮಾಡುವಾಗ ಒಂದು ಸೆಂಟ್‌ಗೆ 200 ರೂಪಾಯಿಯನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಪಡೆದುಕೊಂಡು ತನ್ನ ಕಿಸೆಗೆ ಹಾಕಿಕೊಳ್ಳುತ್ತಾನೆ. ಇನ್ನಾದರೂ ಅಂಥ ಜಾಗಗಳನ್ನು ಶಾಲಾ ಮಕ್ಕಳಿಗೆ ಆಟದ ಮೈದಾನಕ್ಕಾಗಿ ಮೀಸಲಾಗಿರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ತಾವು ಹೇಳುವುದು ಅರ್ಥವಾಗಲಿಲ್ಲ. ಸ್ಪಷ್ಟವಾಗಿ ಹೇಳಿ.

ಶ್ರೀ ಬಿ. ಬಿ. ಶೆಟ್ಟಿ.—5 ಸೆಂಟ್ಸ್ ಮತ್ತು 3 ಸೆಂಟ್ಸ್ ಜಾಗವನ್ನು ಮಕ್ಕಳ ಆಟದ ಮೈದಾನಕ್ಕೆ ಅವಕಾಶ ಕೊಡದೆ ಬಡವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ನಮ್ಮ ಕರಾವಳಿ ಪ್ರದೇಶದಲ್ಲಿ ಕೊಡುತ್ತಿದ್ದಾರೆ. ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆ ಸರ್ಕಾರ ಈ ಸರ್ಕಾರ ಕಾರಣ ಎಂದು ನಾನು ಹೇಳುತ್ತಿಲ್ಲ. ಈ ರೀತಿ ಮನೆ ನಿವೇಶನಕ್ಕೆ ಜಾಗವನ್ನು ಕೊಡುವುದನ್ನು ತಪ್ಪಿಸಿ ಮಕ್ಕಳ ಆಟದ ಮೈದಾನಕ್ಕೆ ಅವಕಾಶ

ಮಾಡಿಕೊಡುತ್ತೀರಾ ಎಂಬುದು ನನ್ನ ಪ್ರಶ್ನೆ. ಹಿಂದಿನ ಸರ್ಕಾರದಲ್ಲಿ ಅನೇಕ ಆಶ್ವಾಸನೆಗಳನ್ನು ನೀಡಿದ್ದರೂ ಏನೂ ಪ್ರಯೋಜನವಾಗಿಲ್ಲ. ನೀವು ಕೊಡುವ ಆಶ್ವಾಸನೆಯನ್ನು ಯಾವ ರೀತಿ ಪರಿಪೂರ್ಣ ಮಾಡುತ್ತೀರೋ ಕಾದು ನೋಡಬೇಕು. ಪಠ್ಯಪುಸ್ತಕದ ಆಯ್ಕೆಯಲ್ಲಿ ಹಸ್ತಕ್ಷೇಪ ನಡೆಯುತ್ತಿದೆ. ಯಾರಾದರೂ ಸಂಬಂಧಿಕರು, ಸ್ನೇಹಿತರ(ಇದ್ದರೆ ಅವರ ಕೈಯಲ್ಲಿ ಪುಸ್ತಕ ಬರೆಯಿಸಿ ಅದನ್ನು ಪಠ್ಯಪುಸ್ತಕವನ್ನಾಗಿ ಮಾಡುವ ಕೆಲಸ ನಡೆಯುತ್ತಿದೆ. ಇವನ್ನು ತಪ್ಪಿಸಿ ಯೋಗ್ಯವಾದ ಪಠ್ಯಪುಸ್ತಕವನ್ನು ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಶಾಲೆಗಳಲ್ಲಿ ಅಧ್ಯಾಪಕರಿಗೆ ಟಿ.ಬಿ.ಎಸ್. ವ್ಯವಸ್ಥೆ ಇದೆ. ಈ ಟಿ.ಬಿ.ಎಸ್.ಗೆ ಹಣವನ್ನು ಮ್ಯಾನೇಜ್‌ಮೆಂಟಿನವರು ಕೊಡಬೇಕು. ಆದರೆ ಅನೇಕ ಶಾಲೆಗಳಲ್ಲಿ ಅಧ್ಯಾಪಕರಿಂದ ವಸೂಲು ಮಾಡಿ ಟಿ.ಬಿ.ಎಸ್. ಕಟ್ಟುತ್ತಿದ್ದಾರೆ. ಏತಕ್ಕೆಂದರೆ ಮ್ಯಾನೇಜ್‌ಮೆಂಟಿನವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಅನೇಕ ಶಾಲೆಗಳ ಮ್ಯಾನೇಜ್‌ಮೆಂಟಿನಲ್ಲಿ ವ್ಯವಸ್ಥಾಪಕನಾಗಿದ್ದು ನಮ್ಮ ಶಾಲೆಗಳಲ್ಲಿ ನಾವೇ ಟಿ.ಬಿ.ಎಸ್. ಹಣ ಕೊಡುತ್ತಿದ್ದೇವೆ. ಆದರೆ ಅನೇಕ ಶಾಲೆಗಳಲ್ಲಿ ಅಧ್ಯಾಪಕರಿಂದ ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಇದರ ಹೊರೆಯನ್ನು ಸರ್ಕಾರವೇ ವಹಿಸಿಕೊಳ್ಳುವುದಕ್ಕೆ ಪರಿಶೀಲನೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ನಾವು ಓದುತ್ತಿದ್ದಾಗ 8, 9 ಮತ್ತು 10ನೇ ತರಗತಿಗಳಲ್ಲಿ ಐಚ್ಛಿಕ ವಿಷಯಗಳಿತ್ತು. ಈಗ ಆ ರೀತಿ ಇಲ್ಲ. ಅನೇಕ ವಿಷಯಗಳನ್ನು ಹೈಸ್ಕೂಲಿನಲ್ಲಿ ನಮೂದು ಮಾಡಿದ್ದಾರೆ. ಇದರ ಬದಲು ಉದ್ಯೋಗಾವಕಾಶಕ್ಕೆ ಅನುಕೂಲವಾಗುವಂತೆ ವಿಷಯಗಳನ್ನು ಇಟ್ಟು ಅದನ್ನು ಪಾಸು ಮಾಡಿದವರಿಗೆ 'ಬಿ' ಗ್ರೇಡ್ ಸರ್ಟಿಫಿಕೇಟ್ ಕೊಡುವ ವ್ಯವಸ್ಥೆಯನ್ನೂ ಪಿ.ಯು.ಸಿ.ಯಲ್ಲಿ ಪಾಸಾದರೆ 'ಎ' ಗ್ರೇಡ್ ಸರ್ಟಿಫಿಕೇಟ್ ಕೊಡುವ ವ್ಯವಸ್ಥೆಯನ್ನೂ ಜಾರಿಗೆ ತಂದರೆ ಬಿ.ಎ., ಬಿ.ಎಸ್‌ಸಿ. ಬಿ.ಕಾಂ. ಇಂಥ ಪದವಿ ತರಗತಿಗಳಿಗೆ ಹೋಗುವವರ ಸಂಖ್ಯೆ ಕಡಿಮೆಯಾಗುತ್ತದೆ. ಆದ್ದರಿಂದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಮಟ್ಟದಲ್ಲಿ ಉದ್ಯೋಗಾವಕಾಶಕ್ಕೆ ಅನುಕೂಲವಾಗುವಂಥ ಶಿಕ್ಷಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಭ್ರಷ್ಟಾಚಾರದ ವಿಚಾರ.

ಉಪಾಧ್ಯಕ್ಷರು.—ಪೂರ್ಣ ಮಾಡಿ.

ಶ್ರೀ ಬಿ. ಬಿ. ಶೆಟ್ಟಿ.—ನನ್ನ ವೈಯುಕ್ತಿಕ ಅನುಭವದಿಂದ ಎರಡು ವಿಚಾರವನ್ನು ಹೇಳುತ್ತೇನೆ. ಭ್ರಷ್ಟಾಚಾರದ ಬಗ್ಗೆ...

ಉಪಾಧ್ಯಕ್ಷರು.—ಮುಗಿಸಿ, ಟೈಮಾಯಿತು.

ಶ್ರೀ ಜೆ. ಡಿ. ಸೋಮಪ್ಪ.—ಭ್ರಷ್ಟಾಚಾರವನ್ನು ಮುಗಿಸಬೇಕೋ ಅಥವಾ ಭಾಷಣ ಮುಗಿಸಬೇಕೋ ?

ಉಪಾಧ್ಯಕ್ಷರು.—ಎರಡನ್ನೂ ಮುಗಿಸಬೇಕು.

ಶ್ರೀ ಬಿ. ಬಿ. ಶೆಟ್ಟಿ.—ನಾನು 10–12 ವರುಷಗಳಿಂದ ಶಾಲಾ ಮಕ್ಕಳಿಗೆ ಉಪಹಾರಕ್ಕಾಗಿ ಆಹಾರ ಪದಾರ್ಥಗಳನ್ನು ಎ.ಇ.ಒ. ಆಫೀಸಿನಿಂದ ತೆಗೆದುಕೊಂಡು ಹೋಗುತ್ತಿದ್ದೆ. ಮೊದಲಿನಿಂದಲೂ ನಾವು ಅಲ್ಲಿನ ಅಧಿಕಾರಿಗಳಿಗೆ 10 ಪರ್ಸೆಂಟ್ ಕೊಡುತ್ತಿದ್ದೆವು. ಈ ವರ್ಷ ಜನತಾ ಸರ್ಕಾರ ಬಂತಲ್ಲ ಎಂದು ಕೊಡಲಿಲ್ಲ. ಆಗ ನಮಗೆ ಕೊಡಬೇಕಾದುದನ್ನು ಕೊಡಲು ನಿರಾಕರಿಸಿದ್ದಾರೆ. ನಂತರ ಹೋಗಿ ಕೊಡಿಸಿಬಿಟ್ಟೆ. ಮಕ್ಕಳ ಆಹಾರ ಪದಾರ್ಥದಲ್ಲೂ ಭ್ರಷ್ಟಾಚಾರ ಉಂಟು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಹತ್ತಿರ ಎಷ್ಟೋ ಸಾರಿ ಬಂದಿದ್ದಾರೆ. ಆದರೆ ಈರೀತಿ ಮಾಡಿದ್ದೇನೆ ಎಂದು ಒಂದು ಸಾರಿಯೂ ಹೇಳಲಿಲ್ಲ. ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಅವರು ನನ್ನನ್ನು ನೋಡಿದ್ದಾರೆ. ನಾನೂ ಕೂಡ ಅಲ್ಲಿಗೆ ಹೋಗಿದ್ದೆ. ಆಗಲೂ ಈ ವಿಷಯ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಬಿ. ಬಿ. ಶೆಟ್ಟಿ.—ತಮ್ಮಲ್ಲಿ ಮಾತನಾಡಲಿಕ್ಕೆ ಬಂದಾಗ ತಮ್ಮ ಪಕ್ಷದ ಕಾರ್ಯಕರ್ತರು ಮುತ್ತಿಕೊಂಡಿದ್ದರು. ಹೆಚ್ಚು ಮಾತನಾಡಲಿಕ್ಕೆ ಅವಕಾಶವೇ ಸಿಗಲಿಲ್ಲ.

ಶ್ರೀ ಬಿ. ರಾಚಯ್ಯ.—ಬೇರೆ ಕೆಲಸಗಳಿಗೆ ಪುರಸೊತ್ತು ಸಿಗುತ್ತದೆ, ಇದಕ್ಕೆ ಸಿಗಲಿಲ್ಲವೇ ? ಅಧಿಕಾರಿಗೆ ದುಡ್ಡು ಕೊಟ್ಟು ಬಂದಿದ್ದೇನೆ ಎಂದು ಇವತ್ತು ಹೇಳುತ್ತಿದ್ದಾರೆ. ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಸಚಿವರು ಹೇಳಿದ್ರಲ್ಲಾ, ಅವರ ಹತ್ತಿರ ಬರುತ್ತಾ ಇದ್ರು, ಇದನ್ನು ಹೇಳಲೇ ಇಲ್ಲ ಎಂದು ಹೇಳಿದರು. ನಾನೂ ಕೂಡ ಮಂತ್ರಿಯಾಗಿದ್ದೆ. ನನ್ನ ಕೂಡ ಅವರು ಭೇಟಿ ಆಗ್ತಿದ್ರು, ಒಂದು ದಿವಸ ಕೂಡ ಹಿಂದೆ ಸರ್ಕಾರ ಹೀಗೆ ಮಾಡುತ್ತಿತ್ತು ಎಂದು ಹೇಳಲೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಬಹಳ ಬುದ್ಧಿವಂತರು. ಅವರು ಎಲ್ಲೆಲ್ಲಿ ಹೋಗಿ ಏನೇನು ಕೆಲಸ ಮಾಡಬೇಕೋ ಅದನ್ನು ಯಾವ ವಿಧದ ತೊಂದರೆ ಇಲ್ಲದೇ ಮಾಡಿಸಿಕೊಳ್ಳತಕ್ಕಂತಹ ಚತುರತೆ ಅವರಲ್ಲಿ ಇದೆ ಎಂದು ಅರ್ಥವಾಗುತ್ತದೆಯೇ ಹೊರತು, ಅದಕ್ಕೆ ಮಾನ್ಯ ಮೊಯ್ಲಿಯವರು...

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಅರ್ಥ ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಮಾನ್ಯ ಮೊಯ್ಲಿಯವರು ಸಮರ್ಥನೆ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ಆ ಮಂತ್ರಿ, ಈ ಮಂತ್ರಿಗಳು ಎಂದು ಹೇಳಲಿಲ್ಲ. ಆ ಸರ್ಕಾರ ಈ ಸರ್ಕಾರ ಎಂದು ಹೇಳಲಿಲ್ಲ. ಅಧಿಕಾರಿಗಳಲ್ಲಿ ಮೂಲಭೂತವಾಗಿ ಈ ದೋಷ ಇದೆ, ಇವನ್ನು ಪರಿಹಾರ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿದರು.

ಶ್ರೀ ಬಿ. ರಾಚಯ್ಯ.—ಆ ಬಗ್ಗೆ ಪ್ರಯತ್ನ ಮಾಡುತ್ತೇವೆಂದು ನಾವು ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವ ಒಂದು ಸಿಸ್ಟಮ್‌ನಲ್ಲಿ ಕೆಲಸ ಮಾಡುತ್ತಿದ್ದೇವೆಯೋ ಅದರಲ್ಲಿ ಯಾವ ದೋಷಾರೋಪಣೆ ಇದೆ ಅದನ್ನು ನಿಗ್ರಹಿಸಬೇಕಾದ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ವೀರಪ್ಪ ಮೊಯ್ಲಿಯವರು ನನಗೂ ಅವರು ಭೇಟಿ ಆಗುತ್ತಿದ್ದರು, ನನಗೂ ಆ ವಿಷಯವನ್ನು ತಿಳಿಸಲಿಲ್ಲ ಎಂದು ಹೇಳಿದರು, ಬಹುಶಃ ನಿಮಗೂ ಅವರಿಗೂ ಏನೋ ಸಂಬಂಧ ಇದ್ದು ನೀವು ಏನೋ ತಿಳಿದುಕೊಂಡು ಬೇಸರಪಟ್ಟುಕೊಳ್ಳಬಹುದೆಂದು ಅವರು ವಿಷಯ ತಿಳಿಸಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ಬಿ. ಶೆಟ್ಟಿ.—ನಾನು ಸದನಕ್ಕೆ ಕೆಲವು ನ್ಯೂನತೆಗಳನ್ನು ತಿಳಿಸಬೇಕಾಗುತ್ತದೆ. ಹಿಂದಿನಿಂದಲೂ ನಡೆದು ಬಂದ ಕೆಲವು ವಿಷಯಗಳು ಏನು ಇನ್ನೂ ಮುಂದುವರೆಯುತ್ತಿವೆ, ಅವುಗಳ ಬಗ್ಗೆ ನಾನು ಹೇಳುತ್ತಿದ್ದೇನೆ ಅಷ್ಟೆ. ಹಲವಾರು ಎ.ಇ.ಓ.ಪೋಸ್ಟ್‌ಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವರಿಗೆ ಬಡ್ತಿ ಆಗಿದೆ. ಅವರ ಹೆಸರು ಮಾತ್ರ ಮೇಲೆ ಹೋಗಿದೆ. ಅಲ್ಲಿಗೆ ಅವರು ಹೋಗಿ ಆರ್ಡರ್ ಕೇಳಿದರೆ 5 ಸಾವಿರ ರೂಪಾಯಿ ಕೊಡಿ ಇಲ್ಲದಿದ್ದರೆ ಆರ್ಡರ್ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರಂತೆ. ತಾವು ಇದನ್ನು ಸ್ವಲ್ಪ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಯಾರು ಕೇಳಿದ್ದಾರೆ ?

ಶ್ರೀ ಬಿ. ಬಿ. ಶೆಟ್ಟಿ.—ಎ.ಇ.ಓ. ಪ್ರಮೋಷನ್‌ಗೆ ಲಿಸ್ಟ್ ಬಂದಿದೆ.

ಶ್ರೀ ಬಿ. ರಾಚಯ್ಯ.—ಸುಮ್ಮನೆ ಗೂಬೆ ಕೂಡಿಸಬೇಡಿ. ನಿರ್ದಿಷ್ಟವಾದ್ದನ್ನು ಹೇಳಿ. ಸುಮ್ಮನೆ ವರ್ತಮಾನ ಬಂದಿದೆ ಎಂದರೆ ಹೇಗೆ ?

ಶ್ರೀ ಬಿ. ಬಿ. ಶೆಟ್ಟಿ.—ತಮಗೆ ಬಂದು ತಿಳಿಸುತ್ತೇನೆ. ಎರಡು ಎ.ಇ.ಓ. ಪೋಸ್ಟ್‌ಗೆ ಪ್ರಮೋಷನ್ ಆದ ಬಗ್ಗೆ ಸೂಚನೆ ಹೋಗಿತ್ತು. ಆ ಮನುಷ್ಯರು ಆರ್ಡರ್ ಕೈಗೆ ತೆಗೆದುಕೊಳ್ಳಲು ಹೋದಾಗ 5 ಸಾವಿರ ರೂಪಾಯಿ ಕೊಡಿ ಇಲ್ಲದಿದ್ದರೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದರು. ಇವರಿಗೆ ಈ ಪ್ರಮೋಷನ್‌ನಿಂದ ಫೈನಾನ್ಷಿಯಲ್ ಬೆನಿಫಿಟ್ ಏನೂ ಇಲ್ಲವಾದ್ದರಿಂದ ಅವರು ಹಾಗೇ ಬಂದೆವೆಂದು ಹೇಳಿದರು. ಅಷ್ಟೇ ಅವರು ಹೇಳಿದ್ದು. ಇನ್ನು ನಿವೃತ್ತಿಯಾದ ಅಧ್ಯಾಪಕರಿಗೆ ನಿವೃತ್ತಿಯಾದ 30 ದಿನಗಳೊಳಗಾಗಿ ನಿವೃತ್ತಿ ವೇತನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಿವೃತ್ತಿಯಾಗಿ 1 ವರ್ಷ 2 ವರ್ಷ ಕಳೆದಿದ್ದರೂ ನಿವೃತ್ತಿ ವೇತನ ಸಿಕ್ಕಿರುವುದಿಲ್ಲ. 30 ದಿನಗಳಲ್ಲಿ ನಿವೃತ್ತಿ ವೇತನ ಸಿಗದಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಆಟದ ಬಯಲುಗಳ ವಿಷಯ ಹೇಳಬೇಕೆಂದರೆ ಉಡುಪಿ ತಾಲ್ಲೂಕಿನಲ್ಲಿ ಫಸ್ಟ್‌ಗ್ರೇಡ್ ಕಾಲೇಜು, ಮೆಡಿಕಲ್ ಕಾಲೇಜುಗಳನ್ನೆಲ್ಲಾ ಸೇರಿ ಸುಮಾರು 10 ಸಾವಿರ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಸ್ಪೋರ್ಟ್ಸ್ ಅಂಡ್ ಕಲ್ಚರ್ ಅಸೋಸಿಯೇಷನ್‌ನವರು ಸುಮಾರು 70 ಸಾವಿರ ರೂಪಾಯಿ ಖರ್ಚು ಮಾಡಿದ್ದು ಒಂದು ಪೈಸಾ ಕೂಡ ಅವರಿಗೆ ಸರ್ಕಾರದಿಂದ ಬಂದಿಲ್ಲವೆಂದು ಆರೋಪ ಮಾಡಿದ್ದಾರೆ. ಮತ್ತು ಇವರು ಪೆವಿಲಿಯನ್ ಕಟ್ಟಬೇಕೆಂಬದು ಆಲೋಚನೆ ಮಾಡಿದರೆ ಅದಕ್ಕೆ ಸರ್ಕಾರ ಸಹಾಯ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೋರಯ್ಯ. (ರಾಮನಗರ).—ಸನ್ಮಾನ್ಯ ಅಧ್ಯಕ್ಷರೇ. ಶಿಕ್ಷಣ ಇಲಾಖೆಯ ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ನಾನು ಮಾನ್ಯ ಶಿಕ್ಷಣ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಮ್ಮ ರಾಮನಗರ ತಾಲ್ಲೂಕಿಗೆ ಮೂರು ಹೈಸ್ಕೂಲುಗಳನ್ನು ಮಂಜೂರು ಮಾಡಿ 2 ವರ್ಷಗಳು ಆಗಿದ್ದರೂ ಆ ಶಾಲೆಗಳಲ್ಲಿ ಇವತ್ತಿನವರೆಗೆ ಒಬ್ಬೊಬ್ಬರೇ ಉಪಾಧ್ಯಾಯರು ಇರುತ್ತಾರೆ. ಈ ಶಾಲೆಗಳಲ್ಲಿ ಬೇಕಾದಂತಹ ಉಪಕರಣಗಳ ಸೌಲಭ್ಯಗಳಾಗಲೀ, ಮತ್ತಿತರೆ ಸಲಕರಣೆಗಳಾಗಲೀ ಇರುವುದಿಲ್ಲವೆಂದು ನಾನು ಈ ಮೂಲಕ ಸರ್ಕಾರಕ್ಕೆ ತಿಳಿಯ ಬಯಸುತ್ತೇನೆ. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮಯ್ಯಾನಹಳ್ಳಿಯಲ್ಲಿ ಹೈಸ್ಕೂಲು ಸ್ಯಾಂಕ್ಷನ್ ಆಗಿದೆ. ಅಲ್ಲಿಗೆ ಯಾರು ಬೇಕಾದರೂ ಬಂದು ನೋಡಬಹುದು, ಅಲ್ಲಿ ಒಬ್ಬರೇ ಒಬ್ಬರು ಉಪಾಧ್ಯಾಯರು ಇದ್ದು, ಅಲ್ಲಿ ಉಪಾಧ್ಯಾಯರು ಕುಳಿತುಕೊಳ್ಳಲು ಖುರ್ಚಿ ಇಲ್ಲದೇ ಅದನ್ನು ಅಲ್ಲಿನ ಹಳ್ಳಿಗರು ತಂದುಕೊಟ್ಟಿದ್ದಾರೆ. ಹಾಗೇ ಅಂಗನಹಳ್ಳಿಯ ಶಾಲೆಗೆ ಮೊನ್ನೆ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ನೋಡಿಕೊಂಡು ಬಂದು ಅಲ್ಲಿಗೆ ಒಬ್ಬ ಉಪಾಧ್ಯಾಯರನ್ನು ಕೊಟ್ಟಿದ್ದಾರೆ. ಅಲ್ಲೂ ಕೂಡ ಯಾವುದೇ ಉಪಕರಣಗಳು ಇರುವುದಿಲ್ಲ. ಅಪೇರಳ್ಳಿ ಶಾಲೆಯಲ್ಲಿಯೂ ಕೂಡ ಅದೇ ರೀತಿ ಆಗಿದೆ. ಇದರಿಂದಾಗಿ ಅಲ್ಲಿನ ವಿದ್ಯಾರ್ಥಿಗಳ ತಂದೆತಾಯಿಗಳು ಅವರನ್ನು ಬೇರೆ ಕಡೆ ಸೇರಿಸುವ ಸಲುವಾಗಿ ಟಿ.ಸಿ.ಕೊಡಿ ನಮ್ಮ ಮಕ್ಕಳನ್ನು ಬೇರೆ ಕಡೆ ಸೇರಿಸುತ್ತೇವೆಂದು ಹೇಳುತ್ತಿದ್ದಾರೆ. ಈ ರೀತಿ ಪರಿಸ್ಥಿತಿ ಅಲ್ಲಿ ಆಗದಹಾಗೆ ಅಲ್ಲಿನ ಅಧಿಕಾರಿಗಳು ನೋಡಿಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಆದೇಶ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಹಳ್ಳಿಗಳ ಕಡೆ ಪ್ರೈಮರಿ ಶಾಲೆಗಳಗು ನಡೆಯುತ್ತಿವೆ. ಅಲ್ಲಿ ಪಾಠ ಮಾಡತಕ್ಕ ಉಪಾಧ್ಯಾಯರಿಗೆ ವಾಸ

ಮಾಡಲು ಮನೆ ಬೇಕಾಗುತ್ತದೆ. ಕೆಲವು ಹಳ್ಳಿಗಳಲ್ಲಿ ಉಪಾಧ್ಯಾಯರಿಗೆ ವಾಸ ಮಾಡಲು ಮನೆ ಸಿಗದೆ 8–10 ಮೈಲಿಗಳ ದೂರದಿಂದ ಸೈಕಲ್ ಮೇಲೆಯೋ ಅಥವಾ ನಡೆದುಕೊಂಡು ಬಂದೋ, ಅವರು ಬಂದ ವೇಳೆಗೆ ಶಾಲೆ ಪ್ರಾರಂಭ ಮಾಡುತ್ತಾರೆ. ಇದರಿಂದ ಶಾಲೆ ಎಷ್ಟು ಗಂಟೆಗಾದರೂ ಪ್ರಾರಂಭ ಆಗಬಹುದು. ಆದ್ದರಿಂದ ಶಾಲೆ ಸರಿಯಾದ ವೇಳೆಗೆ ನಡೆಯುವ ಬಗ್ಗೆ ಗಮನ ಹರಿಸಿ ಶಾಲಾ ಉಪಾಧ್ಯಾಯರಿಗೆ ಅದೇ ಊರಿನಲ್ಲಿ ವಾಸಕ್ಕೆ ಮನೆ ಸಿಗುವ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಅದೇ ಊರಿನವರು ಅದೇ ಊರಿನ ಶಾಲೆಯಲ್ಲಿ 8–10 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇದಕ್ಕೆ ಅವಕಾಶ ಕೊಡದೇ ಒಂದು ಊರಿನಲ್ಲಿ ಒಬ್ಬ ಉಪಾಧ್ಯಾಯರು 3 ಅಥವಾ 5 ವರ್ಷ ಮಾತ್ರ ಇರುವಂತೆ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ದಿನ ಶಾಲಾ ಮಕ್ಕಳಿಗೆ ಯೂನಿಫಾರಂ ಬೇಕು ಎಂದು ಹೇಳುತ್ತೀರಿ. ಅದೇರೀತಿ ಅಲ್ಲಿ ಪಾಠ ಮಾಡತಕ್ಕ ಉಪಾಧ್ಯಾಯರೂ ಸಹ ಅವರ ಡ್ಯೂಟಿನಲ್ಲೇ ಯೂನಿಫಾರಂ ಹಾಕಿಕೊಳ್ಳುವ ವ್ಯವಸ್ಥೆ ಏಕೆ ಮಾಡಬಾರದು ? ಇವತ್ತು ನಾವು ಹೈಸ್ಕೂಲು ಕಾಲೇಜುಗಳಿಗೆ ಹೋದರೆ ಅಲ್ಲಿ ಯಾರು ಹುಡುಗರು ಯಾರು ಉಪಾಧ್ಯಾಯರು ಎಂದು ಗೊತ್ತಾಗುವುದೇ ಇಲ್ಲ. ನಾವು ಯಾವುದೇ ಆಸ್ಪತ್ರೆಗೆ ಹೋದರೆ ಅಲ್ಲಿ ಯೂನಿಫಾರಂ ಹಾಕಿರುವ ಡಾಕ್ಟರುಗಳನ್ನು ನೋಡುತ್ತೇವೆ; ಕೋರ್ಟುಗಳಿಗೆ ಹೋದರೆ ಯೂನಿಫಾರಂ ಹಾಕಿರುವ ವಕೀಲರನ್ನು ನೋಡುತ್ತೇವೆ. ಹಾಗೆಯೇ ಈ ದೇಶದ ಭಾವಿ ಜನಾಂಗವನ್ನು ನಿರ್ಮಾಣ ಮಾಡತಕ್ಕ ಉಪಾಧ್ಯಾಯರಿಗೆ ಏಕೆ ಯೂನಿಫಾರಂ ಬೇಡ ಎಂದು ನಾನು ಕೇಳುತ್ತೇನೆ. ಅವರೂ ಸಹ ಸಮವಸ್ತ್ರ ಹಾಕಿಕೊಂಡು ಶಾಲೆಗೆ ಬರುವಂತೆ ಅವರಿಗೆ ಆಜ್ಞೆ ಮಾಡಬೇಕು.

ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಅನೇಕ ಜನ ಹಿರಿಯ ಸದಸ್ಯರುಗಳು ಈಗಾಗಲೇ ವಿದ್ಯಾಭ್ಯಾಸದ ಪದ್ಧತಿ ಬಗ್ಗೆ ಮಾತನಾಡಿದ್ದಾರೆ. ಕೆಲವರು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಂಶಗಳನ್ನು ಹೇಳಿದ್ದಾರೆ. ಮೂಲಭೂತವಾದ ಪ್ರಶ್ನೆ ಏನೆಂದರೆ ಇವತ್ತು ರಾಜ್ಯದಲ್ಲಿ ವಿದ್ಯಾಭ್ಯಾಸ ಪದ್ಧತಿ ಸರಿಯಾಗಿ ನಡೆದುಕೊಂಡು ಹೋಗುತ್ತಿದೆಯೋ ? ಅದರಲ್ಲಿಯೂ ಚಿಕ್ಕ ಮಕ್ಕಳಿಗೆ ನಾವು ಇವತ್ತು ಯಾವ ರೀತಿ ವಿದ್ಯಾಭ್ಯಾಸ ಕೊಡುತ್ತಿದ್ದೇವೆ ? ಅಂದರೆ, ಪ್ರೈಮರಿ ಹಾಗೂ ಪ್ರೀ-ಪ್ರೈಮರಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಯಾವ ಮೌಲ್ಯಗಳನ್ನು ಹೇಳಿಕೊಡುತ್ತಿದ್ದೇವೆ. ಯಾವ ರೀತಿಯ ಮೌಲ್ಯಗಳನ್ನು ಅಭ್ಯಾಸ ಮಾಡುವುದಕ್ಕೆ ವ್ಯವಸ್ಥೆ ಮಾಡಿದೆ ಎನ್ನುವುದರ ಬಗ್ಗೆ ಸರ್ಕಾರದವರು ಗಮನಹರಿಸಿದ್ದಾರೆಯೇ ? ಅಲ್ಲಿಂದ ಮುಂದಕ್ಕೆ ಬಂದರೆ ವಿದ್ಯಾರ್ಥಿಗಳು ಒಳ್ಳೆಯ ಪ್ರಜೆಗಳಾಗುವುದಕ್ಕೆ ಅನುವು ಮಾಡಿಕೊಡುವಂಥ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೇವೆಯೋ ಎನ್ನುವುದು ಬಹಳ ಮುಖ್ಯವಾದಂಥ ಅಂಶ. ತಮಗೆಲ್ಲಾ ಗೊತ್ತಿರುವ ಹಾಗೆ ಸಂವಿಧಾನದಲ್ಲಿ ಮುಖ್ಯವಾದ ಅಂಶಗಳನ್ನು ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ನಮ್ಮ ದೇಶ ಪ್ರಜಾಸತ್ತಾತ್ಮಕ, ಸಮಾಜವಾದಿ, ಸರ್ವಸ್ವತಂತ್ರ ಜಾತ್ಯಾತೀತ ಗಣರಾಜ್ಯವೆಂದು ಘಟನಾವಳಿಯಲ್ಲಿ ಒಪ್ಪಿಕೊಂಡಿದ್ದೇವೆ. ಜಾತ್ಯಾತೀತ ಅಂದರೆ, ಲೌಕಿಕ ಎಂದು ಕೂಡ ಹೇಳಬಹುದು. ಇದರ ಅರ್ಥ ಸರ್ಕಾರಕ್ಕೆ ದೇವರು ಮತ್ತು ಕೇಂದ್ರೀಕೃತವಾಗಿರತಕ್ಕಂಥ ಧರ್ಮಕ್ಕೂ ಪ್ರತ್ಯೇಕತೆ ಇರಬೇಕೆಂಬುದು ಸಮಾಜವಾದದ ಮುಖ್ಯ ಅಂಶ. ದೇವಸ್ಥಾನಕ್ಕೆ ಹೋಗಬೇಡಿ. ಮಸೀದಿಗೆ ಹೋಗಬೇಡಿ ಎಂದು ಹೇಳುವುದಿಲ್ಲ. ಸರ್ಕಾರದವರು ವಿದ್ಯಾಭ್ಯಾಸವನ್ನು ಕೊಡುವಾಗ. ಮಕ್ಕಳಲ್ಲಿ ಯಾವ ರೀತಿಯ ಮನೋಭಾವನೆಯನ್ನು ಉಂಟುಮಾಡಬೇಕೆಂಬುದರ ಬಗ್ಗೆ ಗಮನಿಸಬೇಕು. ಧರ್ಮಕ್ಕೂ, ಸರ್ಕಾರಕ್ಕೂ ಯಾವ ರೀತಿಯ ಸಂಬಂಧವನ್ನು ಕಲ್ಪಿಸುವಂಥ ಪ್ರವೃತ್ತಿ ಸರ್ಕಾರದಲ್ಲಿ ಇರಕೂಡದು. ಜಾತ್ಯಾತೀತ ವ್ಯವಸ್ಥೆಯನ್ನು, ಸಮಾಜವಾದದ ವ್ಯವಸ್ಥೆಯನ್ನು ಜನತಾಪಕ್ಷದವರು ಒಪ್ಪಿಕೊಂಡಿದ್ದಾರೆ. ಇವತ್ತು ಅದಕ್ಕೆ ಅನುಗುಣವಾಗಿ ನಡೆಯುತ್ತಿದ್ದೇವೆಯೇ ಎಂಬುದು ಪ್ರಶ್ನೆ. ಇವತ್ತು ನಮ್ಮ ದೇಶದಲ್ಲಿ ಸರಿಯಾದಂಥ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡುವುದರ ಬಗ್ಗೆ ಅನೇಕ ಶೋಧನೆಗಳನ್ನು ನಡೆಸಿದ್ದಾರೆ. ಆಯೋಗಗಳನ್ನು ನೇಮಕ ಮಾಡಿದ್ದಾರೆ. 1953 ರಲ್ಲಿ ವಿದ್ಯಾಭ್ಯಾಸ ಸ್ಟೇಟ್ ಲಿಸ್ಟ್‌ನಲ್ಲಿ ಮಾತ್ರ ಇತ್ತು. 1976 ರಲ್ಲಿ ಇದನ್ನು 'ಕನ್‌ಕರೆನ್ಸ್' ಲಿಸ್ಟ್‌ಗೆ ತಂದರು. ಒಂದೊಂದು ರಾಜ್ಯದವರು ತಮಗೆ ಇಷ್ಟ ಬಂದ ಹಾಗೆ ವಿದ್ಯಾಭ್ಯಾಸ ಪದ್ಧತಿಯನ್ನು ನಡೆಸಿಕೊಂಡು ಹೋಗುವುದನ್ನು ತಪ್ಪಿಸಿ ದೇಶದಾದ್ಯಂತ ವಿದ್ಯಾಭ್ಯಾಸದಲ್ಲಿ ಏಕರೂಪತೆ ಇರಬೇಕು, ಎನ್ನುವ ದೃಷ್ಟಿಯಿಂದ 42 ನೇ ಅಮೆಂಡ್‌ಮೆಂಟ್‌ನಲ್ಲಿ ಇದನ್ನು ತಂದರು. ಅದರ ನಂತರವೂ ಸಹ ಚರ್ಚೆ ನಡೆದಿದೆ. ಇವತ್ತು ವಿದ್ಯಾಭ್ಯಾಸದ ಬಗ್ಗೆ, ವಿದ್ಯಾರ್ಥಿಗಳ ಬಗ್ಗೆ, ಮತ್ತು ಉಪಾಧ್ಯಾಯರುಗಳ ಬಗ್ಗೆ ಸರ್ಕಾರ ಯಾವ ಒಂದು ಗುರಿಯನ್ನು ಇಟ್ಟುಕೊಂಡಿದೆಯೋ ಆ ದಾರಿಯಲ್ಲಿ ಕೂಡ ಹೋಗುತ್ತಿಲ್ಲ. ವಿದ್ಯಾರ್ಥಿಗಳು ಗಲಾಟೆ ಮಾಡಿದಾಗ. ಉಪಾಧ್ಯಾಯರುಗಳು ಚಳುವಳಿ ಮಾಡಿದಾಗ, ವಿದ್ಯಾತಜ್ಞರುಗಳು ಇರತಕ್ಕ ಒಂದೊಂದು ಸಮಿತಿಯನ್ನು ರಚನೆ ಮಾಡಲಾಗಿದೆ. 1964 ರಲ್ಲಿ ಕೊಠಾರಿ ಆಯೋಗವನ್ನು ನೇಮಕ ಮಾಡಲಾಗಿತ್ತು. ನಂತರ ಮಲ್ಲಾರಾಧ್ಯ ಸಮಿತಿ ನಂತರ ದೇವೇಗೌಡರ ಸಮಿತಿ ರಚಿಸಿ, ಅವರು ಏನೇನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ನನಗೆ ತಿಳಿದ ಮಟ್ಟಿಗೆ ಅವುಗಳನ್ನು

ಗಂಭೀರವಾಗಿ ತೆಗೆದುಕೊಂಡಿಲ್ಲ. ದುರದೃಷ್ಟವಶಾತ್ ರಾಜಕಾರಣಿಗಳು ಕೂಡ ಆ ರೀತಿ ತೆಗೆದುಕೊಂಡಿಲ್ಲ.

ಶ್ರೀ ಪಿ. ರಾಮ್‌ದೇವ್.—ಕೊಠಾರಿ ಆಯೋಗದ ಶಿಫಾರಸ್ಸಿನ ಬಗ್ಗೆ ಮಲ್ಲಾರಾಧ್ಯ ಆಯೋಗದ ಶಿಫಾರಸ್ಸಿನ ಬಗ್ಗೆ ಸೆಮಿನಾರ್‌ಗಳು, ಚರ್ಚೆಗಳು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸಾಕಷ್ಟು ನಡೆದಿದೆ ಮತ್ತು ಅದರ ಬಗ್ಗೆ ಸಾಕಷ್ಟು ವಿಚಾರ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಒಂದು ವರದಿಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡಿದ್ದು ನನಗೆ ಜ್ಞಾಪಕ ಇಲ್ಲವೆಂದು ಹೇಳಿದೆ. ಇದರಿಂದ ಮೂಲಭೂತವಾದ ಗುರಿಗಳನ್ನು ಏನು ಹಾಕಿಕೊಂಡಿದ್ದಾರೆ ಅವುಗಳನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ವಿದ್ಯಾತಜ್ಞರು ಕೊಟ್ಟಂತಹ ಎಲ್ಲಾ ಶಿಫಾರಸ್ಸುಗಳನ್ನು ಕಪಾಟುಗಳಲ್ಲಿ ಇಟ್ಟಿದ್ದೇವೆ. ಸಮಗ್ರ ಶಿಕ್ಷಣ ಮಸೂದೆಯಲ್ಲೂ ಇದನ್ನೆಲ್ಲಾ ಅಳವಡಿಸಿದ್ದಾರೋ ಏನೋ ಗೊತ್ತಿಲ್ಲ. ಮೂಲ ಭೂತವಾಗಿ ಚರ್ಚೆ ಮಾಡಿಲ್ಲವೆಂದು ಮಾತ್ರ ಹೇಳಬೇಕಾಗುತ್ತದೆ. ವಿದ್ಯಾಭ್ಯಾಸಕ್ಕೆ ಈ ದೇಶದಲ್ಲಿ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಆದ್ಯತೆಯನ್ನು ಕೊಟ್ಟಿಲ್ಲವೆಂದು ಆರೋಪ ಮಾಡುತ್ತೇನೆ. ಗುರಿ ಮುಟ್ಟುವುದು ಮಾತ್ರವಲ್ಲ. ಹಣಕಾಸಿನ ವಿಷಯದಲ್ಲಿಯೂ ಹೆಚ್ಚಿನ ನಿಗಾ ಕೊಟ್ಟಿಲ್ಲ. ಒಂದೊಂದು ಯೋಜನೆಯಲ್ಲಿಯೂ ಹಣ ಕಡಿಮೆಯಾಗುತ್ತಾ ಹೋಗುವುದನ್ನು ನಾವು ನೋಡಬಹುದಾಗಿದೆ. ಕೊಠಾರಿ ಆಯೋಗದವರು ವಿದ್ಯಾಭ್ಯಾಸಕ್ಕೆ 6 ಜಿ.ಡಿ.ಎಂ. ಇಡಬೇಕೆಂದು ಹೇಳಿದ್ದಾರೆ. ಆದರೆ, 1961 ರಿಂದ ಇಲ್ಲಿಯವರೆಗೆ ಟೋಟಲ್ ಅಲೋಕೇಷನ್ ನೋಡಿದರೆ ಕಡಿಮೆಯಾಗುತ್ತಲೇ ಇದೆ. ಅದರಲ್ಲಿ ಕರ್ನಾಟಕದ್ದೂ 2·2 ಪರ್ಸೆಂಟ್ ಬರುತ್ತದೆ. ರಾಷ್ಟ್ರಮಟ್ಟದ್ದು 6 ನೇ ಯೋಜನೆಯಲ್ಲಿ 2·8 ಪರ್ಸೆಂಟ್ ಇದೆ. ಪರಿಸ್ಥಿತಿ ಹೀಗಿರುವುದರಿಂದ ನಮ್ಮ ಗುರಿಯನ್ನು ಕಾರ್ಯರೂಪಕ್ಕೆ ತರುವುದು ಕಷ್ಟವಾಗುತ್ತದೆ. ಇನ್ನೊಂದು ಮುಖ್ಯ ವಿಷಯ ಅಂದರೆ ಈ ಪದ್ಧತಿಗೆ ನಾವು ಎಷ್ಟು ಖರ್ಚು ಮಾಡಬೇಕೋ ಅಷ್ಟು ಮಾಡುತ್ತೇವೆ. ಆದರೆ ನಾವು ಅನುಸರಿಸತಕ್ಕ ಪದ್ಧತಿ ಸರಿಯಿಲ್ಲ. ಇದು ಅವಾಸ್ತವಿಕತೆ, ಅನ್‌ಸೈಂಟಿಫಿಕ್, ಇರ್‍ಯಾಷನಲ್ ಮತ್ತು ವಾಸ್ತವಾಂಶಕ್ಕೆ ವಿರೋಧವಾದುದು. ನಮ್ಮ ಗುರಿ ಏನಿದೆ, ಅದಕ್ಕೆ ನಮ್ಮ ಪದ್ಧತಿ ವಿರುದ್ಧವಾದುದು. ಅದನ್ನೇ ನಮ್ಮ ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ. ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಲಕ್ಷಾಂತರ ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ. ಪಠ್ಯಪುಸ್ತಕದಲ್ಲಿ ಹೆಚ್ಚು ಹೆಚ್ಚಾಗಿ ಇರುವುದು ಏನು ? ಕೆಲವು ವೈಜ್ಞಾನಿಕ ಅಂಶಗಳನ್ನು ಬಿಟ್ಟು ಅವೈಜ್ಞಾನಿಕ ವಿಷಯಗಳು ಅಂದರೆ ಪಠ್ಯಪುಸ್ತಕದಲ್ಲಿ ದೇವರು, ಧರ್ಮ, ಪುನರ್ಜನ್ಮ, ಕರ್ಮ, ಹಣೆಬರಹ, ಅದೃಷ್ಟ, ನರಕ, ಸ್ವರ್ಗ ಇದನ್ನು ನಮ್ಮ ಹುಡುಗರಿಗೆ ಹೇಳಿಕೊಡುವುದು.

ಶ್ರೀ ಯಡಿಯೂರಪ್ಪ.—ಇದರ ಬಗ್ಗೆ ಎಲ್ಲಾ ಚಿಂತೆ ಮಾಡುತ್ತಿದ್ದೀರಲ್ಲ, ಅದಕ್ಕೆ ನನ್ನ ಧನ್ಯವಾದಗಳು.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇದನ್ನೇ ಚಿಂತೆಮಾಡುವುದು. ವಿದ್ಯಾರ್ಥಿಗಳಿಗೆ ಶೋಷಣೆ ಮಾಡಬೇಡಿ, ಜನಗಳನ್ನು ಶೋಷಣೆ ಮಾಡಬೇಡಿ ಎಂದು ಹೇಳುವ ಜನ ನಾವು. ನಾವು ಅದೇ ರೀತಿ ಮಾಡಿಕೊಂಡು ಬರುತ್ತಿದ್ದೇವೆ. ಈಗ ನನ್ನ ದೊಡ್ಡ ಆರೋಪ ಏನೆಂದರೆ, ಈಗ 8 ನೇ ತಿಂಗಳಲ್ಲಿ ನಿಮ್ಮದು ನಡೆಯುತ್ತಿದೆ. ನಾವು ಮೊದಲಿಂದಲೂ ನಡೆದುಕೊಂಡು ಬಂದ ರೀತಿ ನೋಡುತ್ತಿದ್ದೇವೆ. ಇದು ಹೇಳಿದ ತಕ್ಷಣ ದೇವರಲ್ಲಿ ನಂಬಿಕೆ ಇಡಬಾರದು, ನರಕ, ಸ್ವರ್ಗದಲ್ಲಿ ನಂಬಿಕೆ ಇಲ್ಲ ಎಂದು ಹೇಳುತ್ತಿಲ್ಲ. ಯಾರಿಗೆ ನಂಬಿಕೆ ಇದೆ ಅವರು ದೇವಸ್ಥಾನಗಳಿಗೆ, ಗುಡಿಗಳಿಗೆ ಹೋಗಿ ಪೂಜೆ ಮಾಡಿಸಲಿ. ಆದರೆ, ಇದರಿಂದ ವೈಜ್ಞಾನಿಕವಾದ ವಿಚಾರಧಾರೆಯನ್ನು ಹುಡುಗರಿಗೆ ತಿಳಿಸಲಿಕ್ಕೆ ಆಗುತ್ತದೆಯೇ ? ಈ ಸಂದರ್ಭದಲ್ಲಿ ನಾನು ನಾಲ್ಕೈದು ನಿದರ್ಶನಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇದೊಂದು ಪಠ್ಯ ಪುಸ್ತಕ, ಇಂದಿನ ಶಿಕ್ಷಣ ಪದ್ಧತಿ, "ಅಸಂಗತ, ಅವೈಜ್ಞಾನಿಕ". 1982 ನೇ ಇಸವಿಯಲ್ಲಿ ಇದನ್ನು ಬರೆದಿದ್ದಾರೆ. ಇದನ್ನು ಬರೆದವರು ಶ್ರೀಮಾನ್ ಬಿ. ಭಾಸ್ಕರ್‌ರಾವ್. ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪಾಧ್ಯಾಯರಾಗಿದ್ದಾರೆ. ಇದು 7 ನೇ ತರಗತಿಯ ಹುಡುಗರ ಪಠ್ಯಪುಸ್ತಕ. ಈ ಪಠ್ಯಪುಸ್ತಕದ ಮೊದಲನೆಯ ಪಾಠ 'ವಾಯುಭೂತಿಯ ಕಥೆ'. ಅದು ಹೀಗಿದೆ.

"ವಾಯುಭೂತಿ ಮತ್ತು ಅಗ್ನಿಭೂತಿ, ಇಬ್ಬರು ಸಹೋದರರು ; ಅಣ್ಣ ಅಗ್ನಿಭೂತಿ, ತಮ್ಮ ವಾಯುಭೂತಿ. ಅಣ್ಣ ಒಳ್ಳೆಯವ, ತಮ್ಮ ಕೆಡುಕ. ವಾಯುಭೂತಿ ವಿದ್ಯೆ ಕೊಟ್ಟ ಗುರುಗಳಿಗೇಷ್ಟ ಅವಮಾನ ಮಾಡಿದ. ಧರ್ಮವನ್ನು ಹಳಿದ." 7 ನೇ ತರಗತಿಯವರೆಗೆ ಧರ್ಮ ಅಂದರೆ ಏನು, ಹಳಿದ ಅಂದರೆ ಏನು ಎಂದು ಗೊತ್ತಾಗುವುದಿಲ್ಲ. "ವಾಯುಭೂತಿಯು ಯೌವನ ಮದದಿಂದ ಗುರುಗಳನ್ನು ತಿರಸ್ಕರಿಸಿದುದರಿಂದಲೂ, ಧರ್ಮವನ್ನು ಹಳಿದುದರಿಂದಲೂ, ಅತ್ತಿಗೆಯನ್ನು ಅಪಮಾನಗೊಳಿಸಿದುದರಿಂದಲೂ ಕುಷ್ಠರೋಗಕ್ಕೆ ತುತ್ತಾಗಿ ನರಳಿ ಸತ್ತನು. ತಾನು ಹಿಂದೆ ಮಾಡಿದ ಪಾಪದ ಫಲವಾಗಿ ಕತ್ತೆಯಾಗಿ ಜನಿಸಿದನು. ಅನಂತರ ನಾಯಿಯಾಗಿ ಹುಟ್ಟಿ, ಸತ್ತು, ತರುವಾಯ ಮನುಷ್ಯ ಜನ್ಮದಲ್ಲಿ ಕುರೂಪಿಯೂ ಕುರುಡಿಯೂ ಆದ ಹೆಣ್ಣಾಗಿ ಜನ್ಮ ತಾಳಿದನು," ತಾವು ಇದನ್ನು ಒಪ್ಪಿಕೊಳ್ಳುತ್ತೀರಾ ? ಇದು ಅವೈಜ್ಞಾನಿಕವಾದುದು ಎಂದು ಗುರುಗಳನ್ನು ತಿರಸ್ಕರಿಸಿದರೆ, ಧರ್ಮವನ್ನು ಹಳಿದರೆ, ಅತ್ತಿಗೆಯನ್ನು ಅಪಮಾನಗೊಳಿಸಿದರೆ ಕುಷ್ಠರೋಗ ಬರುತ್ತದೆಯಂತೆ? ಈ ರೋಗ ಬಂದರೆ ನರಳಿ ಸಾಯುತ್ತಾರಂತೆ. ಪಾಪವನ್ನು ಈ ಜನ್ಮದಲ್ಲಿಯೇ ಮಾಡಬೇಕಾಗಿಲ್ಲ. ಹಿಂದಿನ ಜನ್ಮದಲ್ಲೂ ಮಾಡಿ ಶೇಖರಿಸಿಡಬಹುದು. ಹಾಗೆ ಶೇಖರಿಸಿಟ್ಟ ಪಾಪವಿದ್ದರೆ, ಕತ್ತೆಯಾಗಿ ಹುಟ್ಟುತ್ತಾರಂತೆ, ಅನಂತರ ಕತ್ತೆಯಾಗಿದ್ದು ಸತ್ತರೆ, ನಾಯಿಯಾಗಿ ಹುಟ್ಟುತ್ತಾರಂತೆ, ಆ ನಾಯಿ, ಕೊನೆಗೆ ಮನುಷ್ಯ ಜನ್ಮದಲ್ಲಿ

ಕುರೂಪಿಯೂ ಕುರುಡಿಯೂ ಆದ ಹೆಣ್ಣಾಗಿ ಹುಟ್ಟುತ್ತದೆಯಂತೆ. ಇದೇನು ಇದು ?

ಒಬ್ಬ ಸದಸ್ಯರು.—ತಮಗೆ ಧರ್ಮದ ಮೇಲೆ ನಂಬಿಕೆ ಇದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಧರ್ಮಕ್ಕೂ ಇದಕ್ಕೂ 100 ಮೈಲಿ ದೂರ. ಮಾನವೀಯತೆ ಇರಬೇಕು. ಆದರೆ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ನಾನು ಒಂದು ಸಲಹೆ ಕೊಡುತ್ತೇನೆ. ಎಡ್‌ಗಾರ್ಡ್‌ರವರ "ರಿಸರ್ಚ್" ಅಂಡ್ "ಬಿಹೈಂಡ್ ಐರನ್ ಕರ್ಟನ್"—ಈ ಎರಡು ಪುಸ್ತಕಗಳನ್ನು ಓದಿದರೆ ನೀವು ಸಿದ್ಧಾಂತ ಒಪ್ಪಿಕೊಳ್ಳುತ್ತೀರಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಸೋವಿಯಟ್‌ಗೆ ಹೋಗಿ ಬಂದಿದ್ದೇನೆ.

ಶ್ರೀ ಹೆಚ್. ಗಂಗಾಧರನ್.—ಜಟಕಾಗಾಡಿ ಕುದುರೆ ಇದ್ದಹಾಗೆ, ಮುಖಕ್ಕೆ ಮುಖವಾಡ ಹಾಕಿ ತೋರಿಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಮೂಢರಲ್ಲ. ತಮಗೆ ಎಷ್ಟು ಗೊತ್ತಿದೆ, ನಮಗೂ ಅಷ್ಟೇ ಗೊತ್ತಿದೆ. ತಮಗೆ ಸ್ವಲ್ಪ ಜಾಸ್ತಿ ಗೊತ್ತಿರಬಹುದು—ಅಂದರೆ ತಪ್ಪಲ್ಲ. ಇನ್ನು ಒಂದು ಪುಸ್ತಕ "ಕನ್ನಡ ಭಾರತಿ" ಎಂದು ಇದೆ. ಅದರಲ್ಲಿ ಚರಕದ ಬಗ್ಗೆ ಬರೆದಿದ್ದಾರೆ. ನಮ್ಮ ಮಕ್ಕಳಿಗೆ ಚರಕ ಅಂದರೆ ಏನು ಎನ್ನುವುದು ಇನ್ನೂ ಅನೇಕರಿಗೆ ಗೊತ್ತಿಲ್ಲ. ಬೆಂಗಳೂರು ಸಿಟಿಯಲ್ಲೂ ಎಷ್ಟೋ ಮಕ್ಕಳಿಗೆ ಚರಕ ಅಂದರೆ ಗೊತ್ತಿಲ್ಲ. ಹಳ್ಳಿಯಲ್ಲಿರತಕ್ಕ ಎಷ್ಟೋ ಮಕ್ಕಳಿಗೂ ಚರಕ ಅಂದರೆ ಗೊತ್ತಿಲ್ಲ. ಅದನ್ನು ಅವರು ಕಂಡಿರಲಾರರು. ಈ ಚರಕದ ಬಗ್ಗೆ ಏನು ಹೇಳಿದ್ದಾರೆ ಅಂದರೆ. "ಚರಕ", ಎನ್ನುವ ಪದ ನಮ್ಮ ಮಕ್ಕಳಿಗೆ, ಮುಖ್ಯವಾಗಿ ನಗರ ಪ್ರದೇಶದ ಮಕ್ಕಳಿಗೆ, ಅಜ್ಞಾತಖಂಡವಲ್ಲವೇ ? ಈಗ ಚರಕದಿಂದ ಎಷ್ಟು ಜನ ದಾರ ತೆಗೆಯುತ್ತಾರೆ ? ಇಲ್ಲಿ ಚರಕ ಎನ್ನುವ ಪದಕ್ಕೆ ಪುನರಾವರ್ತನೆ ಮಾಡುತ್ತಾರೆ ಅದು ಹೀಗಿದೆ:

"ಈ ಚರಕ ಮರದ ಚರಕ,
ಒಣಮರದ ಚರಕ
ಈ ಚರಕ ಬಡವರ ಚರಕ
ಆ ಚರಕ ಇತರರ ಚರಕ
ಇತರರ ಚರಕ ಅಂದ
ಬಡವರ ಚರಕ, ಶ್ರೀಮಂತರ ಚರಕ" ಹೀಗೆ ಅದರಲ್ಲಿ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪದಲಾಲಿತ್ಯ ಚೆನ್ನಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಪಾಠ 21 ರಲ್ಲಿ ಏನು ಹೇಳಿದ್ದಾರೆ ಅಂದರೆ, ತಕಲಿಯ ಬಗ್ಗೆ ಹೇಳಿದ್ದಾರೆ. ಅದು ಹೀಗೆ ಇದೆ:

ಹಿಡಿಯಿರಿ ತಕಲಿ,
ಹಿಡಿಯಿರಿ ಹಂಜಿ
ತಿರುವಿರಿ ತಕಲಿ
ಗಿರಿಗಿರಿ ಗಿರಿಗಿರಿ
ಬಂದಿತು ಬಂದಿತು
ಎಳೆಗಳ ದಾರ
ಎಳೆ ಎಳೆಯಾಗಿ
ಎಳೆಯಲು ದಾರ
ಹೋಳೆ ಹೋಳೆಯಾಗಿ
ಬೆಳೆಯಲು ದಾರ
ಎಳೆಯಿರೆ ದಾರ
ಬೆಳೆವುದು ದಾರ
ಕಳೆವುದು ನರಕ
ಬರುವುದು ನಾಕ
ಹಿಡಿಯಿರಿ ತಕಲಿ
ಹಿಡಿಯಿರಿ ಹಂಜಿ

ತಕಲಿಯನ್ನು ಹಿಡಿದರೆ ಸ್ವರ್ಗಕ್ಕೆ ಹೋಗುತ್ತಾರೆಯಂತೆ. ಇನ್ನೊಂದು ತಮಾಷೆ ಹೇಳಬೇಕೆಂದರೆ, 'ಕನ್ನಡ ಭಾರತಿ' 6 ನೇ ಪಾಠ ಓದಿದರೆ ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ಈ ವಯಸ್ಸಿನಲ್ಲಿ ಈ ಪುಸ್ತಕ ಏತಕ್ಕೆ ಓದಲಿಕ್ಕೆ ಹೋದಿರಿ ?

ಶ್ರೀ ಎಂ. ಎಸ್. ಕೃಷ್ಣನ್.—ಏನಾದರೂ ರಿಸರ್ಚ್ ಮಾಡಬೇಕೆನಿಸಿತು. ಮಾನ್ಯ ಮಂತ್ರಿಗಳಿಗೆ ತಿಳುವಳಿಕೆ ಕೊಡೋಣ ಎಂದು ಓದಿದ್ದೇನೆ. ಏನಾದರೂ ಒಂದು ಗುರಿಯನ್ನು ಇಟ್ಟುಕೊಂಡು ಓದಬೇಕಾಗುತ್ತದೆ.

ಶ್ರೀ ಪಿ. ರಾಮ್‌ದೇವ್.—ತಾವು ಹೇಳುವ ರೀತಿಯಲ್ಲಿ ನೋಡಿದರೆ ಮಾನ್ಯ ಮಂತ್ರಿಗಳು ಪ್ರೀ-ಪ್ರೈಮರಿಯಿಂದ ಕಾಲೇಜಿನವರೆಗೆ ಎಲ್ಲಾ ಪುಸ್ತಕಗಳನ್ನು ಓದಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಅವರು ಇದನ್ನು ತಪ್ಪು ತಿಳಿದುಕೊಳ್ಳಬಾರದೆಂದು ನಾವು ಹೇಳುತ್ತಿದ್ದೇವೆ. ನಾನು ಮತ್ತು ಅವರು ಇಬ್ಬರೂ ಮಧ್ಯೆ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಇಬ್ಬರ ಮಧ್ಯೆ ಮಾಡುವುದಕ್ಕೆ ನೀವು ಹೋದರೆ ಹಳ್ಳಕ್ಕೆ ಹೋಗುತ್ತೀರಿ. ನಾನು ಹೇಳುವುದನ್ನು ತಾವು ಕೇಳಿ. ಇಲ್ಲಿ ಒಂದು ಪುಸ್ತಕ ಇದೆ. ಇದು "ಕನ್ನಡ ಭಾರತಿ". ಇದರಲ್ಲಿ 6ನೇ ಪಾಠದಲ್ಲಿ ಏನು ಬರೆದಿದೆ ಎಂದರೆ "ಒಮ್ಮೆ ಆ ಪ್ರಾಂತ್ಯದಲ್ಲಿ ದೊಡ್ಡ ಕ್ಷಾಮ ತಲೆದೋರಿತು; ದೈವವಶಾತ್ ಶಾರದಾದೇವಿಯವರ ಮನೆಯಲ್ಲಿ ಹೆಚ್ಚಾಗಿ ದವಸ ಧಾನ್ಯ ಇದ್ದುದರಿಂದ ಅವರ ಮನೆಯವರು ಬಡವರಿಗೆ ಅಡಿಗೆ ಮಾಡುತ್ತಿದ್ದರು." ಪಾಪ, ಈ ಶಾರದಾದೇವಿಯವರು ಭಾರೀ ದೊಡ್ಡ ಜಮೀನ್ದಾರರ ಹೆಂಡತಿ ಎಂದು ಕಾಣಿಸುತ್ತದೆ. ಬಡವರಿಗಾಗಿ ಅವರು ದವಸಧಾನ್ಯವನ್ನು ಇಟ್ಟಿದ್ದರು. ಅವರು ಬಡವರಿಗಾಗಿ ಅಡಿಗೆ ಮಾಡಿಸುತ್ತಿದ್ದರು. ಅಂದರೆ ಈ ದೇಶದಲ್ಲಿ ಎಲ್ಲಾ ದೈವವಶಾತ್. ಜಮೀನ್ದಾರ ದೈವವಶಾತ್ ಜಮೀನ್ದಾರನಾದುದು. ಒಕ್ಕಲಿಗ ದೈವವಶಾತ್ ಒಕ್ಕಲಿಗನಾದುದು, ಹರಿಜನರು ದೈವವಶಾತ್ ಹರಿಜನರಾದರು. ಬಿರ್ಲಾ ದೈವವಶಾತ್ ಬಿರ್ಲಾ ಆದ. ಅವರಿಗೆ 1076 ಕೋಟಿ ರೂ. ಬಂದಿದ್ದೂ ದೈವವಶಾತ್: ಹಿಂದೆ ತಲೆಯ ಮೇಲೆ ಮಲ ಹೊರುತ್ತಿದ್ದರು. ಅದನ್ನು ದೈವವಶಾತ್ ಬಸವಲಿಂಗಪ್ಪನವರು ಬಂದು ತಡೆಗಟ್ಟುವುದಕ್ಕೆ ಪ್ರಯತ್ನಪಟ್ಟರು. ಅಂದರೆ ನಮ್ಮ ದೇಶದಲ್ಲಿ ಪ್ರತಿಯೊಂದೂ ದೈವವಶಾತ್ ಆಗತಕ್ಕದ್ದೇ. ಮಾನ್ಯ ಸಭಾಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಇದರಲ್ಲಿ ಇಷ್ಟು ಮಾತ್ರವಲ್ಲ. ನಮ್ಮದು ಜಾತ್ಯಾತೀತ ರಾಷ್ಟ್ರ ಎಂದರೂ, ಕೋಮುವಾರು ಜಂಜಾಟ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇದಕ್ಕೆ ಅವಕಾಶವನ್ನು ಕೊಡದ ರೀತಿಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕು. ಈ ಬಗ್ಗೆ ತಜ್ಞರ ಅಭಿಪ್ರಾಯ ಕೂಡ ಇದ್ದೇ ಇದೆ. ಎಲ್ಲ ಕಮಿಷನ್‌ನವರೂ ಕೂಡ ಇದನ್ನೇ ಹೇಳುತ್ತಾರೆ. ಆದರೆ ಇಲ್ಲಿ ಏನು ಬರೆದಿದೆ ಎಂದರೆ: ದ್ವಿತೀಯ ಬಿ.ಕಾಂ,ಗೆ ಗೊತ್ತುಮಾಡಿರುವ ಹಿಂದಿ ಪುಸ್ತಕದಲ್ಲಿ ಒಂದು ಪ್ರಬಂಧ "ಮಿತ್ರತಾ" (ಗೆಳೆತನ) ಕುರಿತು ಹೇಳಿರುವುದು ಈ ರೀತಿ ಇದೆ:

"ನನ್ನ ಅಭಿಪ್ರಾಯದಲ್ಲಿ ವಾಜಿದ್ ಆಲಿಶಾನಂತೆ ಭೋಗ ವಿಲಾಸ ನಡೆಸುವುದಕ್ಕಿಂತ ಮಹಾರಾಣಾ ಪ್ರತಾಪ್‌ನಂತೆ ಸಂಕಟದಲ್ಲಿ ದಿನ ಕಳೆಯುವುದು ಒಳ್ಳೆಯದು. ನನ್ನ ಅಭಿಪ್ರಾಯದಲ್ಲಿ ಔರಂಗಜೇಬನ ಸವಾರರಂತೆ ಹುಕ್ಕಾ ಮತ್ತು ಮದ್ಯಪಾನದೊಂದಿಗೆ ಸಾಯುವುದು ಉತ್ತಮ."

ಈ ವಾಕ್ಯಗಳಲ್ಲಿರುವ ಹೋಲಿಕೆಗಳನ್ನು ಗಮನಿಸಿ, ಮುಸ್ಲಿಂ ದೊರೆಯನ್ನು ಹಿಂದೂ ರಾಜನಿಗೆ ಹೋಲಿಸಿಕೊಂಡು ಇಂಥ ತೀರ್ಮಾನಗಳನ್ನು ಕೊಟ್ಟಿರುವುದು ಸೆಕ್ಯುಲರ್ ಸಮಾಜದಲ್ಲಿ ಮತೀಯ ಘರ್ಷಣೆಗೆ ಕಾರಣವಾಗಲಾರವೇ? ಸೆಕ್ಯುಲರ್ ಎಂದುಕೊಳ್ಳುವ ಒಂದು ದೇಶದ ಶಿಕ್ಷಣ ಪದ್ಧತಿಯಲ್ಲಿ ಇಂಥ ವಾಕ್ಯಗಳು ಪಾಠಗಳಲ್ಲಿ ಬೋಧಿಸಲ್ಪಡುವುದು ವಿರೋಧಾಭಾಸವಲ್ಲವೇ?

ಇನ್ನೊಂದು ಕಡೆ ಹಿಟ್ಲರನ ಬಗ್ಗೆ ಹೀಗೆ ಹೇಳಿದ್ದಾರೆ:

"ಜನರಲ್ಲಿ ಸಿಪಾಯಿ ಶಿಸ್ತು ರಕ್ತಗತವಾಗುವಂತೆ ಮಾಡಿದನು. ಎಲ್ಲರನ್ನೂ ಯೋಧರಂತೆ ಮಾಡಿದನು. ಇವನು ಕೈಗಾರಿಕೆ, ವ್ಯಾಪಾರ, ವಾಣಿಜ್ಯಾದಿಗಳನ್ನು ಉತ್ತಮಪಡಿಸಿದನು. ಜರ್ಮನಿಯ ದಂಡು ಜಲಾಂತರ ನೌಕಾ ನಾಶಕಾರಿಗಳ ಪಡೆ ಅತ್ಯಂತ ಬಲಶಾಲಿಯಾಗಿತ್ತು. ಸಾಮಾಜಿಕ ಶುದ್ಧತೆಯ ರಕ್ಷಣೆಗಾಗಿ ಯಹೂದ್ಯರನ್ನು ದೇಶಾಂತರಪಡಿಸಿದನು. ಒಂದೇ ಜನ. ಒಂದೇ ಪಕ್ಷ. ಒಬ್ಬನೇ ನಾಯಕ ಎಂದು ಜನರೆಲ್ಲಾ ಜಯಕಾರ ಮಾಡಿದರು. ಇಂಥ ಹಿಟ್ಲರ್ ಭಕ್ತಿಭಾವಪೂರಿತ ಪಾಠ ಇವತ್ತು ಖಂಡಿತ ಜರ್ಮನಿಯಲ್ಲೂ ಇಲ್ಲ. ಇದನ್ನು ಬರೆದವನಿಗೆ ನಡುಬೀದಿಯಲ್ಲಿ ಬಂದೂಕುಸೇವೆ ಉಚಿತ, ಜಲಾಂತರ ನೌಕಾನಾಶಕಾರಿ ಸಬ್‌ಮೆರಿನ್ ಅಂದರೆ ಪ್ಯೈಲಿಗೆ ಆಗುತ್ತದೆಯೇ?"

ಸ್ವಾಮಿ. ಹಿಟ್ಲರನನ್ನು ಹೊಗಳುವವರನ್ನು ನೋಡುತ್ತಿದ್ದೇವೆ. ಪ್ರಪಂಚ ಆದಮೇಲೆ 2 ಕೋಟಿ ಜನ ಸೋವಿಯತ್‌ನಲ್ಲಿ ಸತ್ತಿದ್ದಾರೆ. ಕೋಟ್ಯಾಂತರ ಜನರು ಬೇರೆ ಕಡೆ ಸತ್ತಿದ್ದಾರೆ. ಯಹೂದಿಗಳನ್ನು ಗ್ಯಾಸ್ ಛೇಂಬರ್‌ನಲ್ಲಿ ಹಾಕಿ ಸಾಯಿಸಿದ್ದಾರೆ. ಈ ಪಾಠವನ್ನು ಯಾರು ಬರೆದಿದ್ದಾರೆ. ಅವರು ಯಾವ ಪದವಿಯಲ್ಲಿ ಇದ್ದಾರೋ ಗೊತ್ತಿಲ್ಲ. ಅವರು ಯಾವ ಪದವಿಯಲ್ಲಿದ್ದರೂ ಸರಿಯೇ. ಅವರನ್ನು ಆ ಪದವಿಯಿಂದ ಕಿತ್ತುಹಾಕಬೇಕು. ಇಷ್ಟೇ ಅಲ್ಲ. ಇಲ್ಲಿ ಏನು ಹೇಳಿದ್ದಾರೆಂದರೆ, ಅವನನ್ನು ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಗೆ ಹೋಲಿಸಿದ್ದಾರೆ. ಇದನ್ನು ತಾವು ಓದಿ. ಮಹಾತ್ಮಾ ಗಾಂಧಿ ಮತ್ತು ಇವರು ಇಬ್ಬರೂ ಒಂದೇ ರೀತಿಯ ಜನ ಎಂದು ಬರೆದಿದ್ದಾರೆ. ನಾನು ಇದನ್ನು ಓದುವುದಕ್ಕೆ ಹೋಗುವುದಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಂಥ ಮೂಢನಂಬಿಕೆ; ಅವೈಜ್ಞಾನಿಕ ವಿಚಾರಗಳನ್ನು ಬೆಳೆಸತಕ್ಕ ಪ್ರವೃತ್ತಿ ನಮ್ಮ ರಾಜ್ಯದಲ್ಲಿದೆ. ತಾವು ಪ್ರತಿಯೊಂದು ಪಠ್ಯಪುಸ್ತಕವನ್ನೂ ಓದಿ ನೋಡಿ. ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಸರಿಯಾದ ಸಮಿತಿಯನ್ನು ನೇಮಕ ಮಾಡಬೇಕು. ಜಾತ್ಯಾತೀತದ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ, ಸಮಾಜವಾದದ ಬಗ್ಗೆ ಯಾರಿಗೆ ನಿಷ್ಠೆ ಇದೆ ಅಂಥವರನ್ನು ಆ ಸಮಿತಿಯಲ್ಲಿ ಹಾಕಿ ಈ ಪಾಠಗಳನ್ನು ಪುನರ್ವಿಮರ್ಶೆಮಾಡಿ ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ಅನೇಕ ಪ್ರೈವೇಟ್ ಎಜುಕೇಷನ್

ಇನ್‌ಸ್ಟಿಟ್ಯೂಷನ್‌ಗಳಲ್ಲಿ ಯಾವ ರೀತಿ ಶೋಷಣೆಯಾಗುತ್ತಿದೆ ಎಂಬುದನ್ನು ಪ್ರತಿಯೊಬ್ಬರೂ ಹೇಳಿದ್ದಾರೆ. ನಾನು ರಾಜಾಜಿನಗರದಿಂದ ಬಂದಿರುವವನು. ಅಲ್ಲಿ ಬರೀ ಇಂಥಾದ್ದೇ ನಡೆಯುತ್ತಿದೆ. ಬಹಳಷ್ಟು ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ಖಾಸಗೀ ವಿದ್ಯಾ ಸಂಸ್ಥೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಬೇಕು. ಎ. ಸಿ. ದೇವೇಗೌಡರು ತಮ್ಮ ವರದಿಯಲ್ಲಿ ಪ್ರೈಮರಿ ಎಜುಕೇಷನ್‌ನನ್ನೂ ಕೂಡ ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದಾರೆ. ಆ ವರದಿ ನನ್ನ ಹತ್ತಿರ ಇದೆ. ಆದರೆ ಅದನ್ನು ಓದುವುದಕ್ಕೆ ಹೋಗುವುದಿಲ್ಲ. ದೇವೇಗೌಡರು ಯೂನಿವರ್ಸಿಟಿ ಎಜುಕೇಷನ್‌ನನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿಲ್ಲ. ಆದರೆ ಈ ಎಲ್ಲ ವರ್ಗದ ವಿದ್ಯಾಭ್ಯಾಸವನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಹೇಳುವವನು ನಾನು. ಮಾನ್ಯ ದೇವೇಗೌಡರು ಹೇಳಿದ್ದನ್ನೂ ಕೂಡ ತಾವು ಮಾಡುವುದಕ್ಕೆ ತಯಾರಿಲ್ಲ. ಗೂಳಿಗಳನ್ನು ಬಿಟ್ಟಂತೆ ಅವರನ್ನು ತಾವು ಬಿಟ್ಟುಬಿಟ್ಟಿದ್ದೀರಿ. ಅವರು ಮಕ್ಕಳ ಪೋಷಕರನ್ನು ಶೋಷಣೆ ಮಾಡುತ್ತಿದ್ದಾರೆ. ಮಲ್ಲೇಶ್ವರಂನಲ್ಲಿ ಒಬ್ಬರು ಇದ್ದಾರೆ. ಅವರು ವರ್ಷಕ್ಕೆ ಎರಡು ಸಾರಿ ಕಾಶ್ಮೀರಕ್ಕೆ ಹೋಗಿ ಬರುತ್ತಾರೆ. ಈ ವಿಚಾರ ಮಾನ್ಯ ರಾಮದೇವ್‌ರವರಿಗೂ ಗೊತ್ತಿದೆ. ಮೊದಲು ಅವರಿಗೆ ಏನೂ ಇರಲಿಲ್ಲ. ಈಗ ಬಹಳ ಶ್ರೀಮಂತರಾಗಿದ್ದಾರೆ. ಆದರೆ ಅವರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನೊಂದು ವಿಚಾರ ಏನೆಂದರೆ, ಯೂನಿವರ್ಸಿಟಿ ಎಜುಕೇಷನ್‌ನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ವೀರಪ್ಪ ಮೊಯ್ಲಿಯವರು ಒಂದು ಮಾತನ್ನು ಹೇಳಿದರು. ಅದನ್ನೂ ಕೂಡ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಇರತಕ್ಕ ವೈಸ್-ಛಾನ್ಸಲರ್ ನನ್ನ ಹಳೇ ಸ್ನೇಹಿತರು. ಆದರೆ ತಕರಾರು, ತೊಂದರೆಗಳು ಸಿಕ್ಕಾಪಟ್ಟೆ ಬರುತ್ತಿವೆ. ಪ್ರತಿದಿನ ವಿದ್ಯಾರ್ಥಿಗಳ ಮುಷ್ಕರ, ಉಪಾಧ್ಯಾಯರ ಮುಷ್ಕರ, ನಾನ್-ಟೀಚಿಂಗ್ ಸ್ಟಾಫ್‌ನ ಮುಷ್ಕರ—ಹೀಗಾಗಿ ತಮ್ಮ ಅಧೀನದಲ್ಲಿರುವ ಸಿಬ್ಬಂದಿವರ್ಗದ ಮೇಲೆ ಕಂಟ್ರೋಲ್ ಸಂಪೂರ್ಣವಾಗಿ ಇಲ್ಲದಂತಾಗಿ ಕೇವಲ ನಾಮ್‌ಕಾವಾಸ್ತೆ ವೈಸ್-ಛಾನ್ಸಲರ್‌ಗಿರಿ ಇಟ್ಟುಕೊಂಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಒಂದು ದೊಡ್ಡ ಕೋಮುವಾರು ಕೊಂಪೆಯೇ ಇದೆ. ಪ್ರತಿಯೊಬ್ಬರೂ ಜಾತಿಯ ಆಧಾರದ ಮೇಲೆಯೇ ಮಾತನಾಡುತ್ತಾರೆ. ಅದನ್ನು ಬಿಟ್ಟರೆ ಬೇರೆ ಯಾವುವನ್ನೂ ಅವರು ಮಾತನಾಡುವುವಕ್ಕೆ ಪಯಾರಿಲ್ಲ. ನೀವಾದರೂ ಈ ಕೋಮುವಾರು ನೀತಿಯನ್ನು ತೊಡುದುಹಾಕಿ ಪುಣ್ಯ ಕಟ್ಟಿಕೊಳ್ಳಿ.

ಇನ್ನು ಅನೇಕ ಮಾನ್ಯ ಸದಸ್ಯರುಗಳು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್‌ನವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ತಾವು ಕಾರ್ಯಗತ ಮಾಡಬೇಕೆಂಬದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ವಿದ್ಯಾರ್ಥಿಗಳನ್ನು ಬಿಳಿ ಇಲಿಗಳಂತೆ ಮಾಡಿದ್ದಾರೆ. ಇವರನ್ನು ಯಾವಾಗ ಬೇಕಾದರೂ ಹೇಗೆ ಬೇಕಾದರೂ ಕತ್ತರಿಸಬಹುದು. ಯಾವತ್ತು ಪರೀಕ್ಷೆ ಆಗುತ್ತದೆ, ಯಾವತ್ತು ಪರೀಕ್ಷೆ ಮುಗಿಯುತ್ತದೆ, ಯಾವಾಗ ಸೆಮಿಸ್ಟರ್ ಮುಗಿಯುತ್ತದೆ ಎಂಬುದು ಯಾವುದೂ ಗೊತ್ತಾಗುವುದಿಲ್ಲ. ನಾನು ಮೊನ್ನೆ ಒಂದು ಪ್ರಶ್ನೆಯನ್ನು ಕೇಳಿದಾಗ ತಾವು ಒಂದು ಉತ್ತರವನ್ನು ಕೊಟ್ಟಿರಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೊದಲನೇ ವರ್ಷದ ಪರೀಕ್ಷೆ ಇಂಥ ದಿವಸ ಪ್ರಾರಂಭವಾಗುತ್ತದೆಂದು ಹೇಳಿದಿರಿ. ಆದರೆ ಅವರು ಆ ಪರೀಕ್ಷೆಯನ್ನು ಮುಂದಕ್ಕೆ ಹಾಕಿದ್ದಾರೆ. ಯಾವತ್ತು ಪರೀಕ್ಷೆ ನಡೆಯುತ್ತದೆಂಬದು ವಿದ್ಯಾರ್ಥಿಗಳಿಗೆ ಗೊತ್ತಾಗದಿದ್ದರೆ ಅವರು ಏನು ಮಾಡಬೇಕು ? ಅಷ್ಟೇ ಅಲ್ಲ, ಅಲ್ಲಿನ ಪ್ರೊಫೆಸರ್‌ಗಳಿಗೂ ಪ್ರಿನ್ಸಿಪಾಲರಿಗೂ ಸರಿಯಾದ ಸಂಪರ್ಕ ಇಲ್ಲ. ಅಲ್ಲಿನ ಲೆಕ್ಚರರ್‌ಗಳೇ ಮುಷ್ಕರ ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಈ ವಿಚಾರವನ್ನು ಅಲ್ಲಿ ಹೋಗಿ ಕೇಳಿದಾಗ ಅವರು ಹೇಳಿದರು, ಅವರು ಮುಷ್ಕರವನ್ನು ಮಾಡಿದ್ದೇನೋ ನಿಜ. ಅವರನ್ನು ಈಗ ಸರಿಮಾಡಿದ್ದೇವೆ. ಅವರು ಕ್ಲಾಸಿಗೆ ಹೋಗುತ್ತಿದ್ದಾರೆಂದು ಹೇಳಿದರು. ವಿದ್ಯಾರ್ಥಿಗಳಿಗೆ ತೊಂದರೆ ಕೊಡಬಾರದೆಂದು ಅಲ್ಲಿನ ಪ್ರೊಫೆಸರ್‌ಗಳು ಪಾಠ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠ ಮಾಡಿ ಅನಂತರ ಹೊರಗಡೆ ಬಂದು ಅವರು ಮುಷ್ಕರ ಕೂತುಕೊಳ್ಳುತ್ತಿದ್ದರು. ಅಲ್ಲಿರತಕ್ಕ ಪ್ರಿನ್ಸಿಪಾಲರು ನನಗೆ ಒಳ್ಳೆಯ ಸ್ನೇಹಿತರು. ಅವರು ನಿಷ್ಠೂರವಾದಿಗಳು. ಅವರು ಎಲ್ಲರನ್ನೂ ಹಗೆಮಾಡಿಕೊಂಡರೆ ಅಲ್ಲಿ ಯಾವ ರೀತಿ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ?

ಇನ್ನೊಂದು ವಿಷಯ ಏನೆಂದರೆ ವಿದ್ಯಾರ್ಥಿಗಳಿಗೆ ಸಹಾಯವನ್ನು ಯಾವ ರೀತಿ ಕೊಡುತ್ತಿದ್ದೀರಿ, ಅದೇ ರೀತಿಯಾಗಿ ಅವರ ಹಕ್ಕು ಬಾಧ್ಯತೆಗಳಿಗೂ ಸಹಾಯವನ್ನು ಮಾಡಬೇಕು. ಅದನ್ನು ಮೊಟಕು ಮಾಡಬಾರದು. ವಿದ್ಯಾರ್ಥಿಗಳ ಹಕ್ಕುಬಾಧ್ಯತೆ. ಉಪಾಧ್ಯಾಯರ ಹಕ್ಕುಬಾಧ್ಯತೆ ಬಗ್ಗೆ ಯಾವ ರೀತಿ ಇದೆ ಅದನ್ನು ತೀರ್ಮಾನ ಮಾಡಬೇಕು.

ಇನ್ನು ಎರಡನೆಯ ವಿಷಯವಾಗಿ ಹೇಳುವುದಾದರೆ ಈ ಲೋಕಲ್ ಪ್ರೈಮರಿ ಟೀಚರ್ಸ್‌ಗಳನ್ನು ದಯವಿಟ್ಟು ಪರ್ಮನೆಂಟ್ ಮಾಡಬೇಕು. ಇದರಲ್ಲಿ 7,400 ಜನ ಇದ್ದರೆ ಸೆಕೆಂಡರಿ ಟೀಚರ್ಸ್ 1,100 ಜನರು ಇದ್ದಾರೆ. ಅವರ ರೋಸ್ಟರ್ ಪದ್ಧತಿಯನ್ನು ಜಾರಿಯಲ್ಲಿ ತಂದು ಅವರಿಗೆ ಈ ಮೂರು-ನಾಲ್ಕು ಸಾವಿರ ವೇಕೆನ್ಸೀಸ್ ಏನು ಇವೆ. ಅವುಗಳಲ್ಲಿ ಖಾಯಂ ಆಗಿ ಮಾಡಬಹುದು ಮಾನ್ಯ ವಿದ್ಯಾಮಂತ್ರಿಗಳು ಆ ರೀತಿ ಮಾಡಿ ಅವರ ಸಹಕಾರವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕಡ್ಡಾಯವಾಗಿ ತಾವು ಸಮಗ್ರವಾಗಿ

ಇದನ್ನು ನೋಡಬೇಕು. ಮಹಾತ್ಮಾ ಗಾಂಧಿಯವರು ಒಂದು ಮಾತನ್ನು ಹೇಳಿದ್ದಾರೆ. "ಹುಡುಗರನ್ನು ಮತ್ತು ಹುಡುಗಿಯರನ್ನು ಸಮಾಜಕ್ಕೆ ಕೆಡಕುಗಳು ಆಗದಂತೆ ಅಥವಾ ಇನ್ನಿತರ ಕೆಡಕುಗಳ ವಿರುದ್ಧವಾಗಿ ಹೋರಾಡುವುದಕ್ಕೆ ಸಿದ್ಧಗೊಳಿಸುವಂಥ ಶಿಕ್ಷಣವನ್ನು ಅವರಿಗೆ ಕೊಡಬೇಕು. ಅದನ್ನು ಜ್ಞಾಪಿಸಿಕೊಂಡು ಶಿಕ್ಷಣವನ್ನು ಪುನರ್ವಿಮರ್ಶೆ ಮಾಡಿ. ಜನತಾ ಸರ್ಕಾರ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯುತ್ತಾರೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಉಪಾಧ್ಯಕ್ಷರೇ, ವಿದ್ಯಾ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ನನಗೆ ಅಪ್ಪಣೆ ಕೊಟ್ಟಿದ್ದೀರಿ, ಅದಕ್ಕೆ ಪ್ರಥಮತಃ ತಮಗೆ ಅಭಿನಂದನೆಯನ್ನು ಮಾಡುತ್ತಾ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬೇಡಿಕೆಗೆ ನನ್ನ ವಿರೋಧ ಇದೆ ಎನ್ನುವುದನ್ನು ಪ್ರಸ್ತಾಪ ಮಾಡುತ್ತಾ, ಇವತ್ತು ನನ್ನ ದೃಷ್ಟಿಯಲ್ಲಿ ಮತ್ತು ಈಗಾಗಲೇ ನನ್ನ ಮಿತ್ರರಾದಂಥ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಪ್ರಸ್ತಾಪ ಮಾಡಿವ ವಿಚಾರಗಳನ್ನು ನಾನು ಅನುಮೋದನೆ ಕೊಡತಕ್ಕಂಥದ್ದು ಸಹಜ ಎನ್ನುವ ಅಭಿಪ್ರಾಯಕ್ಕೆ ಒಳಗಾದವನಾಗಿದ್ದರೂ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ. ನಾವೇ ಒಪ್ಪಿಕೊಂಡಿರತಕ್ಕಂಥ ರಾಜ್ಯಾಂಗ ಇದು. ಇದರಲ್ಲಿ ಮೊದಲೇ ಹೇಳಿದ್ದೇನೆ 'ಸೋಷಿಯಾಲಿಸಮ್, ಸೆಕ್ಯುಲ್ಯಾರಿಸಮ್ ಎನ್ನುವ ಮಾತನ್ನು ಬಳಸಿದ್ದೇವೆ. ಇಂಥ ಒಂದು ಸಮಾಜ ವ್ಯವಸ್ಥೆಯಾಗಬೇಕು ಎನ್ನುವ ದಿಸೆಯಲ್ಲಿ ನಮ್ಮ ಪೀಳಿಗೆಯನ್ನು ವ್ಯವಸ್ಥೆಗೊಳಿಸತಕ್ಕಂಥದ್ದು ನಮ್ಮ ಆದ್ಯಕರ್ತವ್ಯವಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಮೊದಲನೇ ತರಗತಿಯಿಂದ ಹಿಡಿದು ಪದವೀಧರರಾಗುವವರೆಗೂ ಕೂಡ ವಿದ್ಯಾರ್ಥಿಯ ಮನಸ್ಸನ್ನು ಆ ದಾರಿಯಲ್ಲಿ ತೆಗೆದುಕೊಂಡು ಹೋಗದೆ ಹೋದರೆ ಬಹಳಮಟ್ಟಿಗೆ ನಾವು ನಮ್ಮ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ನಿರ್ವಿವಾದವಾಗಿ ಹೇಳಬೇಕಾಗುತ್ತದೆ. ಇವೊತ್ತಿನ ದಿದಸ ನಾವು ನಡೆದುಬಂದ ದಾರಿ ಸರಿಯಿಲ್ಲ ಎನ್ನುವ ಮಾತನ್ನು ಪುಷ್ಟೀಕರಿಸುತ್ತ ಮಾನ್ಯ ಕೃಷ್ಣನ್‌ರವರು ಏಳನೆಯ ತರಗತಿಯ ಪಠ್ಯಪುಸ್ತಕಗಳನ್ನು ಇಟ್ಟು ಏನು ಉದಾಹರಿಸಿದರು, ಆ ಬಗ್ಗೆ ಕೆಲವು ಅಂಶಗಳನ್ನು ಹೇಳಬೇಕಾಗುತ್ತದೆ. ಇವತ್ತು ನಾವು ಇಲ್ಲಿ ಕುಳಿತು 150–200 ಕೋಟಿ ರೂಪಾಯಿಗಳ ಬೇಡಿಕೆಗೆ ಕೈ ಎತ್ತಿ ಕಳುಹಿಸಿಕೊಟ್ಟರೆ ನಮ್ಮ ಕರ್ತವ್ಯ ಮುಗಿದು ಹೋಗುವುದಿಲ್ಲ, ಅದು ಏನಾಗುತ್ತದೆ ಎನ್ನುವ ವಿಚಾರ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ನಾನು ಸವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಅದು ವಾದಗ್ರಸ್ತ ವಿಚಾರವಾಗಿರಬಹುದು, ಅದು ಬೇರೆ, ಆದರೆ ನಮ್ಮ ಗುರಿ ಇವತ್ತು ಜ್ಯಾತ್ಯಾತೀತ ರಾಷ್ಟ್ರ, ಜಾತ್ಯಾತೀತ ಸಮಾಜ, ಮತ್ತು ಸಮಾನ ಅವಕಾಶ ಇವೆಲ್ಲ ಇರಬೇಕು ಎಂದು ಹೇಳಿ ಅದರ ಮುಖ ಹಿಡಿದು ಅದು ಪ್ರಬುದ್ಧಾಕಾರಕ್ಕೆ ಸಾಗುವವರೆಗೂ ಕೂಡ ಒಂದು ದೃಷ್ಟಿಕೋನ ಇಲ್ಲದೆ ಹೋದರೆ, ಮತ್ತು ಅಂಥ ಪರಿಸರವನ್ನು ನಿರ್ಮಾಣ ಮಾಡದೇ ಹೋದರೆ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಇದ್ದಾದರೂ ಪ್ರಯೋಜನವೇನು ? ಇವತ್ತು ಸ್ವಾತಂತ್ರ್ಯವನ್ನು ಪಡೆದಂಥ ರಾಷ್ಟ್ರಗಳು ಆ ದಾರಿಯಲ್ಲಿ ಪ್ರಯತ್ನ ಪಟ್ಟಿದ್ದಾರೆ. ಅವರು ತಮ್ಮ ಭಾಷಣವನ್ನು ಮುಕ್ತಾಯಮಾಡುತ್ತಾ ಯಾವ ರಾಷ್ಟ್ರ ಪಿತಾಮಹ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರೋ ಅವರು ಆಗಾಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದು ಆರ್ಥಿಕ ನಿಲುವಿನಲ್ಲಿಯಾದರೂ ಆಗಿರಬಹುದು, ಕೈಗಾರಿಕಾ ನಿಲುವಿನಲ್ಲಿಯಾದರೂ ಆಗಿರಬಹುದು, ಅಥವಾ ವಿದ್ಯಾಭ್ಯಾಸದ ನಿಲುವಿನಲ್ಲಿಯಾದರೂ ಆಗಿರಬಹುದು. ಅವರು ಸಾಮಾಜಿಕ ವ್ಯವಸ್ಥೆ ಹೀಗಿರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಇವೊತ್ತಿನ ದಿವಸ ಅಸ್ಪೃಶ್ಯತೆ ಇರಬಾರದು ಎಂದು ಹೇಳುವುದು ಸಹಜ. 1933 ರಲ್ಲಿಯೇ ಉಪವಾಸ ಏನು ಆಯಿತು ಅವತ್ತು ಈ ಮಹಾಪದವನ್ನು ಬಳಸಿ ಅವರ ದೃಷ್ಟಿಯನ್ನು ಅಂದಿನ ದಿವಸವೇ ಇದರ ಕಡೆ ಹರಿಸಿದ್ದಾರೆ. ನಿನ್ನಲ್ಲಿ ಹರಿ ಇದ್ದಾನೆ, ಅವನಲ್ಲಿಯೂ ಕೂಡ ಹರಿ ಇದ್ದಾನೆ. ಹೀಗಿರುವಾಗ ಅವನನ್ನು ಏತಕ್ಕೆ ಅಸ್ಪೃಶ್ಯ ಎಂದು ಕರೆಯುತ್ತೀರಿ ? ಇವತ್ತು ಏನು ಅಸ್ಪೃಶ್ಯತೆ ಅಂದರೆ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಹರಿಜನರನ್ನು ಮುಟ್ಟಬೇಡಿ ಎಂದು ಹೇಳಿಕೊಂಡು ಗಂಟೆ ಹೊಡೆಯತಕ್ಕಂಥ ಪರಿಸ್ಥಿತಿ ಬಂದಿದೆ. ಇದು ಗಂಭೀರವಾಗಿ ಯೋಚಿಸತಕ್ಕ ವಿಚಾರ. ನಾನು ಇನ್ನೂ ಇದರ ಬಗ್ಗೆ ಆಳವಾಗಿ ಪ್ರಸ್ತಾಪ ಮಾಡ್ತ್ರತಕ್ಕಂಥ ಅವಶ್ಯಕತೆ ಇದೆ ಎನ್ನುವ ಒಂದು ಮಾತನ್ನು ಹೇಳುತ್ತಾ ಇದು ಯಾರು ಹೀಗೆ ಮಾಡಿದ್ದು ? ನಾವು ಮಾಡಿದ್ದೇವೆಯೇ ? ನೀವು ಮಾಡಿದಿರೇ ? ಎನ್ನುವುದು ಪ್ರಶ್ನೆ. ನಮ್ಮ ಹೊಣೆ ಏನು ? ಇವತ್ತು ನಾವು ಇಲ್ಲಿ ಕೆಲಸ ಮಾಡುವಾಗ ಈ ಸದನದಲ್ಲಿ ಕೆಲಸ ಮಾಡುವಾಗ ಸಹಾಯ ಕೊಡತಕ್ಕಂಥದ್ದು ನಮ್ಮ ಕರ್ತವ್ಯ. ಇದನ್ನು ವಿರೋಧ ಪಕ್ಷದಲ್ಲಿ ಕುಳಿತು ಮಾಡುತ್ತಿದ್ದೇವೆ. ಬೇರೆ ಬೇರೆ ಪಕ್ಷದವರು ವಿದ್ಯಾಭ್ಯಾಸವನ್ನು ಬೇರೆ ಬೇರೆ ರೀತಿಯಲ್ಲಿ ಇಟ್ಟುಕೊಂಡಿರಬಹುದು. ಆದರೆ ರಾಷ್ಟ್ರೀಯ ಐಕ್ಯತೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಬಗ್ಗೆ ಕೆಲವು ವಿಚಾರಗಳಲ್ಲಿ ಸಮಾನ ಚಿಂತನೆಯನ್ನು ನಾವು ಮಾಡುತ್ತಿದ್ದೇವೆಯೇ ಎನ್ನುವುದನ್ನು ಮರೆಯಲಿಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಲ್ಲಿ ವಿಚಾರ ಮಾಡುವಾಗ ಕೆಲವು ಉದಾಹರಣೆಗಳನ್ನು ಅವರು ಕೊಟ್ಟರು. ರಾಣಾ ಪ್ರತಾಪ ಸಿಂಗ್, ಔರಂಗಜೇಬ್ ಇವರ ಬಗ್ಗೆ ಮಾತನಾಡುವಾಗ ಒಳ್ಳೆಯ ಅಭಿಪ್ರಾಯ ಬರತಕ್ಕಂಥ ರೀತಿಯಲ್ಲಿ ಮಾಡಿದರೆ ನ್ಯಾಷನಲ್ ಇಂಟಿಗ್ರೇಷನ್‌ನ್ನು ಬೆಳೆಸಲೂ

ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಸ್ವಾಮಿ, ನನಗೆ ಕೊಟ್ಟಿರತಕ್ಕಂಥ ವೇಳೆಯಲ್ಲಿ ಎಲ್ಲ ವಿಚಾರಗಳನ್ನೂ ಕೂಡ ಸೂಕ್ಷ್ಮವಾಗಿ ಪ್ರಸ್ತಾಪ ಮಾಡುವುದಕ್ಕೆ ಇವತ್ತು ಸಮಯವಿಲ್ಲ. ಒಂದೊಂದೇ ಹೇಳುತ್ತಾ ಹೋದರೆ ಬಹಳ ಕಾಲ ತೆಗೆದುಕೊಳ್ಳ ಬೇಕಾಗುತ್ತದೆ. ನನಗೆ ಈಗಾಗಲೇ ತಾವು ಗಡುವನ್ನು ಹಾಕಿದ್ದೀರಿ, ಅಷ್ಟರಲ್ಲಿಯೇ ಮುಗಿಸುತ್ತೇನೆ. ಇಲ್ಲಿ ಮ್ಯಾಥಮ್ಯಾಟಿಕ್ಸ್ ಮತ್ತು ಸೈನ್ಸ್—ಇದರಲ್ಲಿ ಚಿಂತನೆ ಮಾಡುತ್ತಿದ್ದೇವೆಂದು ಹೇಳಿರುತ್ತಾರೆ. ಇದರ ಬಗ್ಗೆ ಸ್ವಲ್ಪ ನಾನು ಹೇಳಬೇಕಾಗುತ್ತದೆ. ಮಕ್ಕಳನ್ನು ಈ ದಿಸೆಯಲ್ಲಿ ತಯಾರು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆಂದು ಹೇಳಿದ್ದಾರೆ. ಇವತ್ತು ಈ ದಿಸೆಯಲ್ಲಿ ಹೋಗುವುದಕ್ಕೆ ನಿಮ್ಮ ಪ್ರಯತ್ನ ಹೇಗೆ ಮಾಡಿದ್ದೀರಿ ಎಂದರೆ ಸಣ್ಣ ಮಗುವಿನ ಬಾಯಿಗೆ ದೊಡ್ಡ ಚೆಂಡನ್ನು ತುರುಕತಕ್ಕಂಥ ಪ್ರಯತ್ನ ಮಾಡಿದ್ದೀರಿ. ಐದನೇ ಸ್ಟ್ಯಾಂಡರ್ಡ್ ಓದತಕ್ಕಂಥ ಮಗು 'ಪೈಅರ್-ಸ್ಕ್ವೈರ್' ಲೆಕ್ಕವನ್ನು ಮಾಡಬೇಕೆಂದರೆ ಹೇಗೆ ಸಾಧ್ಯ? ಆ ಮಗುವಿಗೆ 10–12 ನೇ ಮಗ್ಗಿ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಹಳ್ಳಿಗಳಲ್ಲಿರತಕ್ಕಂಥ ಮಕ್ಕಳ ಮಾತು ಬೇರೆ. ಪೈಅರ್ ಸ್ಕ್ವೈರ್ ಮೊದಲು ಏಳನೇ ತರಗತಿಯಿಂದ ಕಲಿಸುಕೊಡುತ್ತಿದ್ದರು. ಪಟ್ಟಣ ಪ್ರದೇಶಗಳಲ್ಲಿ ಟ್ರೈನಿಂಗ್ ಕೊಟ್ಟಿರತಕ್ಕಂಥ ಉಪಾಧ್ಯಾಯರು ಹೇಳಿಕೊಟ್ಟಿರಬಹುದು. ಆದರೆ ಹಳ್ಳಿಗಳಲ್ಲಿ ಏಕೋಪಾಧ್ಯಾಯ ಎನ್ನುವವನು ಇದ್ದಾನಲ್ಲ, ಸಿಟ್ಟು ಬಂದರೆ 'ಏನೋ ಉಪಾಧ್ಯಾಯ' ಎನ್ನುವುದೂ ಉಂಟು. ಅವರು ಎಸ್.ಎಸ್.ಎಲ್.ಸಿ. ಪಾಸ್ ಆಗಿರತಕ್ಕಂಥವರು, ಅವರಿಗೆ ಟ್ರೈನಿಂಗ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ, ಅವನು ಹೇಗೆ ಹೇಳಲು ಸಾಧ್ಯವಾಗುತ್ತದೆ. ದೊಡ್ಡ ಸಂಖ್ಯೆಯಲ್ಲಿ 49 ಲಕ್ಷ ವಿದ್ಯಾರ್ಥಿಗಳು ಪ್ರೈಮರಿ ಶಾಲೆಗಳಲ್ಲಿ ಇದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಹಳ್ಳಿಗಾಡಿನಲ್ಲಿರತಕ್ಕಂಥ ಶಾಲೆಗಳ ಸಂಖ್ಯೆ ಎಷ್ಟು? ನಮಗೆ ಸಂತೋಷ ಈ ವಿಚಾರವನ್ನು ಕೇಳತಕ್ಕಂಥದ್ದಕ್ಕೆ! ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರ ಬಗ್ಗೆ ಹಲವು ಸದಸ್ಯರು ಕಳಕಳಿಯಿಂದ ವ್ಯಾಖ್ಯಾನ ಮಾಡಿದ್ದಾರೆ. ಆದರೆ ಸರಿಯಾದ ರೀತಿಯಲ್ಲಿ ಅಲ್ಲಿಗೆ ಹಣವನ್ನು ವ್ಯವಸ್ಥೆ ಮಾಡಬೇಕು. ಮಾಡುವುದಾದರೆ ಒಂದು ಗಡುವು 'ಇಷ್ಟು ದಿವಸದಲ್ಲಿ ಮಾತನಾಡಬೇಕು' ಎನ್ನುವ ಜವಾಬ್ದಾರಿಯೂ ಸಹ ಬೇಕಾಗುತ್ತದೆ. ಇವೊತ್ತು ನಮ್ಮ ವಿಶ್ವವಿದ್ಯಾನಿಲಯಗಳ ಪರಿಸ್ಥಿತಿ ಹಾಗೂ ಕಾಲೇಜುಗಳ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅದರಲ್ಲಿಯೂ ಬೆಂಗಳೂರು ವಿಶ್ವವಿದ್ಯಾನಿಲಯ ಯಾವ ಘಳಿಗೆಯಲ್ಲಿ ಪ್ರಾರಂಭವಾಯಿತೋ ಗೊತ್ತಿಲ್ಲ, ಅದಕ್ಕೆ ಬಾಲಗ್ರಹ ಹೊಡೆದಿದೆ. ಇದು ಪ್ರಾರಂಭವಾದಾಗ ನಾನು ಇಲ್ಲಿನ ಸೆನೆಟ್ ಸದಸ್ಯನಾಗಿದ್ದೆ. ಇವೊತ್ತು ಇದು ಎಲ್ಲಿಗೆ ಹೋಗಿದೆ ಎಂದರೆ, ಉಪಾಧ್ಯಾಯರ ಮುಷ್ಕರ, ವಿದ್ಯಾರ್ಥಿಗಳ ಮುಷ್ಕರ, ನಾನ್ ಟೀಚಿಂಗ್ ಸ್ಟಾಫ್‌ನ ಮುಷ್ಕರಗಳು ನಡೆಯುತ್ತಿದ್ದರೂ ಸಹ ಅಲ್ಲಿನ ರಿಜಿಸ್ಟ್ರಾರ್ ಅವರು ಸುಮ್ಮನಿರುತ್ತಾರೆ, ಉಪಕುಲಪತಿಗಳೂ ಸುಮ್ಮನಿರುತ್ತಾರೆ ಮತ್ತು ಸರ್ಕಾರವೂ ಸುಮ್ಮನಿರುತ್ತದೆ ಅಂದರೆ ಏನರ್ಥ? ಅದೇ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕಳೆದ 2–3 ವರ್ಷಗಳಿಂದ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿರಬೇಕಾದರೆ ಅವರು ಯಾವ ರೀತಿ ಹತೋಟಿಗೆ ತಂದರು ಹಾಗೂ ಇಲ್ಲಿನವರು ಏನು ಮಾಡುತ್ತಿದ್ದಾರೆ? ಈಗ ಪ್ರೀ-ಯೂನಿವರ್ಸಿಟಿಗೆ ಒಂದು ಪ್ರತ್ಯೇಕ ಇಲಾಖೆ ಇದೆ. ಅದೇ ರೀತಿ ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್‌ಗೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಇಲಾಖೆ ಇದೆ. ಇಲ್ಲಿ ನಮಗೆ ಎಲ್ಲ ಅಂಕಿ ಅಂಶಗಳನ್ನು ಒದಗಿಸಿಲ್ಲ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಓದಿದವರು ಬೆಂಗಳೂರಿನ ನ್ಯಾಷನಲ್ ಕಾಲೇಜ್‌ನಲ್ಲಿ ಓದಿದ ವಿದ್ಯಾರ್ಥಿಗಳ ಜೊತೆಯಲ್ಲಿಯಾಗಲೀ ಅಥವಾ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳ ಜೊತೆಯಲ್ಲಿಯಾಗಲೀ ಕಂಪ್ಲೀಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನೂ ಸಹ ನಾವು ಇವೊತ್ತು ವಿಚಾರ ಮಾಡಬೇಕಾಗುತ್ತದೆ. ಈಗ ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಲೆಕ್ಚರರ್ಸ್ ಎಂದು ನೇಮಕ ಮಾಡಿಕೊಳ್ಳುತ್ತಾರೆ. ಇಂತಹವರು ಕೊನೆಯವರೆಗೂ ಬಡ್ತಿ ಇಲ್ಲದೆ ಕೆಲಸ ಮಾಡಬೇಕಾಗಿದೆ. ನನ್ನ ಸಹಪಾಟಿಯೊಬ್ಬರು ಲೆಕ್ಚರರ್ ಆಗಿ ಸೇರಿದವರು ಅದೇ ಹುದ್ದೆಯಲ್ಲಿ ನಿವೃತ್ತರಾದರು. ಈಗ ಬಾಟನಿ, ಫಿಸಿಕ್ಸ್, ಸೈನ್ಸ್ ಹೀಗೆ ಪ್ರತಿಯೊಂದು ವಿಷಯಕ್ಕೂ ಸಂಬಂಧಪಟ್ಟಂತೆ ಬೇರೆ ಬೇರೆ ಲೆಕ್ಚರರ್ಸ್ ಇರುತ್ತಾರೆ. ಇವರ ನಂತರ ರೀಡರ್ಸ್, ಅಸಿಸ್ಟೆಂಟ್ ಪ್ರೊಫೆಸರ್ಸ್, ಪ್ರೊಫೆಸರ್ಸ್, ಸೀನಿಯರ್ ಪ್ರೊಫೆಸರ್ಸ್ ಬರುತ್ತಾರೆ. ಸೀನಿಯರ್ ಪ್ರೊಫೆಸರ್ ಆದವರು ಪ್ರಿನ್ಸಿಪಾಲ್ ಆಗಬೇಕೆಂಬ ನಿಯಮವಿದೆ. ಆದರೆ ಈ ನಿಯಮದ ಪ್ರಕಾರ ಯಾವ ಕಾಲೇಜಿನಲ್ಲಿ ನಡೆದಿದೆ? ಒಂದು ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿ ಅರ್ಹತೆ ಇರುವವರಿಗೆಲ್ಲಾ ಏತಕ್ಕೆ ಪ್ರಮೋಷನ್ ಕೊಡಬಾರದು? ಜನತಾ ಪಕ್ಷದ ಪ್ರಣಾಳಿಕೆಯನ್ನು ನಾನು ನೋಡಿದ್ದೇನೆ. ಅದರಲ್ಲಿ ಇಂತಹ ಎಲ್ಲ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರೂ ಸಹ...

ಒಬ್ಬರು ಸದಸ್ಯರು.—ತಮ್ಮ ಸರ್ಕಾರ ಇದ್ದಾಗ ಏತಕ್ಕೆ ಈ ಕೆಲಸ ಮಾಡಲಿಲ್ಲ?

ಶ್ರೀ ಕೆ. ಹೆಚ್. ರಂಗನಾಥ್.—ಈಗ ನಾನು ಅದನ್ನೇ ಹೇಳುತ್ತಿರುವುದು. ತಾರೀಖು 1–11–1956 ರಲ್ಲಿ ರಾಯಚೂರು, ಚಿತ್ರದುರ್ಗ ಹೀಗೆ ಕೆಲವು ಭಾಗಗಳು ಸೇರಿಕೊಂಡು ವಿಶಾಲ ಕರ್ನಾಟಕವಾಯಿತು. 1962 ರಲ್ಲಿ ಮಾನ್ಯ ರಾಚಯ್ಯನವರೂ ಸಹ ಮಂತ್ರಿಗಳಾಗಿದ್ದರು. ಆಗಿನಿಂದಲೂ ಇದು ಇದೇ ರೀತಿ ನಡೆದುಕೊಂಡು ಬಂದಿದೆ. 1972 ರಿಂದ ಸ್ವಲ್ಪ ಅನುಕೂಲವಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದೆ. ಇವರು ಕೊಟ್ಟಿರುವ ವರದಿ ನೋಡಿ ನನಗೆ ಆಶ್ಚರ್ಯವಾಯಿತು. ಈ ವರದಿಯಲ್ಲಿರುವುದು

ಮಾನ್ಯ ಮಂತ್ರಿಗಳ ಕಣ್ಣಿಗೆ ಬಿದ್ದಿದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಈ ರೀತಿ ಹೇಳಿದ್ದಾರೆ.—

The Main functions of the Collegiate Education Directorate :

"(1) Administration of Government Arts. Science. Commerce and Home Science Colleges in the State.

(2) Regularisation of payment of salary. grant to Private Aided Colleges in the State.

(3) Sanction and payment of Scholarships to students studying in various institutions and Higher Education.

(4) Establishment and Euiqpment to the students Hostels attached to Government Colleges and also grant-in-aid to Private Hostel attached to Non-Government Colleges."

ಇದಕ್ಕೆ ಒಂದು ಪ್ರತ್ಯೇಕ ಇಲಾಖೆ ಬೇಕೇ ? ಮತ್ತು ಇಲ್ಲಿ ಕೆಲಸ ಮಾಡಲು ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಡೆಪ್ಯೂಟಿ ಡೈರೆಕ್ಟರ್ ಎಂದು ಹಲವಾರು ಮಂದಿ ಅಧಿಕಾರಿಗಳಿದ್ದಾರೆ. ಈ ಒಂದು ನೀತಿಯ ಬಗ್ಗೆ ವಿಚಾರ ಮಾಡುವುದು ಬೇಡವೇ ? ಮಾನ್ಯ ಕೃಷ್ಣನ್‌ರವರು ಮಾತನಾಡುವಾಗ ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟಂತೆ 13 ಕಮಿಟಿಗಳಿವೆ ಎಂದು ಹೇಳಿದರು. ನಮ್ಮೂರಿನ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಇಲ್ಲ, ಜಾಗ್ರತೆ ನೇಮಕ ಮಾಡಿ ಎಂದು ನಾನು ಪತ್ರ ಬರೆದೂ ಬರೆದೂ ಸಾಕಾಯಿತು. ನಮ್ಮೂರಿನ ಹೈಸ್ಕೂಲಿನಲ್ಲಿ 4 ಜನ ಉಪಾಧ್ಯಾಯರುಗಳೇ ಇಲ್ಲ, ಹಾಗೂ ಕಾಲೇಜಿನಲ್ಲಿ ಲೆಕ್ಚರರ್ಸ್ ಇಲ್ಲ. ಈ ಬಗ್ಗೆ ನಾನು ಇಲಾಖಾ ಮುಖ್ಯಸ್ಥರನ್ನು ಕೇಳಿದಾಗ ಕಾಂಟ್ರಾಕ್ಟ್ ಬೇಸಿಸ್‌ನ ಮೇಲೆ ಸ್ಥಳದಲ್ಲಿ ಯಾರಾದರೂ ಬಿ.ಎ., ಬಿಎಡ್ ಮಾಡಿಕೊಂಡಿದ್ದವರಿದ್ದರೆ ತೆಗೆದುಕೊಳ್ಳಬಹುದೆಂದು ಹೇಳಿದರು. ಆದರೆ ಈ ಕೆಲಸ ಮಾಡಲು ಕೇವಲ ನೂರು ರೂಪಾಯಿಗಳನ್ನು ಮಾತ್ರ ಕೊಡುವುದರಿಂದ ಯಾರೂ ಸಹ ಈ ಕೆಲಸ ಮಾಡಲು ಮುಂದೆ ಬರುತ್ತಿಲ್ಲ. ಅದೇ ಕೂಲಿ ಕೆಲಸ ಮಾಡುವಂತಹ ಒಬ್ಬ ಹೆಣ್ಣಾಳಿಗೆ ಇನ್ನೂ ಹೆಚ್ಚಿನ ಕೂಲಿ ಸಿಗುತ್ತದೆ. ಬಿ.ಎ., ಬಿ.ಎಡ್. ಮಾಡಿಕೊಂಡಿರುವವರಿಗೆ ಯಾರಾದರೂ ಹೆಣ್ಣು ಕೊಟ್ಟು ಮದುವೆ ಮಾಡಿದರೆ ಆ ಒಂದು ಭಾರವನ್ನೂ ಸಹ ಹೊತ್ತುಕೊಳ್ಳಬೇಕು, ಮುಂದೆ ಕೆಲಸ ಸಿಗದಿದ್ದರೆ ಹೆಂಡತಿ ಹತ್ತಿರವೂ ಸಹ ಬೈಸಿಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.—ಈ ಪಾರ್ಟ್-ಟೈಮ್ ಲೆಕ್ಚರರ್ಸ್ ಏನಿದ್ದರೂ ಒಂದೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಒಂದೊಂದು ಕ್ಲಾಸ್ ಮಾತ್ರ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕೇ ನಾನು ಹೇಳಿದ್ದು, 10–15 ನಿಮಿಷಗಳಲ್ಲಿ ಇದು ಮುಗಿಯುವುದಿಲ್ಲವೆಂದು. ಈ ವಿದ್ಯಾ ಇಲಾಖೆ ಹಗರಣದ ಹೊಳೆಯಾದ ಕಾರಣ ಒಂದೆರಡು ದಿವಸಗಳಲ್ಲಿ ಮುಗಿಯುವುದಿಲ್ಲ. ಅದೇ ತೆಲುಗು, ತಮಿಳು, ಉರ್ದು ಲೆಕ್ಚರರ್ಸ್ ಆದರೆ...

ಶ್ರೀ ಬಿ. ರಾಚಯ್ಯ.—ಆರ್ಟ್ಸ್‌ನವರು ಸೈನ್ಸ್ ಪಾಠ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಆರ್ಟ್ಸ್, ಸೈನ್ಸ್, ಹಾಗೂ ಇತರೇ ವಿಷಯಗಳಿಗೆ ಸಂಬಂಧಪಟ್ಟಂತೆ ಈಗ ಕೆಲಸ ಮಾಡುತ್ತಿರುವ ಲೆಕ್ಚರರ್ಸ್, ರೀಡರ್ಸ್, ಅಸಿಸ್ಟೆಂಟ್ ಪ್ರೊಫೆಸರ್ಸ್ ಹಾಗೂ ಪ್ರೊಫೆಸರ್ಸ್ ಎಷ್ಟು ಮಂದಿ ಇದ್ದಾರೆ. ಹಾಗೂ ಖಾಲಿ ಇರುವಂಥ ಹುದ್ದೆಗಳು ಎಷ್ಟು ಎಂದು ನಾನು ಒಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಇದೆಲ್ಲಾ ತಮ್ಮ ಗಮನಕ್ಕೆ ಬರದಿರಬಹುದು ಅಥವಾ ಈ 9 ತಿಂಗಳಲ್ಲಿ ಎಲ್ಲವನ್ನೂ ನೋಡುವುದಕ್ಕೆ ತಮಗೆ ಆಗದಿರಬಹುದು. ಆದರೆ ಇರುವಂತಹ ತೊಂದರೆಗಳನ್ನಾದರೂ ತಾವು ಗಮನಿಸಬೇಕು. ವರ್ಗಾವರ್ಗಿಗೆ ಸಂಬಂಧಪಟ್ಟಂತೆ ಒಬ್ಬರ ವಿಚಾರದಲ್ಲಿ ಅವರಿಗೆ ಹೃದಯದ ತೊಂದರೆ ಇದ್ದ ಕಾರಣದಿಂದ ಸ್ವಲ್ಪ ನೋಡಬೇಕೆಂದು ನಾನು ಮಂತ್ರಿಗಳ ಕಡೆಗೆ ಹೋಗಿ ಹೇಳಿ ಬಂದೆ. ಸಾಮಾನ್ಯವಾಗಿ ನಾನು ಇಂತಹ ವಿಚಾರಗಳಿಗೆ ಗಮನ ಕೊಡುವುದಿಲ್ಲ. ಆದರೆ ಇವರಿಗೆ ಹೃದಯದ ತೊಂದರೆ ಇದ್ದ ಕಾರಣದಿಂದ ಹೇಳಿ ಬಂದೆ. ಆದರೆ ಅದು ಹಾಗೆಯೇ ಉಳಿಯಿತು. ಇನ್ನೊಂದು ಕೇಸ್ ಹೇಳಬೇಕೆಂದರೆ, ಒಬ್ಬ ಹೆಣ್ಣು ಮಗಳು ಇನ್ನು ಎರಡು ವರ್ಷಗಳಲ್ಲಿ ರಿಟೈರ್ ಆಗಬೇಕಾಗಿತ್ತು. ಅಂತಹ ಉರ್ದು ಟೀಚರನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆ. ಈಗ ದಿನವೂ ಬಸ್‌ನಲ್ಲಿ ಹೋಗಿ ಬರಬೇಕಾಗಿದೆ. ಬಸ್ ಏನಾದರೂ ಸಿಗದಿದ್ದರೆ ಅಲ್ಲಿಯೇ ಉಳಿಯಬೇಕು. ಈ ಕೇಸ್ ಬಗ್ಗೆಯೂ ನಾನು ಪತ್ರ ಬರೆದೆ. ಆದರೆ ಆದಕ್ಕೆ ಉತ್ತರ ಕೂಡ ಬರಲಿಲ್ಲ. ಹೀಗೆ ನೋಡುತ್ತಾ ಹೋದರೆ, ಸೆಕೆಂಡರಿ ಸ್ಕೂಲ್‌ನಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಅನೇಕ ವಿಚಾರಗಳಿವೆ. ಈ ಹಗರಣಗಳನ್ನೆಲ್ಲಾ ಸರಿಮಾಡದೇಹೋದರೆ ನಾವು ಕೊಟ್ಟ ಹಣವೆಲ್ಲಾ ಹೊಳೆಯಲ್ಲಿ ಹಾಕಿದಂತೆ ಆಗುತ್ತದೆ. ಇದನ್ನೆಲ್ಲಾ ನಿಮ್ಮ ಕೈಯಲ್ಲಿ ಸರಿಮಾಡುವುದಕ್ಕೆ ಆಗದಿದ್ದರೆ ಬೇರೆಯವರ ಕೈಯಲ್ಲಿ ಕೊಡಬೇಕಾಗುತ್ತದೆ. ಈಗ ಶಾಲೆಗಳಲ್ಲಿ ವ್ಯಾಕರಣವನ್ನು ಯಾವ ರೀತಿ ಕಲಿಸುತ್ತಿದ್ದಾರೆಂದರೆ, ಇವೊತ್ತಿನ 7ನೇ ತರಗತಿ ಹಳೆಯ ಎಲ್.ಎಸ್. ಪರೀಕ್ಷೆಗೆ ಸಮ. ಆ ಕಾಲದಲ್ಲಿ ಕನ್ನಡದಲ್ಲಿಯೇ ಆಗಲೀ, ಇಂಗ್ಲೀಷ್‌ನಲ್ಲಿಯೇ ಆಗಲೀ ಎಲ್.ಎಸ್.ನಲ್ಲಿ ಓದುತ್ತಿದ್ದವರಿಗೆ ಪದಸಂಪತ್ತಿನ ಬಗ್ಗೆ ಎಷ್ಟು ಪ್ರಭುತ್ವ ಮತ್ತು ಹಿಡಿತ ಇತ್ತೋ, ಅಷ್ಟೇ

ಒಂದು ಪ್ರಭುತ್ವ ಮತ್ತು ಹಿಡಿತ ಇವೊತ್ತು 7 ನೇ ತರಗತಿಗಳಲ್ಲಿ ಓದುತ್ತಿರುವವರಲ್ಲಿ ಇಲ್ಲ. ಹಳ್ಳಿಗಾಡಿನಲ್ಲಿ ಓದುತ್ತಿರುಸ ಮಕ್ಕಳಲ್ಲಿ ಇದು ಇನ್ನೂ ಬಹಳ ಕಡಿಮೆ ಎಂದು ಹೇಳಬಹುದು. ತಾವು ಟ್ರೈನಿಂಗ್ ಬಗ್ಗೆ ಹೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—7 ನೇ ತರಗತಿಯಲ್ಲಿ ವಿಜ್ಞಾನದಲ್ಲಿ ವಿದ್ಯಾರ್ಥಿಗಳು ಮುಂದುವರೆದಿದ್ದಾರೆ. ಆದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಆ ಮಾತು ಬೇರೆ. ಟಿ.ವಿ. ನೋಡಿದ್ದೇವೆ ಅಂದರೆ ಏನು ಪ್ರಯೋಜನ ? ಅವರ ಅಪ್ಪನಿಗೆ ಕಾಗದ ಬರೆಯಬೇಕಾದರೆ ಬುದ್ಧಿ ಬೇಕಲ್ಲ. ಮನಸ್ಸಿನ ಭಾವನೆಗಳನ್ನು ಅರ್ಥಮಾಡಿಕೊಂಡು ಬರೆಯುವಂತಾಗಬೇಕು. ಇಲ್ಲದಿದ್ದರೆ ಪ್ರಯೋಜನವೇನು ? ವಿದ್ಯಾ ಇಲಾಖೆಯ ವಾರ್ಷಿಕ ವರದಿಯಲ್ಲಿ ಈ ರೀತಿ ಹೇಳುತ್ತಾರೆ :

State Evaluation Unit

"There was no budget provision for the activitics of the State Evaluation Unit for the year 1981–82 and 1982–83. However. the following no cost programmes were conducted.

1, Analysed the results of the S,S,L,C, Examination of April 1981. The lists of Zero per cent and low per cent high schools were prepared and sent to the District Deputy Directors of Public Instruction for taking follow up measures at their level."

ಇದು ನಿಮಗೆ ಗೌರವ ತರತಕ್ಕದ್ದಲ್ಲ 'ಲೋ ಪರ್ಸೆಂಟೇಜ್' 'ಜೀರೋ ಪರ್ಸೆಂಟೇಜ್' ಪರೀಕ್ಷೆಗೆ ಕುಳಿತವರ ಸಂಖ್ಯೆ 1 ಲಕ್ಷದ 28 ಸಾವಿರದ 753, ಏಪ್ರಿಲ್ 1982 ರಲ್ಲಿ ಅದರಲ್ಲಿ ಪಾಸ್ ಆದವರು 55 ಸಾವಿರದ 520 ವಿದ್ಯಾರ್ಥಿಗಳು. ಫೇಲ್ ಆದವರು 73 ಸಾವಿರದ 233 ವಿದ್ಯಾರ್ಥಿಗಳು. ತದನಂತರ ಅಕ್ಟೋಬರ್ ಪರೀಕ್ಷೆಗೆ 63 ಸಾವಿರ ಜನ ವಿದ್ಯಾರ್ಥಿಗಳು ಕುಳಿತರು. 10 ಸಾವಿರ ಜನ ಮಧ್ಯೆ ಕೈಬಿಟ್ಟರು, ಹೀಗೆ ಡ್ರಾಪ್ ಔಟ್ಸ್ ಆಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಡ್ರಾಪ್‌ಔಟ್ಸ್ ಎಷ್ಟು ? ಇದರ ಬಗ್ಗೆ ಒಂದು ಲೇಖನ ಬಂದಿದೆ—2 ರಿಂದ 4 ನೇ ತರಗತಿಯವರೆಗೆ ಓದಿದವರು ಕೂಡ ಅನಕ್ಷರಸ್ಥರಾಗಿದ್ದಾರೆಂದು. ಆ ಲೇಖನ ವನ್ನು ತಮ್ಮ ಮುಂದೆ ಇಡಲಿಕ್ಕೆ ಸಾಧ್ಯವಿಲ್ಲ. ಅದು ಎಲ್ಲೋ ಸೇರಿಕೊಂಡುಬಿಟ್ಟಿದೆ. 2 ರಿಂದ 4 ನೇ ತರಗತಿ ಯವರೆಗೆ ಓದಿದ್ದರೂ ಅನಕ್ಷರಸ್ಥರಾಗಿರುತ್ತಾರೆಂದರೆ ಏನು ಅರ್ಥ ? ಅಕ್ಟೋಬರ್ ಎಸ್.ಎಸ್.ಎಲ್.ಸಿ, ಪರೀಕ್ಷೆಗೆ 63 ಸಾವಿರ ವಿದ್ಯಾರ್ಥಿಗಳು ಕುಳಿತರೆ, 10 ಸಾವಿರ ಜನ ವಿದ್ಯಾರ್ಥಿಗಳು ಮಧ್ಯೆ ಕೈಬಿಟ್ಟರು. ಪಾಸಾದವರ ಸಂಖ್ಯೆ 17 ಸಾವಿರದ 469.

ಡಾ. ವಿ. ಎಸ್. ಆಚಾರ್ಯ.—ಸಣ್ಣ ತರಗತಿಯಲ್ಲಿ ಫೇಲ್ ಮಾಡಬಾರದೆಂದು ಇದೆಯಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಮಕ್ಕಳಿಗೆ ಯಾವ ಮಟ್ಟದ ವಿದ್ಯೆ ದೊರೆಯುತ್ತಿದೆ ಎನ್ನುವುದು ಮುಖ್ಯ. ನಾವು ಜವಾಬ್ದಾರಿಯಿಂದ ಬಂದಿರತಕ್ಕವರು, ರಾಜ್ಯದ ಪ್ರಾಮುಖ್ಯತೆಯನ್ನು ನೋಡಬೇಕು. ನನ್ನ ಸಲಹೆ ಏನೆಂದರೆ ಯಾವ್ಯಾವ ಸಬ್ಜೆಕ್ಟ್‌ಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಫೇಲಾಗುತ್ತಾರೆ, ಅವರಿಗೆ ನೇರವಾಗಿ ಏತಕ್ಕೆ ಪ್ರಮೋಷನ್ ಕೊಡುತ್ತೀರಿ ?

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರು ಭಾಷಣ ಮಾಡುವುದಕ್ಕೆ ಅಡ್ಡಿ ಬರುತ್ತಿಲ್ಲ, ನನ್ನ ಗೋಳು ತೋಡಿಕೊಳ್ಳುತ್ತೇನೆ. ನಾನು ಮಾತನಾಡಲಿಕ್ಕೆ ನನ್ನ ಸರದಿ ಇದೆ. ಆದರೆ, ಮಾನ್ಯ ಸದಸ್ಯರಾದ ಗೂಳಪ್ಪನವರು ನನ್ನ ಎದುರುಗಡೆ ಬಂದು ಕಳಿತುಬಿಟ್ಟಿದ್ದಾರೆ. ಅವರು ಕುಳಿತಿರುವುದರಿಂದ ನಾನು ನಿಮಗೆ ಕಾಣಿಸುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರಾದ ಗೂಳಪ್ಪನವರು ಅವರ ಸೀಟಿಗೆ ಹೋದರೆ ಒಳ್ಳೆಯದು. ಏಕೆಂದರೆ ನಾನು ಸದನದಲ್ಲಿ ಇಲ್ಲವೆಂದು ತಾವು ನನ್ನ ಹೆಸರನ್ನು ಬಿಟ್ಟುಬಿಟ್ಟರೆ ನಾನು ಮಾತನಾಡುವ ಅವಕಾಶ ಕಳೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಅವರ ತಲೆಯ ಮೇಲಿರುವ ಪೇಟವನ್ನು ಇಳಿಸಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರಾದ ಗೂಳಪ್ಪನವರ ಪೇಟಾ ಕಳಶವಿದ್ದಹಾಗೆ, ಅದು ತೆಗೆಯುವುದಕ್ಕೆ ಬರುವುದಿಲ್ಲ. ಅವರ ಪೇಟದಲ್ಲಿರುವುದನ್ನು ಮಾನ್ಯ ಲಕ್ಷ್ಮೀಸಾಗರ್ ಮತ್ತು ರಘುಪತಿ ಯವರಿಗೆ ಕೊಟ್ಟರೆ ತಕ್ಷಣ ಸುಮ್ಮನೆ ಎಲ್ಲಾ ಕೆಲಸಗಳಿಗೂ ರುಜು ಹಾಕುತ್ತೀರಿ. ತಂದೆ ತಾಯಿಗಳಿಗೂ ಕೂಡ ರೀಸರ್ಚ್ ಪ್ರೋಗ್ರಾಮ್ ವಿಷಯದ ಬಗ್ಗೆ Research programme for improvement of standard of education. ಎಂದು ಹೇಳಿ ದೊಡ್ಡ ಹೆಡ್‌ಲೈನ್‌ನಲ್ಲಿ ಸ್ಟ್ಯಾಂಡರ್ಡ್ ಯಾವ ರೀತಿ ಇರಬೇಕೆಂದು ಬರೆದಿದ್ದೀರಿ. ಅದೇನೆಂದರೆ :

"Provision has been made under the study programme to revise the question papers from question paper's bank, to proivde orientation training for post-graduates. establish research and publication

section for the benefit of paresnt. teachers and the taught'. ಮಾನ್ಯ ಉಪಾಧ್ಯಕ್ಷರೇ, ನಿಮಗೆ ಮಕ್ಕಳು ಇವೆಯೇ? ನಮಗೆ ಮೊಮ್ಮಕ್ಕಳು ಇವೆ. ಮಾನ್ಯ ಮಂತ್ರಿಗಳಾದ ರಾಚಯ್ಯನವರಿಗೆ ಸಹ ಮೊಮ್ಮಕ್ಕಳಿವೆ ಎಂದು ಗೊತ್ತಾಗುತ್ತದೆ. ಏಕೆಂದರೆ ಅವರು 7 ನೇ ತರಗತಿಯ ಪುಸ್ತಕ ನೋಡಿದ್ದೇನೆಂದು ಹೇಳಿದರು. ಯಾವ ರೀಸರ್ಚ್ ನಮಗೆ ಬರುತ್ತದೆ? ಹೀಗೆ ಲಘುವಾಗಿ ನೀವು ಇದನ್ನು ತೆಗೆದುಕೊಂಡಿದ್ದೀರಿ. ಇದರಲ್ಲಿ ಒಂದು ತಪ್ಪು ಇದೆ. ಮೇಲ್ಮಟ್ಟದ ಅಧಿಕಾರಿಗಳನ್ನು ಅವರು ಕಮೀಷನರ್ ಎಂದು ಇಟ್ಟುಕೊಳ್ಳೋಣ. ಅವರನ್ನು 3 ತಿಂಗಳು, 6 ತಿಂಗಳು, 1 ವರ್ಷದೊಳಗೆ ಬದಲಾವಣೆ ಮಾಡುತ್ತೀರಿ. ಅದೇ ರೀತಿ ಡೆಪ್ಯೂಟಿ ಡೈರೆಕ್ಟರ್‌ರನ್ನು ಬದಲಾವಣೆ ಮಾಡುತ್ತೀರಿ, ಹೊಸದಾಗಿ ಕಮಿಷನರ್ ಬಂದರೆ ಅವರನ್ನೂ ಬದಲಾವಣೆ ಮಾಡುತ್ತೀರಿ. ಅವರನ್ನು ಒಂದೆರಡು ವರ್ಷ ಅಲ್ಲೇ ಬಿಟ್ಟರೆ ಅವರು ಆದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಪ್ರೊಮೋಷನ್ ಕೊಡುವ ವಿಚಾರದಲ್ಲಿ ಆಯಾಯ ವರ್ಷ ಎಷ್ಟೆಷ್ಟು ವೇಕೆನ್ಸಿ ಬೀಳುತ್ತವೆ ಎಂದು ನೋಡಿಕೊಂಡು ಅವರಿಗೆ ಪ್ರಮೋಷನ್ ಕೊಡಿ. ಈ ರೀತಿ ಒಂದು ವ್ಯವಸ್ಥೆಗೊಳಿಸಿದರೆ ಅವರು ಉತ್ಸಾಹದಿಂದ ಇರುತ್ತಾರೆ. ಒಳ್ಳೆಯ ಕೆಲಸ ಮಾಡುತ್ತಾರೆ. ನೇಮಕಾತಿ ಮಾಡುವಾಗಲೂ ಸಹ ವರ್ಷೇ ವರ್ಷೇ ಎಷ್ಟೆಷ್ಟು ವೇಕೆನ್ಸಿ ಬರುತ್ತವೆಯೋ ಅವುಗಳನ್ನು ಭರ್ತಿ ಮಾಡಿ. ಆಗ ರೋಸ್ಟರ್ ಸಿಸ್ಟಮ್ಮನ್ನು ಕೂಡ ಜಾರಿಗೆ ತಂದಹಾಗೆ ಆಗುತ್ತದೆ. ಮತ್ತು ಯಾರಿಗೂ ತೊಂದರೆ ಇಲ್ಲದಹಾಗೆ ಆಗುತ್ತದೆ.

ಇನ್ನು ಶಾಲಾ ಕಟ್ಟಡದ ಬಗ್ಗೆ ಹೇಳುವುದಾದರೆ, ಬಡ್ಜೆಟ್ ಪುಸ್ತಕದಲ್ಲಿ ಎಲ್ಲಿ ಹುಡುಕಿದರೂ ಕೂಡ ದುಡ್ಡೇ ಇಲ್ಲ. ನಾವು ಹೋದ ವರ್ಷ ಎನ್.ಆರ್.ಇ.ಪಿ. ಸ್ಕೀಮ್‌ನಲ್ಲಿ ಒಂದೊಂದು ಸ್ಕೂಲ್ ಕಟ್ಟಡಗಳನ್ನು ಕಟ್ಟಿಕೊಂಡಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದ ಈ 30–35 ವರ್ಷಗಳಲ್ಲಿ Education is spreading to the periphery of the society. ಸಮಾಜದಲ್ಲಿ ಕೊನೆಯ ಹಂತದವರೆಗೆ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ರಾಷ್ಟ್ರದಲ್ಲಿ ಸಾವಿರಾರು ಜನ ವಿದ್ಯೆ ಇಲ್ಲದೇ ವಂಚಿತರಾಗಿದ್ದಾರೆ. ಅದು ಇನ್ನೂ ಹೆಚ್ಚಾಗತಕ್ಕಂತಹ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದೇವೆಯೋ ಎನ್ನುವ ಹಾಗೆ ಆಗಿದೆ. ಎಷ್ಟೋ ತಂದೆತಾಯಿಯಿಗಳಿಗೆ ಮಗ ಓದುತ್ತಾನೆ ಅಂದರೆ ಅಷ್ಟೇ ಸಂತೋಷ. ಏನು ಓದುತ್ತಾನೆ ಅದರ ಪರಿಚಯ ಅವರಿಗೆ ತಿಳಿದಿರುವುದಿಲ್ಲ. ಅಂತಹವರ ಸಂಖ್ಯೆ ವಿಪರೀತವಾಗಿ ಇರುವಾಗ ಸದಸ್ಯರಾದ ನಮ್ಮ ಜವಾಬ್ದಾರಿ ಮತ್ತು ಸಚಿವರ ಜವಾಬ್ದಾರಿ ಬಹಳ ಹೆಚ್ಚು ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಶಿಕ್ಷಣ ಮಂತ್ರಿಗಳು ವ್ಯವಸ್ಥಿತವಾದ ರೀತಿಯಲ್ಲಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರದ ವತಿಯಿಂದ ಮಾಡಲೇಬೇಕು. ಇವೊತ್ತಿನ ದಿವಸ 43 ಲಕ್ಷ ಹುಡುಗರು ಪ್ರಾಥಮಿಕ ಶಾಲಿಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. 8 ಲಕ್ಷ ವಿದ್ಯಾರ್ಥಿಗಳು ಪ್ರೈವೇಟ್ ಸ್ಕೂಲ್‌ಗಳಲ್ಲಿ ಓದುತ್ತಾರೆ. 43 ಲಕ್ಷ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ಏನು ಕಲಿಯುತ್ತಿದ್ದಾರೆ, ಅವರಲ್ಲಿ ಸಾಮಾನ್ಯವಾಗಿ ನೂರಕ್ಕೆ 50 ರಷ್ಟು ಮಕ್ಕಳು ಬಡತನದ ರೇಖೆಯಲ್ಲಿರತಕ್ಕವರ ಮಕ್ಕಳು. ಆ ಮಕ್ಕಳಿಗೆ ನಾವು ಹೆಚ್ಚು ನಿಗಾ ವಹಿಸುವುದು ಬಹಳ ಅವಶ್ಯಕ. A few hundreds of pre-primary schools are opened ಎಂದು ಹೇಳಿದ್ದೀರಿ, ಅಂಗನವಾಡಿಗೆ ಹಣ ಇದೆ. ಅಡಲ್ಟ್ ಎಜುಕೇಷನ್‌ಗೆ ಹಣ ಇಟ್ಟಿದ್ದೀರಿ. ಅಡಲ್ಟ್ ಎಜುಕೇಷನ್ ಕೊಡಲಿಕ್ಕೆ ಈಗ 100 ಸೆಂಟರ್‌ಗಳಿವೆ. ಅಲ್ಲಿ ಕಲಿಸತಕ್ಕವರಿಗೆ ನೀವು ತಿಂಗಳಿಗೆ 50 ರೂಪಾಯಿ ಕೊಡುತ್ತೀರಿ. ಅವರು ಅದನ್ನು ತೆಗೆದುಕೊಂಡು ಏನು ಮಾಡುತ್ತಾರೆ? ನೀವು ಕೊಡತಕ್ಕ ಹಣವನ್ನು ಮತ್ತು ಕೇಂದ್ರದಿಂದ ಬರತಕ್ಕ ಸಹಾಯವನ್ನು ತೆಗೆದುಕೊಂಡು ಅವರು ಮನೆಗೆ ಹೋಗಿ ಸುಮ್ಮನೆ ಇರುತ್ತಾರೆ. ಇಲ್ಲಿ ಇವರು 4 ನೇ ತರಗತಿ ಓದಿದ್ದರೂ ಅನಕ್ಷರಸ್ಥರಾಗಿರುತ್ತಾರೆ. ಅಡಲ್ಟ್ ಎಜುಕೇಷನ್‌ನಿಂದ ಕೂಡ ಅಕ್ಷರಸ್ಥರಾದಂತೆ ಆಗುವುದಿಲ್ಲ. ಅವರು ಏನು ಕಲಿತುಕೊಳ್ಳುತ್ತಾರೆಂದರೆ ರಂಗಪ್ಪ ಎಂದು ಹೆಸರು ಇದ್ದರೆ ಸೊನ್ನೆ ಬಿಟ್ಟುಬಿಟ್ಟು ರಗಪ್ಪ ಎಂದು ಬರೆಯುವುದನ್ನು ಕಲಿತುಕೊಳ್ಳುತ್ತಾರೆ. ನೂರಕ್ಕೆ 30 ರಷ್ಟು ವಿದ್ಯಾವಂತರು ಇದ್ದಾರೆಂದು ತಿಳಿದುಕೊಂಡರೂ, ಇನ್ನೂ ನೂರಕ್ಕೆ 70 ರಷ್ಟು ಅನಕ್ಷರಸ್ಥರ ಸಂಖ್ಯೆ ಇರುವಾಗ ಇದರಲ್ಲಿ ಅಸ್ಪೃಶ್ಯರು ಬೇರೆ ಇದ್ದಾರೆ—ಇದು ಹಳೆಯ ರೋಗ. ಏನೂ ಅನುಕೂಲವಿಲ್ಲದೆ ಇರತಕ್ಕವರು ಏನಿದ್ದಾರೆ, ಅವರ ಬಗ್ಗೆ ಹೆಚ್ಚು ನಿಗಾ ವಹಿಸತಕ್ಕದ್ದು ಬಹಳ ಅವಶ್ಯಕ. ಸ್ವಾಮಿ, ಇವತ್ತು ತಮ್ಮ ಶಿಕ್ಷಣ ಇಲಾಖೆ ಯಾವ ರೀತಿಯಲ್ಲಿ ನಡೆಯುತ್ತಿದೆ, ಯಾರು ಏನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ತಾವು ಸ್ವಲ್ಪ ವಿಮರ್ಶೆ ಮಾಡಿ ನೋಡಿದರೆ ಗೊತ್ತಾಗುತ್ತದೆ, ಇವತ್ತು ನಮ್ಮ ರಾಜ್ಯದಲ್ಲಿರುವ ಎಲ್ಲಾ ಶಿಕ್ಷಕರು ಬಂದರೆ ಈ ವಿಧಾನಸಭೆಯಲ್ಲಿ ಯಾವ ಮಂತ್ರಿಗೂ ಕೂಡ ಕುಳಿತುಕೊಳ್ಳುವುದಕ್ಕೆ ಜಾಗ ಸಿಗುವುದಿಲ್ಲ. ಅಂಥ ಶಿಕ್ಷಕರು ಕೂಡ ಇದ್ದಾರೆ. ಈ ಶಿಕ್ಷಕರು ಮಾಡದೆ ಇರುವಂಥ ರಾಜಕೀಯ ಇಲ್ಲ. ಇವತ್ತು ಯಾವ ಶಿಕ್ಷಕರು ಸರಿಯಾಗಿ ಶಾಲೆಗೆ ಹೋಗಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ? ಶಾಲಾ ಶಿಕ್ಷಕನು ಶಾಲೆಗೆ ಹೋಗಿ ತನ್ನ ಕೋಟ್ ತೆಗೆದು ಕುರ್ಚಿಗೆ ನೇತುಹಾಕಿ ಹೊರಗಡೆ ಹೋಗುತ್ತಾನೆ. "ಎಲ್ಲಯ್ಯ ನಿಮ್ಮ ಮೇಸ್ಟ್ರು" ಎಂದು ಕೇಳಿದರೆ ಅಲ್ಲಿರತಕ್ಕಂಥ ಒಬ್ಬ ಜವಾನ ಹೇಳುತ್ತಾನೆ: ಸ್ವಾಮಿ, ಈಗ ತಾನೆ ಎಲ್ಲೋ ಆಚೆ ಹೋಗಿದ್ದಾರೆ; ಬರುತ್ತಾರೆ" ಎಂದು ಹೇಳುತ್ತಾನೆ. ಅದರೆ ಅದೇ ಸ್ವಲ್ಪ ಅವರಿಗಿಂತ ಜೋರಾಗಿ ಇರುವವರು ಹೋಗಿ ಕೇಳಿದರೆ "ಸ್ವಾಮಿ, ಮೇಸ್ಟ್ರು ರಜೆಯನ್ನು ಹಾಕಿದ್ದಾರೆ" ಎಂದು ಹೇಳುತ್ತಾರೆ. ರಜೆಯ ಚೀಟಿ ಟೇಬಲ್‌ನಲ್ಲಿಟ್ಟು ಹೋಗಿರುತ್ತಾನೆ.

ಈ ರೀತಿ ನಿಮ್ಮ ಶಾಲಾ ಶಿಕ್ಷಕರ ಕೋಟು ವ್ಯವಹಾರ ನಡೆಯುತ್ತಿದೆ. ಇದನ್ನು ತಾವು ಯಾವ ರೀತಿಯಲ್ಲಿ ತಪ್ಪಿಸುತ್ತೀರೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಮತ್ತೆ ನಿಮ್ಮ ಇಲಾಖೆಯಲ್ಲಿ ವರ್ಗಾವಣೆ ಮತ್ತು ಬಡ್ತಿ ವಿಷಯ ತುಂಬಾ ನಿಧಾನವಾಗಿ ನಡೆಯುತ್ತಿದೆ. ಸ್ವಾಮಿ, ನೀವು ಯಾವುದಾದರೊಂದು ಕೆಲಸವನ್ನು ಮಾಡುವಾಗ ತಮ್ಮ ಕರ್ತವ್ಯವನ್ನು ಕಾಲಕ್ಕೆ ಸರಿಯಾಗಿ ಮಾಡಿದರೆ ಒಳ್ಳೆಯದಲ್ಲವೇ ? ನಿಮ್ಮ ಇಲಾಖೆಯಲ್ಲಿ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಅವರೂ ಕೂಡ ಬಹಳ ಬುದ್ಧಿವಂತರಿದ್ದಾರೆ. ಐ.ಎ.ಎಸ್. ಅಧಿಕಾರಿಗಳು ಸುಮಾರು 15 ದಿವಸ ಕುಳಿತುಕೊಂಡು ತಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಕಾನೂನು ಮಾಡಿಕೊಳ್ಳಲಿ. ಅದಕ್ಕೆ ಬೇಕಾದರೆ ನಮ್ಮ ಮಾನ್ಯ ಕಾನೂನು ಮಂತ್ರಿಗಳ ಸಲಹೆಯನ್ನು ಪಡೆದುಕೊಳ್ಳಲಿ. ಪಾಪ, ಅವರೇನು ಆಗುವುದಿಲ್ಲವೆಂದು ಹೇಳುತ್ತಾರಾ ? ಸ್ವಾಮಿ, ಕಾನೂನು ಮಂತ್ರಿಗಳೇ ತಾವು ಅವರಿಗೆ ಸ್ವಲ್ಪ ಸಹಾಯ ಮಾಡಬಾರದೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನನ್ನ ಕಡೆ ಬಂದಂಥ ಫೈಲ್‌ಗಳು ಯಾವತ್ತೂ ತಡವಾಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ತಮಗೆ ಅದು ಬಿಟ್ಟರೆ ಪಾಪ, ಬೇರೆ ಕೆಲಸವೇನು ಇದೆ ? ಸ್ವಾಮಿ, ಇವತ್ತು ಹಳ್ಳಿಗಳಲ್ಲಿರುತಕ್ಕಂಥ ಶಾಲೆಗಳು ಯಾವ ಮಟ್ಟಕ್ಕೆ ಬಂದಿವೆ ಎಂಬುದನ್ನೂ ಕೂಡ ತಾವು ನೋಡಬೇಕಾಗುತ್ತದೆ. ಆದರೆ ಆ ಶಾಲೆಗಳ ರೆಕರಿಂಗ್ ಎಕ್ಸ್‌ಪೆಂಡಿಚರ್ ಮತ್ತು ನಾನ್-ರೆಕರಿಂಗ್ ಎಕ್ಸ್‌ಫೆಂಡಿಚರ್ ಏನು ಎಂಬುದೇ ತಮಗೆ ಗೊತ್ತಿಲ್ಲ. ಮತ್ತೆ ಅದರ ಅಸೆಟ್ಸ್ ಮತ್ತು ಲಯಬಿಲಿಟೀಸ್ ತಮಗೆ ಗೊತ್ತಿಲ್ಲ. ಇವತ್ತು ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಒಂದು ಫಸ್ಟ್ ಗ್ರೇಡ್ ಕಾಲೇಜ್ ಇದೆ. ಅಲ್ಲಿಗೆ ಒಬ್ಬ ಜೂನಿಯರ್ ಕಾಲೇಜಿನ ಉಪಾಧ್ಯಾಯರನ್ನು ಪ್ರಿನ್ಸಿಪಾಲರನ್ನಾಗಿ ಮಾಡಿದ್ದಾರೆ.. ಯಾವ ಮಟ್ಟಕ್ಕೆ ಬಂದಿದೆ ನಿಮ್ಮ ಶಿಕ್ಷಣ ಇಲಾಖೆ ? ಈ ರೀತಿಯಾದರೆ ವಿದ್ಯಾರ್ಥಿಗಳು ಯಾವ ಮಟ್ಟದಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆಂದು ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ನಮ್ಮ ಮತ್ತು ನಿಮ್ಮ ಕಾಲದಲ್ಲಿ ಅಲ್ಲೊಂದು ಇಲ್ಲೊಂದು ಕಾಲೇಜು ಇರುತ್ತಿತ್ತು. ಈಗ ಕಾಲೇಜುಗಳು ಜಾಸ್ತಿಯಾಗಿವೆ.

ಶ್ರೀ ಕೆ. ಹೆಚ್. ರಂಗನಾಥ್.—ಹೋಗಲಿ, ಹೈಸ್ಕೂಲ್ ಮೇಸ್ಟ್ರುಗಳನ್ನು ಪ್ರಿನ್ಸಿಪಾಲರನ್ನಾಗಿ ಮಾಡಿ.

ಶ್ರೀ ಬಿ. ರಾಚಯ್ಯ.—ನಿಮ್ಮ ಸರ್ಕಾರವಿದ್ದಾಗ ಶ್ರೀಮಾನ್ ಕಂಠಿಯವರು ಮತ್ತು ಶಂಕರೇಗೌಡರು ಶಿಕ್ಷಣ ಮಂತ್ರಿಗಳಾಗಿದ್ದರು. ಆಗಿನಿಂದ ಇದನ್ನೆಲ್ಲಾ ಸರಿಮಾಡಿಕೊಂಡು ಬಂದಿದ್ದರೆ ಇವತ್ತು ನನಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಶ್ರೀ ಕೆ. ಹೆಚ್ ರಂಗನಾಥ್.—ತಾವು ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ಮತ್ತು ಇಲ್ಲಿ ಮಂತ್ರಿಗಳಾಗಿದ್ದಾಗ ಕಾಗದ ಬರೆದು ಏತಕ್ಕೆ ಹೇಳಲಿಲ್ಲ ? ಸ್ವಾಮಿ ನಾನು ಒಟ್ಟಿನಲ್ಲಿ ತಮಗೆ ಒಂದು ಮಾತನ್ನು ಹೇಳುವುದಾದರೆ ಇವತ್ತಿನ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಪದ್ಧತಿ ಸರಿಯಾದುದಲ್ಲ. ಯಾರೋ ಒಬ್ಬರು ಅಮೇರಿಕಾ ದೇಶಕ್ಕೆ ಹೋಗಿ ಬಂದು ಆ ರೀತಿ ಮಾಡಬೇಕೆಂದು ಹೇಳಿದ ಮಾತ್ರಕ್ಕೆ ತಾವು ಆ ರೀತಿ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ತಾವು ಒಂದು ಸಿಸ್ಟಮ್‌ಆಗಿ ಕೆಲಸ ಮಾಡಬೇಕಾಗುತ್ತದೆ. ಇವತ್ತಿನ ಶಿಕ್ಷಣ ಪದ್ಧತಿಯಲ್ಲಿ ಸರಿಯಾದಂಥ ವ್ಯಾಕರಣ ಪದ್ಧತಿಯೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ವ್ಯಾಕರಣವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಲು ಹೋದರೆ ನಮಗೆ ಶಾಪ ಹಾಕುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಸರಿಯಾಗಿ ವ್ಯಾಕರಣವನ್ನು ವಿದ್ಯಾರ್ಥಿ ಕಲಿಯದಿದ್ದರೆ ಅವನಿಗೆ ಯಾವುದು ಕ್ರಿಯೆ, ಯಾವುದು ಕರ್ಮ ಎನ್ನುವುದು ತಿಳಿಯುವುದು ಬೇಡವೇ ? ಮತ್ತು ಸರಿಯಾಗಿ ಪದಗಳ ಜೋಡಣೆ ಮಾಡುವುದಾದರೂ ಬರಬೇಕಲ್ಲವೇ ? ಇವತ್ತು ದನ ಕಾಯುವ ಮನುಷ್ಯನ ಮಗನೊಬ್ಬನು ಶಾಲೆಗೆ ಬಂದಿರುತ್ತಾನೆ. ಅವನಿಗೆ ಸರಿಯಾದಂಥ ವಿದ್ಯಾಭ್ಯಾಸ ಬೇಡವೇ ? ಆದ್ದರಿಂದ ನಾನು ಹೇಳುವುದೇನೆಂದರೆ ವ್ಯಾಕರಣ ಪದ್ಧತಿ ಅವಶ್ಯಕವಾಗಿ ಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕಾಗುತ್ತದೆ. ಮತ್ತೆ ಕನ್ನಡದಲ್ಲಿ ಎಂ.ಎ. ಪರೀಕ್ಷೆಯನ್ನು ಪಾಸು ಮಾಡಿಕೊಂಡಿರುವವರಿಗೆ ಇವತ್ತು ಕೆಲಸವೇ ಸಿಗುತ್ತಿಲ್ಲ. ಅವರು ಕೆಲಸಕ್ಕೆ ಹೋಗಬೇಕಾದರೆ ಯಾವುದಾದರೊಂದು ಕಾಲೇಜಿನಲ್ಲಿ ಅವರನ್ನು ಪ್ರಾಧ್ಯಾಪಕರನ್ನಾಗಿ ಅಂದರೆ ಕನ್ನಡ ಪ್ರಾಧ್ಯಾಪಕರನ್ನಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಯಾವ ಯಾವ ಹೈಸ್ಕೂಲುಗಳಲ್ಲಿ ಕನ್ನಡ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆಯೋ ಅಂಥ ಕಡೆಗಳಲ್ಲಿ ಅವರನ್ನು ನೇಮಿಸಿಕೊಂಡರೆ ಒಳ್ಳೆಯದು. ಇದರಿಂದ ಅವರು ಅಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ವಿಷಯಗಳನ್ನು ಮಕ್ಕಳಿಗೆ ಬೋಧನೆ ಮಾಡಬಹುದೆಂದು ನನ್ನ ಅಭಿಪ್ರಾಯ. ಮತ್ತೆ ಹೈಸ್ಕೂಲ್ ಮಟ್ಟದ ಮಕ್ಕಳಿಗೆ ನಮ್ಮ ದೇಶದ ಇತಿಹಾಸವೇನು ಎಂಬುದು ಗೊತ್ತಿಲ್ಲ. ಅದು ಹೋಗಲಿ, ಅದರ ಜೊತೆಗೆ ಕನ್ನಡವಾದರೂ ಕಲಿಸುವುದು ಬೇಡವೇ ?

ಶ್ರೀ ಬಿ. ರಾಚಯ್ಯ.—ನಮ್ಮ ಕಾಲದಲ್ಲಿ ಎಲ್ಲಾ ವಿಷಯಗಳನ್ನೂ ಒಬ್ಬ ಉಪಾಧ್ಯಾಯರೇ ಮಾಡುತ್ತಿದ್ದರು. ಆದ್ದರಿಂದ ನಾನು ಹೇಳುವುದೇನೆಂದರೆ ವಿದ್ಯಾರ್ಥಿಗಳಲ್ಲಿ ಮತ್ತು ಉಪಾಧ್ಯಾಯರಲ್ಲಿ ಒಂದು ಸಮರ್ಪಣ ಭಾವನೆ ಬರಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಹಳ್ಳಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಪರಿಸ್ಥಿತಿಯೇ ಬೇರೆ. ಇವತ್ತು ಎಷ್ಟು ಜನ ಮಕ್ಕಳಿಗೆ ಸಮಾಜ ಪರಿಚಯ ಪಾಠಗಳ ಬಗ್ಗೆ ಗೊತ್ತಿದೆ? ಆ ಪುಸ್ತಕದಲ್ಲಿ ನಮ್ಮ ರಾಜ್ಯದ ಇತಿಹಾಸ ಯಾರಿಗೆ ಗೊತ್ತಿದೆ? ಆದ್ದರಿಂದ ನಾನು ಹೇಳುವುದೇನೆಂದರೆ ನಾನು ಹೆಚ್ಚಾಗಿ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇದುವರೆಗೂ ಕೆಲವಾರು ಸಲಹೆಗಳನ್ನು ಕೊಟ್ಟಿದ್ದೇನೆ. ಆ ಎಲ್ಲಾ ಸಲಹೆಗಳನ್ನೂ ಮಾನ್ಯ ಮಂತ್ರಿಗಳು ಕಾರ್ಯರೂಪಕ್ಕೆ ತರುತ್ತಾರೆಂದು ನಂಬೋಣವೇ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಸಾರಿ ನಮ್ಮ ಒಪ್ಪಿಗೆ ಇದೆಯೆಂದು ಹೇಳಿದರೆ ಆಗ ನಾವು ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡೋಣ. ಆದ್ದರಿಂದ ಅವರು ಒಪ್ಪಿಗೆ ಕೊಡಲಿ. ಎಲ್ಲರೂ ಊಟಕ್ಕೆ ಹೋಗಿ ಊಟ ಮಾಡಿಕೊಂಡು ಬರೋಣ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ಅವರು ಈ ಸಾರಿ ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆಂದು ನೋಡಿಕೊಂಡು ಬೇಕಾದರೆ ಮುಂದಿನ ಸಾರಿ ಅವರು ಇದೇ ಬೇಡಿಕೆಯನ್ನು ಮಂಡಿಸಿದಾಗ ನೋಡೋಣ. ಈಗ ಅವರು ಮಂತ್ರಿ ಕೆಲಸ ಮತ್ತು ಊಟ ಮಾಡುವ ಕೆಲಸ ಎರಡೂ ಒಂದೇ ಸಾರಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಮೊದಲು ಊಟ ಮುಗಿಸಿಕೊಂಡು ಬನ್ನಿ.

ಶ್ರೀ ಬಿ. ರಾಚಯ್ಯ.—ತಾವು ಟೈಮ್‌ಗೆ ಸರಿಯಾಗಿ ಊಟ ಮಾಡದೇ ಬಿ.ಪಿ. ಜಾಸ್ತಿಯಾಗಿದೆ. ಆದ್ದರಿಂದ ಇನ್ನು ಮುಂದಾದರೂ ಟೈಮ್‌ಗೆ ಸರಿಯಾಗಿ ಊಟ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಸಾಮಾನ್ಯವಾಗಿ ಯಾವ ಒಬ್ಬ ಮನುಷ್ಯನಿಗೂ ಕೂಡ ಈ ವರದಿಯನ್ನು ನೋಡಿದಾಗ ಬಿ.ಪಿ. ಸಾಮಾನ್ಯವಾಗಿ ಬರುತ್ತದೆ. ಆ ಶಾಲೆಗಳಿಗೆ ಕಳುಹಿಸಿದಂಥ ತಂದೆ ತಾಯಿಗಳಿಗೆ ಬಿ.ಪಿ. ಬಂದು ಅವರು ಸತ್ತುಹೋಗುತ್ತಾರೆ. ಈ ವರ್ಷ ಮಂತ್ರಿಗಳು ಇವನ್ನೆಲ್ಲ ಮಾಡಿದರೆ ಮುಂದಿನ ವರ್ಷ ನೋಡೋಣ. ಈಗ 9 ತಿಂಗಳು ಆಯಿತು, ಮುಂದಿನ ವರ್ಷ ಯೋಚನೆ ಮಾಡೋಣ. 1983–84 ನೇ ವರ್ಷದ ಟಾರ್ಜೆಟ್ 100 ಪರ್ಸೆಂಟ್ ಸಾಧಿಸಿದರೆ ಮುಂದಿನ ವರ್ಷ ನೋಡೋಣ.

ಶ್ರೀ ಬಿ. ರಾಚಯ್ಯ.—ನೂರಕ್ಕೆ ನೂರರಷ್ಟು ಸಾಧಿಸುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್.—ನಮ್ಮ ಯುವ ಮಂತ್ರಿಯವರಿಗೆ ಒಂದೆರಡು ಮಾತು. ಅವರು ಸಿಗುವುದೇ ಇಲ್ಲ. ಅವರು ಯಾವಾಗಲೂ ಹೊರಗಡೆ ಸುತ್ತುತ್ತಲೇ ಇರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಯುವಕರು, ಯುವಜನ ಕ್ರೀಡೆಯೂ ಅವರಿಗೆ ಸೇರಿದೆ; ಆದ್ದರಿಂದ ಅವರು ಸುತ್ತುತ್ತಲೇ ಇರಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಯಾವ ಕ್ರೀಡೆ ಸ್ವಾಮಿ? ಅವರಲ್ಲಿ ನನ್ನ ಒಂದು ವಿನಂತಿ; ನಮ್ಮ ರಾಜ್ಯ ಕರ್ನಾಟಕ—ಅದರಲ್ಲೂ ಕೂಡ ಅದು ಹಳೆಯ ಮೈಸೂರು, ಬ್ಯಾಸ್ಕೆಟ್‌ಬಾಲ್ ಆಟದಲ್ಲಿ ಪ್ರಸಿದ್ಧವಾಗಿದ್ದಂಥ ರಾಜ್ಯ–ಫುಟ್‌ಬಾಲ್‌ಗೂ ನಮ್ಮ ರಾಜ್ಯ ಅದರಲ್ಲೂ—ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹಾಗೂ ಇನ್ನೂ ಮುಂತಾದ ಅನೇಕ ಊರುಗಳು ಪ್ರಸಿದ್ಧವಾಗಿವೆ. ಅದರ ಬಗ್ಗೆ ಕಾಳಜಿಯಿಲ್ಲ. ನಮ್ಮ ಫುಟ್‌ಬಾಲ್ ಸ್ಟೇಡಿಯಂ ಇವೊತ್ತಿನ ದಿವಸ ಕಟ್ಟುತ್ತಲೇ ಇದ್ದೇವೆ, ಇನ್ನೂ ಪೂರ್ತಿಯಾಗಿಲ್ಲ. ಆದರೆ ಶ್ರೀಮಂತರು ಆಡತಕ್ಕ ಟೆನ್ನಿಸ್ ಸ್ಟೇಡಿಯಂ ಕಬ್ಬನ್ ಪಾರ್ಕಿನಲ್ಲಿ ಬಂದುಬಿಟ್ಟಿದೆ. ಅದು ಅಲ್ಲಿಗೆ ಬರಬಾರದಾಗಿತ್ತು. ಬೇರೆ ಎಲ್ಲಾದರೂ ಕೊಡಬೇಕಾಗಿತ್ತು. ಹಿಂದೆ ಶ್ರೀಮಾನ್ ಕೆ. ಹನುಮಂತಯ್ಯನವರು ಈಗಿನ ರಿವರ್ವ್ ಬ್ಯಾಂಕ್ ಕಟ್ಟುವುದಕ್ಕೆ ವಿರುದ್ಧವಾಗಿದ್ದರು. ಅದೇ ರೀತಿ ದಿವಂಗತ ಶ್ರೀ ವಿ. ಕೆ. ಮೆನನ್ ಈಗಿನ ಕ್ರಿಕೆಟ್ ಸ್ಟೇಡಿಯಂ ಕಟ್ಟುವುದಕ್ಕೂ ವಿರುದ್ಧವಾಗಿದ್ದರು. ಇವೊತ್ತಿನ ದಿವಸ ಸೌತ್ ಪೆರೇಡ್‌ನಲ್ಲಿ ಎಂತಹ ದೃಶ್ಯವನ್ನು ನಾವು ಕಾಣುತ್ತಿದ್ದೇವೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಫುಟ್‌ಬಾಲ್ ಸ್ಟೇಡಿಯಂ ಹಾಗೆಯೇ ಉಳಿದುಕೊಂಡುಬಿಟ್ಟಿದೆ. ಹಾಗೆಯೇ ವಾಲಿಬಾಲ್ ಬಹಳ ಉತ್ಕೃಷ್ಟವಾದ ಆಟ, ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಹಳೆಯ ಕಾಲದಲ್ಲಿ ಈ ಆಟವನ್ನು ಆಡುತ್ತಿದ್ದವರಿಗೆ ಪ್ರೋತ್ಸಾಹ ಕೊಡತಕ್ಕದ್ದು; ಪೆನ್‌ಷನ್ ಕೊಡತಕ್ಕದ್ದು ಇದ್ದರೂ ಇಂದಿನ ದಿವಸಗಳಲ್ಲಿ ಅಂತಹ ಆಟಗಾರರಿಗೆ ಯಾವುದೇ ರೀತಿಯ ಪ್ರೋತ್ಸಾಹ ಸಿಗುತ್ತಿಲ್ಲ.

ಇವತ್ತು ಏನಾಗಿದೆಯೆಂದರೆ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡತಕ್ಕಂಥ ಪೆನ್‌ಷನ್‌ಗೂ ಲಂಚವನ್ನು ಕೊಡಬೇಕಾದಂಥ ಪರಿಸ್ಥಿತಿ ಸರ್ಕಾರದಲ್ಲಿ ಬಂದಿದೆ. ಆದ್ದರಿಂದ ತಾವು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ತಾವು ಬೇರೆ ನಾಟಕ ಕಂಪನಿಗಳನ್ನು ಮಾಡುತ್ತೇವೆಂದು ಏನೋ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಉದಾಹರಣೆಗೆ ಗುಬ್ಬಿ ವೀರಣ್ಣ ನಾಟಕ ರಂಗ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಆದರೆ ಇವತ್ತು ಹಳ್ಳಿಗಳಲ್ಲಿ ಇರತಕ್ಕಂಥ ಶಾಲೆಗಳಿಗೆ ಆಟದ ಮೈದಾನವಿಲ್ಲ. ಪ್ರೋತ್ಸಾಹವಿಲ್ಲ, ಇವಕ್ಕೆಲ್ಲ ಹೆಚ್ಚಿನ ಉತ್ತೇಜನವನ್ನು ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಈಗ ನಾಟಕ ಮಂಡಲಿ ಮುಚ್ಚಿಬಿಟ್ಟಿದ್ದೀರೆಂದು ಹೇಳಿದಿರಲ್ಲ, ಯಾವ ನಾಟಕ ಮಂಡಲಿ ಸ್ವಾಮಿ, ಗೊತ್ತಾಗಲಿಲ್ಲ.

ಶ್ರೀ ಹನುಮಂತರಾವ್ ದೇಸಾಯಿ.—ಇಂದಿರಾ ಕೃಪಾ ಪೋಷಿತ ನಾಟಕ ಮಂಡಲಿ ಸ್ವಾಮಿ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಹೋದ ಸಾರಿ ಎಲ್ಲಿಂದ ಟಿಕೆಟ್ ತೆಗೆದುಕೊಂಡಿದ್ದಿರಿ ಸ್ವಾಮಿ ? ಕೇವಲ 400 ಮತಗಳಿಗೆ ಸೋತಿರೆಂದು ನಿಮ್ಮ ಟ್ರಂಪ್‌ಕಾರ್ಡ್‌ನ್ನೇ ಬದಲಿಸಿಬಿಟ್ಟಿರೇ. ಏಕೆಂದರೆ ಇಸ್ಪೀಟ್ ಆಟದಲ್ಲಿ ಕೊನೆಗೆ ಒಂದು ಟ್ರಂಪ್‌ನಿಂದ ಎಲ್ಲಾ ಕಾರ್ಡುಗಳೂ ಬಿದ್ದು ಹೋಗುತ್ತವೆ. ಅಂದರೆ ಕೊನೆಗೆ ಬರುವ ಟ್ರಂಪ್‌ನಿಂದ ಮೊದಲಿನವೆಲ್ಲ ಬಿದ್ದುಹೋಗುತ್ತವೆ. ಇವತ್ತು ಕಾಲೇಜ್ ಟೀಚರ್ಸ್ ಅಸೋಸಿಯೇಷನ್ನಿನ ಡಾಕ್ಟರ್ ರಾಮಕೃಷ್ಣರಿದ್ದಾರೆ., ಅವರು ಉಪಾಧ್ಯಾಯರಿಗೆ ಏನೇನು ಅನುಕೂಲಗಳನ್ನು ಕಲ್ಪಿಸಬೇಕೆಂಬುದರ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಸ್ವಲ್ಪ ಪುಸ್ತಕಗಳನ್ನು ತಾವು ಓದಿ ಸ್ವಾಮಿ, ಸುಮ್ಮನೆ ಓದದೇ ಯಾವಾಗ್ಲೂ ಮಾತನಾಡಬೇಡಿ. ಶ್ರೀ ಬದರೀನಾರಾಯಣ್‌ರವರು ವಿದ್ಯಾಮಂತ್ರಿಗಳಾದ ಮೇಲೆ ಈ ಟ್ರಿಪಲ್ ಬೆನಿಫಿಟ್ ಸ್ಕೀಮ್ ಜಾರಿಗೆ ಬಂದಿದೆ ಎಂಬುದು ನಮಗೆ ಗೊತ್ತಿದೆ. ಇದನ್ನೆಲ್ಲ ಓದದೆ ಸುಮ್ಮನೆ ಮಾತನಾಡಬೇಡಿ. ಕೊನೆಯದಾಗಿ ನಾನು ಹೇಳಿದ ಇವೆಲ್ಲವನ್ನೂ ಅನುಷ್ಠಾನಕ್ಕೆ ತರುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನಿಸಬೇಕೆಂದು ಹೇಳಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿಟ್ಟಿರುವ ಈ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತಾ ನಾಲ್ಕಾರು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದಿದ್ದೇನೆ.

ಸ್ವಾಮಿ, ಮೊದಲನೆಯದಾಗಿ ನಾನು ಈ ವಿಧಾನಸಭೆಗೆ ಆರಿಸಿ ಬಂದ ಮೇಲೆ ಈ ವಿದ್ಯಾ ಇಲಾಖೆಯನ್ನು ಇಬ್ಬರು ಮಂತ್ರಿಗಳು ನಡೆಸಿಕೊಂಡು ಬರುತ್ತಿದ್ದರೆಂಬುದನ್ನು ನೋಡಿದ್ದೇನೆ. ಆದರೆ ಇವೊತ್ತಿನ ದಿವಸ ಒಬ್ಬರೇ ಕ್ಯಾಬಿನೆಟ್ ಮಂತ್ರಿಯವರು ಇಬ್ಬರು ಮಂತ್ರಿಗಳು ಮಾಡುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆಂಬುದು ಪ್ರಶಂಸಾರ್ಹ. ಹಿಂದೆ ಇಬ್ಬರು ಮಂತ್ರಿಗಳು ಇದ್ದಾಗಲೂ ಪ್ರತಿನಿತ್ಯ ಈ ವಿದ್ಯಾ ಕ್ಷೇತ್ರದಲ್ಲಿ 'ಕ್ಯಾವೋಟಿಕ್' ಕಂಡೀಷನ್ ಇರುತ್ತಿತ್ತು. ಒಂದು ಪ್ರಶ್ನೆಪತ್ರಿಕೆಗಳು ಬಯಲಾಗುವುದು, ಇಲ್ಲವೇ ಪ್ರಶ್ನೆಪತ್ರಿಕೆಗಳು ಮೊದಲೇ ಸಿಗುವುದು ಇಲ್ಲವೇ ತಪ್ಪು ಪೇಪರ್‌ಗಳನ್ನು ಕೊಡತಕ್ಕದ್ದು; ಇಲ್ಲವೇ ರೆಕಗ್ನಿಷನ್ ಇಲ್ಲದೇ ಕಾಲೇಜುಗಳನ್ನು ನಡೆಸತಕ್ಕಂಥದ್ದು—ಹೀಗೆ ಬೇರೆ ಬೇರೆ ಗಲಿಬಿಲಿ ಗೊಂದಲವನ್ನು ಉಂಟುಮಾಡತಕ್ಕ ಕಾಲ ಅದಾಗಿತ್ತು. ಅಂದಿನ ವಿದ್ಯಾ ಮಂತ್ರಿಗಳಾದ ಶ್ರೀ ಜಿ. ಬಿ. ಶಂಕರರಾಯರು, ಅವರ ಕಾಲದಲ್ಲೂ ಇಂತಹ ಕ್ಲಿಷ್ಟಕರವಾದ ಸಮಸ್ಯೆಗಳು ಬಂದಾಗ ಒಂದು ಗೊಂದಲಮಯ ಪರಿಸ್ಥಿತಿ ಈ ವಿಧಾನ ಮಂಡಲದಲ್ಲಿ ಉಂಟಾಗುತ್ತಿತ್ತು. ಅವರಿಗೆ ಸಾಮಾನ್ಯವಾಗಿ " .... " ಹೇಳುತ್ತಿದ್ದರು.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಅಧ್ಯಕ್ಷರೇ, 'ಗಡಿಬಿಡಿ' ಎಂಬ ಪದವನ್ನು ಉಪಯೋಗಿಸುವುದು ಸೂಕ್ತವಲ್ಲ. ಅದನ್ನು ತೆಗೆದು ಹಾಕುವುದು ಒಳ್ಳೆಯದು.

ಉಪಾಧ್ಯಕ್ಷರು.—ಅದನ್ನು ತೆಗೆದುಹಾಕಬಹುದು.

ಶ್ರೀ ಪಿ. ರಾಮ್‌ದೇವ್.—ಅವರ ಬಗ್ಗೆ ನಮಗೆ ಗೌರವವಿದೆ, ಅವರು ತಮ್ಮ ಪ್ರಾಮಾಣಿಕತನದಿಂದ ಪ್ರಯತ್ನ ಮಾಡಿದ್ದಾರೆ. ಆದರೆ ಯಾವುದೂ ಅವರ ಹಿಡಿತದಲ್ಲಿ ಸಿಗಲಿಲ್ಲ. ಬಹುಶಃ ಅಂದಿನ ವಿಧಾನ ಮಂಡಲದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭದಲ್ಲಿ ಯಾವ ರೀತಿಯ ಗೊಂದಲ ಉಂಟಾಗಿದೆ ಎಂಬುದನ್ನು ಅಂದಿನ ನಡವಳಿಕೆಯನ್ನು ನೋಡಿದರೆ ಸ್ಪಷ್ಟವಾಗಬಹುದು. ಇಬ್ಬರು ಮಂತ್ರಿಗಳು ಸಾಧನೆ ಮಾಡದಿರುವುದಕ್ಕೆ ಆಗದಿರತಕ್ಕಂಥ ಕೆಲಸವನ್ನು ಒಬ್ಬ ಮಂತ್ರಿಯವರು 9 ತಿಂಗಳಿಂದ ಸುಧಾರಿಸಿ ಕೊಂಡು ಬಂದಿರುವುದನ್ನು ನೋಡಿದರೆ, ಅವರ ಸ್ನೇಹಿತರೇ ಆಗಿರುವ ಈಗ ವಿರೋಧ ಪಕ್ಷದಲ್ಲಿ ಕುಳಿತು ಕೊಂಡಿರುವಂತಹ ಮಾನ್ಯ ಸದಸ್ಯರು ಅವರಿಗೆ ಶಹಭಾಸ್‌ಗಿರಿಯನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಮಾನ್ಯ ಶ್ರೀ ರಂಗನಾಥ್‌ರವರಾಗಲೀ, ಅಥವಾ ಮಾನ್ಯ ಖರ್ಗೆಯವರಾಗಲೀ ಅವರಿಗೆ ಶಹಭಾಸ್‌ಗಿರಿಯನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೆ. ಏಕೆಂದರೆ, ಇಬ್ಬರ ಕೈಯಲ್ಲಿ ಆಗದಿರತಕ್ಕ ಕೆಲಸವನ್ನು ಕೇವಲ ಒಬ್ಬರೇ ಮಂತ್ರಿಯವರು 9 ತಿಂಗಳಲ್ಲಿ ಮಾಡಿಸಿ ತೋರಿಸಿರುವುದು ನಿಜವಾಗಿಯೂ ಮೆಚ್ಚತಕ್ಕ ವಿಚಾರ. ಇಡೀ ದಿವಸ ಎಡೆಬಿಡದೆ ದಿನಕ್ಕೆ 18–20 ಗಂಟೆಗಳ ಕೆಲಸ ಮಾಡಿ ಶಿಸ್ತನ್ನು ತರತಕ್ಕಂಥ ಪ್ರಾಮಾಣಿಕ ಪ್ರಯತ್ನ ವನ್ನು ಮಾಡಿದ್ದಾರೆ. ರೆಕಾಗ್ನಿಷನ್ ಕೊಡುವ ವಿಷಯವಾಗಲೀ, ಅಫಿಲಿಯೇಷನ್. ಅಥವಾ ಟೀಚರ್ಸ್ ಅಪ್ರೂವಲ್ ವಿಚಾರದಲ್ಲಾಗಲೀ ಶ್ರೀಮಾನ್ ರಾಚಯ್ಯನವರು ಪ್ರಾಮಾಣಿಕವಾಗಿ ನಡೆದುಕೊಂಡಿರುವಾಗ ಶ್ರೀಮಾನ್ ಖರ್ಗೆಯವರು ಅವರಿಗೆ ಶಹಭಾಸ್‌ಗಿರಿಯನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಹಭಾಷ್‌ಗಿರಿ ಕೊಡಬೇಕಾದದ್ದೇ. ಯಾರೂ ಮಾಡಿರದ ಟ್ರಾನ್ಸ್‌ಫರ್‌ಗಳನ್ನು ಇವರು ಮಾಡಿದ್ದಾರೆ. ಹಿಂದೆ ಶಂಕರರಾಯರು ಶ್ರೀಮತಿ ನಾಗಮ್ಮ ಕೇಶವಮೂರ್ತಿ ಯವರು ಮಾಡದೇ ಇದ್ದ ಕೆಲಸಗಳನ್ನು ಇವರು ಮಾಡಿದ್ದಾರೆ. ಜಾಸ್ತಿ ಕೆಲಸವನ್ನೇ ಮಾಡಿದ್ದಾರೆ ಎಂದು ಹೇಳಬಹುದು. ಅವರು ಹತ್ತು ಪರ್ಸೆಂಟ್‌ನಷ್ಟು ಟ್ರಾನ್ಸ್‌ಫರ್ಸ್ ಮಾಡಿದ್ದರೆ ಇವರು ನೂರು ಪರ್ಸೆಂಟ್ ನಷ್ಟು ಮಾಡಿದ್ದಾರೆ.

ಶ್ರೀ ಪಿ. ರಾಮದೇವ್.—ಶ್ರೀಮಾನ್ ರಾಚಯ್ಯನವರು ಎಂಟು ತಿಂಗಳ ಅವಧಿಯದ್ದಿ ಈ ಇಲಾಖೆ ಯಲ್ಲಿ ಶಿಸ್ತನ್ನು ಮೂಡಿಸುವುದರಲ್ಲಿ ಮತ್ತು ಇದುವರೆಗೂ ಇದ್ದಂತಹ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಪ್ರಯತ್ನವನ್ನಂತೂ ಪ್ರಾಮಾಣಿಕವಾಗಿ ಮಾಡಿದ್ದಾರೆ. ಅದಕ್ಕಾಗಿ ನಾನು ಸಂಪೂರ್ಣವಾದ ಬೆಂಬಲ

ಬೆಂಬಲವನ್ನು ಕೊಡುವವನಿದ್ದೇನೆ. ಇನ್ನು ಕ್ರೀಡೆಗಳ ಬಗ್ಗೆ ಹೇಳುವುದಾದರೆ, ಯುವಜನ ಸೇವಾ ಇಲಾಖೆಯ ಬಗ್ಗೆ ಮಾನ್ಯ ರಂಗನಾಥ್ ಅವರನ್ನು ಬಿಟ್ಟರೆ ಬೇರೆಯವರು ಅಷ್ಟಾಗಿ ಮಾತನಾಡಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ನಾಲ್ಕೈದು ಜನ ಮಾತನಾಡಿದ್ದಾರೆ.

ಶ್ರೀ ಪಿ. ರಾಮದೇವ್.—ಡಿಪಾರ್ಟ್‌ಮೆಂಟ್ ಆಫ್ ಯೂತ್ ಸರ್ವಿಸಸ್ ಅಂಡ್ ಸ್ಪೋರ್ಟ್ಸ್ 1969 ನೇ ಇಸವಿಯಲ್ಲಿ ಪ್ರಾರಂಭವಾಯಿತು. 1980–81 ಕ್ಕಿಂತ ಮೊದಲು ಕ್ರೀಡೆ ಬೇರೆ ಇತ್ತು, ಯುವ ಜನ ಕಲ್ಯಾಣ ಬೇರೆ ಇತ್ತು. 1981 ರಲ್ಲಿ ಇವೆರಡನ್ನೂ ಸೇರಿಸಿ ಒಂದು ಇಲಾಖೆಯಾಗಿ ಮಾಡಿದರು. ರಾಷ್ಟ್ರೀಯವಾಗಿ ಕ್ರೀಡೆಗಳ ಬಗ್ಗೆ ಒಂದು ನೀತಿ ಪಾರ್ಲಿಮೆಂಟ್‌ನಲ್ಲಿ ಮಂಜೂರಾಗಿದೆ. ಅದು ನ್ಯಾಷನಲ್ ಪಾಲಿಸಿ ಆನ್ ಸ್ಪೋರ್ಟ್ಸ್" ಅಂತ. ಅದರ ಪ್ರಕಾರ ರಾಷ್ಟ್ರಮಟ್ಟದಲ್ಲಿ ಒಂದು ಸ್ಪೋರ್ಟ್ಸ್ ಕೌನ್ಸಿಲ್ ಇರಬೇಕು. ಏಕೆಂದರೆ ಕ್ರೀಡೆಗಳ ಬಗ್ಗೆ ಪ್ರತ್ಯೇಕವಾದ ಸಮಿತಿ ಇರಬೇಕೆಂದು ಏಕಾಏಕಿ ಅದನ್ನು ವಿಲೀನ ಮಾಡಿ ಅದನ್ನು ಇವತ್ತು ಈ ಇಲಾಖೆಯಲ್ಲಿ ಮರ್ಜ್ ಮಾಡಲಾಗಿದೆ. ನಾನು ಮೂವತ್ತು ವರ್ಷಗಳಿಂದ ಈ ಕ್ರೀಡಾ ಜಗತ್ತಿನಲ್ಲಿ ಇದ್ದೇನೆ. ನಾನ ಈಜುವುದರಲ್ಲಿ ಪರಿಣಿತನಾಗಿದ್ದು ಆಲ್ ಇಂಡಿಯಾ ತನಕ ಹೋಗಿದವನಾಗಿದ್ದೇನೆ. ರಾಷ್ಟ್ರೀಯ ಈಜುಗಾರರ ಫೇಡರೇಷನ್‌ಗೆ ಉಪಾಧ್ಯಕ್ಷ ಕೂಡ ಆಗಿದ್ದೆ.

ಶ್ರೀ ಹೆಚ್. ಡಿ. ಚೌಡಯ್ಯ.—ನೀವು ಜಲಕ್ರೀಡೆಯಲ್ಲಿ ಪ್ರವೀಣರು ಎಂದಾಯಿತು.

ಶ್ರೀ ಹೆಚ್. ಗಂಗಾಧರನ್.—ಬೇರೆ ಕ್ರೀಡೆಗಳಲ್ಲಿ?

ಶ್ರೀ ಪಿ. ರಾಮದೇವ್.—ಕ್ರೀಡೆಗಳನ್ನು ಯುವಜನ ಇಲಾಖೆಯಲ್ಲಿ ವಿಲೀನ ಮಾಡಿರುವುದರಿಂದ ಈ ಇಲಾಖೆಯಲ್ಲಿ ಸ್ಪೋರ್ಟ್ ಸ್ಪಿರಿಟ್ ಮಾಯವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಬೇರೆಯೇ ಆದ ಇಲಾಖೆಯನ್ನು ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಸಮರ್ಥಿಸುತ್ತೇನೆ ಮತ್ತು ಒತ್ತಾಯವನ್ನೂ ಕೂಡ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯಮಂತ್ರಿಗಳು ಇದನ್ನು ಬೇರ್ಪಡಿಸುತ್ತೇನೆ ಎಂದು ಹೇಳಿದ್ದಾರೆ. ಮಂತ್ರಿಮಂಡಲ ಪುನರ್ ರಚನೆಯಾದಾಗ ಈ ಇಲಾಖೆಯನ್ನು ನಿಮಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಕಾಂಗ್ರೆಸ್ (ಐ) ಸರ್ಕಾರ ಇದ್ದಾಗ ಖರ್ಗೆಯವರಿಗೆ ಇದನ್ನು ಕೊಡಲಿಕ್ಕೆ ಆಗಲಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ಖರ್ಗೆಯವರಿಗೆ ಮಾತ್ರ ಈ ಪದವಿ ಖಂಡಿತ ಸಿಗುವುದಿಲ್ಲ,.

ಶ್ರೀ ಪಿ. ರಾಮದೇವ್.—ಖರ್ಗೆಯವರು ಕೂಡ ಒಳ್ಳೆಯ ಸ್ಪೋರ್ಟ್ಸ್‌ಮನ್.

ಶ್ರೀ ಎ. ಲಕ್ಷ್ಮೀಸಾಗರ್.—ಖರ್ಗೆಯವರು ಬಹಳ ಆಟ ಆಡಿದ್ದಾರೆ. ಇಂಗ್ಲೀಷ್‌ನಲ್ಲಿ ಈ ರೀತಿ ಹೇಳುತ್ತಾರೆ. Mr, Kharge has played many a game.

ಶ್ರೀ ಪಿ. ರಾಮದೇವ್.—ಈ ಕ್ರೀಡಾ ಕ್ಷೇತ್ರದಲ್ಲಿ ಸುಮಾರು 28 ಆಟಗಳನ್ನು ಸೇರಿಸಿಕೊಂಡಿದ್ದಾರೆ. ಆದರೆ ಒಂದು ಆಶ್ಚರ್ಯದ ಅಂಶ ಎಂದರೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಯಾಗಿದ್ದಾಗ ಇಸ್ಪೀಟ್ ಆಟವನ್ನು ಒಂದು ಕ್ರೀಡೆಯೆಂದು ಪರಿಗಣಿಸಿ ಅದಕ್ಕೆ ಗ್ರಾಂಟ್‌ನ್ನು ಒಂದು ಅಸೋಸಿಯೇಷನ್‌ರವರಿಗೆ ಕೊಟ್ಟಿದ್ದರು ಇಸ್ಪೀಟ್ ಆಟ ಯಾವ ಕ್ರೀಡೆಯಲ್ಲಿ ಸೇರುತ್ತದೆ? Is it an Olympic movement? Is this a national movement? ಯಾವ ರೀತಿ ಇದರಲ್ಲಿ ಅದು ಬರುತ್ತದೆ?

ಡಾ॥ ಎಂ. ಪಿ. ಕರ್ಕಿ.—ಇಸ್ಪೀಟ್ ಆಟ ಒಂದು ಕ್ರೀಡೆಯೆಂದು ಹೈಕೋರ್ಟ್ ಜಡ್ಜ್‌ಮೆಂಟ್ ಆಗಿದೆ.

ಶ್ರೀ ಪಿ. ರಾಮದೇವ್.—ಇಸ್ಪೀಟ್ ಆಟ ಒಂದು ಕ್ರೀಡೆಯೆಂದು ಇಡೀ ಪ್ರಪಂಚದಲ್ಲೇ ಇಲ್ಲ. ಇದು ಅಂತರಾಷ್ಟ್ರೀಯ ಕ್ರೀಡೆಯೂ ಅಲ್ಲ, ರಾಷ್ಟ್ರೀಯ ಕ್ರೀಡೆಯೂ ಅಲ್ಲ...

ಒಬ್ಬರು ಮಾನ್ಯ ಸದಸ್ಯರು.—ಬ್ರಿಡ್ಜ್ ಒಂದು ಅಂತರಾಷ್ಟ್ರೀಯ ಆಟವಾಗಿದೆ. Bridge is an International game. It is being played from Cards,

ಶ್ರೀ ಪಿ. ರಾಮದೇವ್.—ಈಗ ಕ್ರೀಡೆಗಳಿಗೆ ಕೊಟ್ಟಿರುವುದು 20 ಲಕ್ಷ ರೂಪಾಯಿ. ಆದರಲ್ಲಿ ಐದು ಲಕ್ಷದಷ್ಟು ದಸರಾ ಕ್ರೀಡೆಗಳಿಗೆ, ಸ್ಪೋರ್ಟ್ಸ್ ಕೌನ್ಸಿಲ್ ಏರ್ಪಡಿಸತಕ್ಕ ಕ್ರೀಡೆಗಳಿಗೆ ಸಂಬಂಧಪಟ್ಟ ಕಾರು ಇತ್ಯಾದಿ ವ್ಯವಸ್ಥೆಗೆ ಹೋಗುತ್ತದೆ. ನಿಜವಾಗಲೂ ಸರ್ಕಾರ ಇದರ ಬಗ್ಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಇವತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಕ್ರೀಡಾಪಟುಗಳ ಬಗ್ಗೆ ಮಾತನಾಡುತ್ತೇವೆ. ಅವರ ಬಗ್ಗೆ ಹೆಮ್ಮೆ ಪಡುತ್ತೇವೆ. ಆದರೆ ಅವರು ಹೆಸರು ಮಾಡಿದ್ದು ಸರ್ಕಾರದ ಪ್ರೋತ್ಸಾಹದಿಂದಲ್ಲ. ರಾಷ್ಟ್ರಮಟ್ಟದ, ರಾಜ್ಯಮಟ್ಟದ ಸಂಘ ಸಂಸ್ಥೆಗಳ ಬೆಂಬಲದ ಮೇಲೆ ಅವರು ಮುಂದೆ ಬಂದಿದ್ದಾರೆ. ಇತ್ತೀಚೆಗೆ ಏಷಿಯನ್ ಗೇಮ್ಸ್ ನಡೆಯಿತು. ಅದಕ್ಕೆ 1500 ಕೋಟಿ ರೂಪಾಯಿ ಖರ್ಚಾಯಿತು. ಇಷ್ಟು ಭಾರಿ ಮೊತ್ತ ಖರ್ಚಾಯಿತು ಎಂದು ಹೇಳುತ್ತೇವೆ. ಆದರೆ ಆ ಸ್ಪಿರಿಟ್ ಈಗ ಎಲ್ಲಿದೆ? ಏಷಿಯನ್ ಗೇಮ್ಸ್‌ನಲ್ಲಿ ಮುಖ್ಯವಾಗಿರುವುದು ಕೋಚಿಂಗ್ ಮತ್ತು ಡಯಟಿಂಗ್. ಆಟಗಾರರನ್ನು ಆಯ್ಕೆ ಮಾಡಿ ವರ್ಷವೆಲ್ಲಾ ಕೋಚಿಂಗ್ ಕೊಡಬೇಕು. ಆದರೆ ಈ ರೀತಿ ಮಾಡುತ್ತಿಲ್ಲ. ಮುಂದೆ ಏಷಿಯನ್ ಗೇಮ್ಸ್ ಬರುತ್ತಿದೆ, ಒಲಂಪಿಕ್ ಮೀಟ್ಸ್ ಬರುತ್ತಾ ಇದೆ ಎಂದು ಕೇಂದ್ರದಲ್ಲಿ ಪ್ರತ್ಯೇಕ ಮಿನಿಸ್ಟ್ರಿಮಾಡಿ 10 ಕೋಟಿ ರೂಪಾಯಿ ಇಟ್ಟಿದ್ದಾರೆ. ಆದರೆ ರಾಜ್ಯ ಸರ್ಕಾರಕ್ಕೆ ಐದು ಲಕ್ಷ ರೂಪಾಯಿ ಕೊಟ್ಟರೆ ಸಾಕಾಗುವುದಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಾಕಷ್ಟು ಹಣ ಇಟ್ಟಿಲ್ಲವೆಂದು ವಿರೋಧ ಮಾಡುತ್ತೀದ್ದೀರಾ ?

ಶ್ರೀ ಪಿ. ರಾಮದೇವ್.—ಪಾರ್ಟಿ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. As a sportsman, I am speaking.

19 ಜಿಲ್ಲೆಗಳಲ್ಲಿ ಕ್ರೀಡಾಂಗಣವನ್ನು ಕಟ್ಟಬೇಕೆಂದು ಮಾಡಿದ್ದಾರೆ. ಆ ಕ್ರೀಡಾಂಗಣ ಹೇಗಿದೆ ಅಂದರೆ ಅದು ಮುಗಿಯದ ಕಥೆ. ಗಣೇಶನ ಮದುವೆಯಾದ ಹಾಗೆ. ಎಲ್ಲೂ ಕ್ರೀಡಾಂಗಣ ಮುಗಿದಿಲ್ಲ. 19 ಜಿಲ್ಲೆಗಳಲ್ಲಿ ಕ್ರೀಡಾಂಗಣವನ್ನು ಕಟ್ಟುವುದಕ್ಕಾಗಿ ಸರ್ಕಾರ ಎಷ್ಟು ಹಣ ಇಟ್ಟಿದೆ ಎಂದರೆ 10 ಲಕ್ಷ..

ಶ್ರೀ ಕೆ. ಹೆಚ್. ರಂಗನಾಥ್.—ಬೆಂಗಳೂರಿನರತಕ್ಕಂತಹ ಕ್ರೀಡಾಂಗಣವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದು 1945 ನೇ ಇಸವಿಯಲ್ಲಿ ಅಂದರೆ ಆಲ್ ಇಂಡಿಯಾ 12 ನೇ ಒಲಂಪಿಕ್ ಗೇಮ್ಸ್ ಸಮಯದಲ್ಲಿ.

ಶ್ರೀ ಪಿ. ರಾಮದೇವ್.—ಕ್ರಿಕೆಟ್ ಸ್ಟೇಡಿಯಂ ಖಾಸಗಿ ವಲಯದಿಂದ ಬಂದಿರತಕ್ಕಂತಹದ್ದು. ಸರ್ಕಾರದವರು ಕಟ್ಟತಕ್ಕಂತಹ ಕ್ರೀಡಾಂಗಣಗಳಾವುವೂ ಮುಗಿದಿಲ್ಲ. ವಿದ್ಯಾಭ್ಯಾಸಕಾಗಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಕ್ರೀಡೆಗಾಗಿ 5 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಿಂದ ಯಾವ ಮಂತ್ರಿಯಾಗಲೀ ಇದರಲ್ಲಿ ಏನನ್ನು ಮಾಡುವುದಕ್ಕಾಗುತ್ತದೆ ? ಕ್ರೀಡೆ ಉಳಿಯಬೇಕಾದರೆ ಖಾಸಗಿಯವರ ಪ್ರಯತ್ನದಿಂದ ಹೊರತು, ಸರ್ಕಾರದ ವಿಶೇಷ ಪ್ರಯತ್ನದಿಂದಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕ್ರೀಡೆಯ ಬಗ್ಗೆ ಜೆ. ಬಿ. ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾಯಿತು. ಅವರು ವ್ಯಾಪಕವಾದ ಒಂದು ದೊಡ್ಡ ಯೋಜನೆಯನ್ನೇ ಕೊಟ್ಟರು. ಅವರು ಕೊಟ್ಟಂತಹ ಯೋಜನೆ ಕಾರ್ಯಗತವಾಗಲಿಲ್ಲ. ಅದು ಎಲ್ಲಿದೆ ? ಅದೇ ರೀತಿ ಎರಡು ಯೋಜನೆಗಳ ಬಗ್ಗೆ ಸಾಕಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಅದರಲ್ಲಿ ಒಂದು ಕ್ರಿಕೆಟ್ ಸ್ಟೇಡಿಯಂ. ಇನ್ನೊಂದು ಟೆನ್ನಿಸ್ ಸ್ಟೇಡಿಯಂ. ವಾಲಿಬಾಲ್ ಸ್ಟೇಡಿಯಂಗೆ ಏನು ಕೊಟ್ಟಿದ್ದೀರಿ ? ಫುಟ್‌ಬಾಲ್ ಸ್ಟೇಡಿಯಂ ಅರ್ಧಂಬರ್ಧವಾಗಿ ನಿಂತಿದೆ. ಕೊಕ್ಕೋ ಅಸೋಸಿಯೇಷನ್‌ಗೆ ಯಾವ ಜಾಗವನ್ನು ಕೊಟ್ಟಿದ್ದೀರಿ ? ಅವರಿಗೆ ಯಾವ ರೀತಿ ಪ್ರೋತ್ಸಾಹ ಕೊಟ್ಟಿದ್ದೀರಿ ? ಅವರಿಗೆ ಜಾಗ ಕೊಟ್ಟಿಲ್ಲ. ಹಣ ಕೊಟ್ಟಿಲ್ಲ. ಆದರೆ ಅವರೆಲ್ಲರೂ ರಾಷ್ಟ್ರಮಟ್ಟದಲ್ಲಿ ಚಾಂಪಿಯನ್ ಆಗಿ ಬರುತ್ತಿದ್ದಾರೆ. ರಾಜ್ಯದ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಅವರು ಬಿತ್ತರಿಸುತ್ತಿದ್ದಾರೆ. ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈ ಸಂಘ ಸಂಸ್ಥೆಗಳು ಯಾವುವು ಇವೆ, ಅವುಗಳನ್ನು ಕರೆಸಿ ಅವರಿಗೆ ಏನು ತೊಂದರೆ ಇದೆ ಎಂಬುದನ್ನು ವಿಚಾರ ಮಾಡಬೇಕು. ಅವರು ಕೇಳತಕ್ಕಂತಹದ್ದು ಜಾಗ ಮತ್ತು ಒಂದು ಶಾಶ್ವತ ಕ್ರೀಡಾಂಗಣ. ಅದಕ್ಕೆ ಅವಕಾಶ ಮಾಡಿಕೊಡತಕ್ಕಂತಹದ್ದು ಅತೀ ಮುಖ್ಯವಾದುದು. ಕ್ರೀಡೆಯನ್ನು ಕಡ್ಡಾಯವನ್ನಾಗಿ ಮಾಡಿ. ಈಸ್ಟ್ ಜರ್ಮನಿಯು 3 ನೇ ಒಲಂಪಿಕ್ ಗೇಮ್ಸ್‌ನಲ್ಲಿ 3 ನೇ ಸ್ಥಾನ ಪಡೆದಿದೆ. ಅಲ್ಲಿಗೆ ಭಾಗವಹಿಸಿದಂತಹ ಕ್ರೀಡಾಪಟುಗಳು, ಮತ್ತು ದೇಶದ ರಾಜಕಾರಿಣಿಗಳು ಯಾರು ಅಲ್ಲಿಗೆ ಹೋಗಿ ಬಂದಿದ್ದಾರೋ ಅವರು ಆ ಮಾತನ್ನು ಹೇಳಿದ್ದಾರೆ. ನಮ್ಮ ದೇಶ ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರ್ರಾಷ್ಟ್ರ ಮಟ್ಟದಲ್ಲಿ ಖ್ಯಾತಿಯನ್ನು ಪಡೆಯಬೇಕಾಬದರೆ ಕ್ರೀಡೆಯನ್ನು ನಾವು ಕಡ್ಡಾಯವಾಗಿ ಶಾಲಾ ಕಾಲೇಜುಗಳಲ್ಲಿ ಜಾರಿಗೆ ತರಬೇಕು. ಶಾಲಾ ಕಾಲೇಜುಗಳಲ್ಲಿ ಕ್ರೀಡೆ ಹೇಗೆ ನಡೆಯುತ್ತದೆ ? ದುಡ್ಡು ಮಾತ್ರ ಖರ್ಚಾಗುತ್ತಿದೆ. ವಾರಕ್ಕೆ ಒಂದು ದಿವಸ ವಿದ್ಯಾರ್ಥಿಗಳನ್ನು ಕರೆದು ಅವರಿಗೆ ಮಸಾಲೆದೋಸೆ ಕೊಟ್ಟು ಕಳುಹಿ ಬಿಡುತ್ತಾರೆ. ಅವರಿಗೆ ಮೊಟ್ಟೆ ಎಲ್ಲಿ ಕೊಡುತ್ತಾರೆ ?

ಶ್ರೀ ಕೆ. ಹೆಚ್ ರಂಗನಾಥ್.—ಖಾಸಗೀ ಶಾಲೆಗಳಲ್ಲಿ ಆಟದ ಮೈದಾನಕ್ಕಾಗಿ ಜಾಗ ಎಲ್ಲಿದೆ ? ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ಇದೆ. ಫೋರ್ಟ್ ಹೈಸ್ಕೂಲಿನಲ್ಲಿ ಸ್ವಲ್ಪ ಜಾಗ ಇದೆ. ಸೆಂಟ್ರಲ್ ಹೈಸ್ಕೂಲಿನ ಪಕ್ಕದಲ್ಲಿದ್ದಂತಹ ಜಾಗದಲ್ಲಿ ಬನಪ್ಪ ಪಾರ್ಕ್ ಬರುತ್ತಿದೆ. ಜಾಗವೇ ಇಲ್ಲದ ಹಾಗಾಗಿದೆ. ಸೆಂಟ್ರಲ್ ಕಾಲೇಜಿನಲ್ಲೂ ಆಟಕ್ಕಾಗಿ ಜಾಗ ಇಲ್ಲ. ಇದು ಬೆಂಗಳೂರು ಪಟ್ಟಣದ ಪರಿಸ್ಥಿತಿಯಾದರೆ, ಇನ್ನು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಇದರ ಕಡೆ ಗಮನವನ್ನೇ ಹರಿಸಿಲ್ಲ.

ಶ್ರೀ ಪಿ. ರಾಮದೇವ್.—ತಾಲ್ಲೂಕು ಮಟ್ಟದಲ್ಲಿ ಗಮನ ಹರಿಸಿಲ್ಲ. ಕ್ರೀಡೆಯನ್ನು ಕಡ್ಡಾಯವನ್ನಾಗಿ ಮಾಡುವುದಕ್ಕೆ ಬೇಕಾಗುವಷ್ಟು ಜಾಗವನ್ನು ಹುಡುಕಬೇಕಾಗಿದೆ. ಕ್ರೀಡೆಯನ್ನು ಬೆಳೆಸತಕ್ಕಂತಹ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿದೆ. ಶಾಲಾ ಕಾಲೇಜುಗಳಲ್ಲಿ ಈಗ ಏನು ಮಾಡುತ್ತಿದ್ದಾರೆಂದರೆ ಕ್ರೀಡೆಗಾಗಿ ಕೊಟ್ಟಂತಹ ಫೀಯನ್ನು ಖರ್ಚು ಮಾಡುವುದಕ್ಕೋಸ್ಕರ ವರ್ಷಕ್ಕೊಮ್ಮೆ ಸ್ಪೋರ್ಟ್ಸ್ ಮಾಡಬೇಕೆಂದು ಮಾಡಿ ಆ ಹಣವನ್ನು ಖರ್ಚುಮಾಡಿ ನಮ್ಮ ಕೆಲಸ ಇಲ್ಲಿಗೆ ಮುಗಿಯಿತು ಅಂತ ಮನೆಗೆ ಹೋಗಿಬಿಡುತ್ತಾರೆ. ಕಾಲೇಜು ಮಟ್ಟದಲ್ಲಿ ಹಾಗೂ ಡಿಗ್ರಿ ಮಟ್ಟದಲ್ಲಿ ಹಾಗೂ ಪೋಸ್ಟ್ ಗ್ರಾಜುಯೇಟ್ ಮಟ್ಟದಲ್ಲಿ ವಿದ್ಯಾರ್ಥಿಗಳು ಕ್ರೀಡೆಯಲ್ಲಿ 12 ವರ್ಷದಿಂದ 14 ವರ್ಷದೊಳಗೆ ಕನಿಷ್ಠ ಮಟ್ಟಕ್ಕಾದರೂ ಬರಬೇಕಾಗುತ್ತದೆ. ಆದರೆ ನಮ್ಮಲ್ಲಿ 20 ರಿಂದ 22 ವರ್ಷ ಆದಮೇಲೆ ಆ ರೀತಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ 12 ರಿಂದ 14 ವರ್ಷದೊಳಗಾಗಿಯೇ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಕ್ರೀಡೆಯನ್ನು ಬೆಳೆಸುವ ಬಗ್ಗೆ ಚಿಂತನೆಯನ್ನು ನಮ್ಮ ಮಂತ್ರಿಗಳು ಮಾಡಬೇಕು. ಇದಕ್ಕಾಗಿ ಹಣ ಬೇಕೆಂದರೆ, ಕಡ್ಡಾಯವಾಗಿ ತೆರಿಗೆಯನ್ನಾದರೂ ಹಾಕಿ. ಜನ ಕೊಡುತ್ತಾರೆ. ಕ್ರೀಡೆಗಾಗಿ ಅಂತ ಹೇಳಿದರೆ ಯಾರೂ ಕೊಡುವುದಿಲ್ಲ ಅಂತ ಹೇಳುವುದಿಲ್ಲ. ಕೊನೆಯಪಕ್ಷ ಅದನ್ನಾದರೂ ಜಾರಿಗೆ ತರಬೇಕೆಂದು ಹೇಳುತ್ತಿದ್ದೇನೆ.

ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಹೇಳುವುದಾದರೆ, ಬೇಕಾದಷ್ಟು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಆದರೂ ಸಾಲದು. ಕನ್ನಡವನ್ನು ಕಡ್ಡಾಯವನ್ನಾಗಿ ಮಾಡಬೇಕೆಂಬ ಚಳುವಳಿ ಇಷ್ಟು ಬೃಹದಾಕಾರವಾಗಿ ಮಾಡುತ್ತಿರುವಾಗ ಕನ್ನಡದದ ಉತ್ತೇಜನಕ್ಕಾಗಿ ಮಾಡಿರತಕ್ಕಂತಹ ಕೆಲಸ ಏನೇನೂ ಸಾಲದು ಎಂಬುದಾಗಿ ತಮಗೆ ಹೇಳಬೇಕಾಗುತ್ತದೆ. ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ನಾವೆಲ್ಲರೂ ಹೇಳುತ್ತಿದ್ದೇವೆ. ಗೋಕಾಕ್ ಚಳುವಳಿಯನ್ನು ಬೆಂಬಲಿಸುತ್ತೇವೆ. ಆದರೆ ಕನ್ನಡ ಶಾಲೆಗಳಿಗೆ ಮಕ್ಕಳು ಹೋಗುತ್ತಿಲ್ಲವೆಂಬುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಕನ್ನಡವನ್ನು ಕಡ್ಡಾಯವನ್ನಾಗಿ ವನಾಡಿದರೂ ನಾವು ಒಂದು ಕೆಲಸವನ್ನು ಮಾಡಬಹುದೆಂದು ನನಗನ್ನಿಸುತ್ತದೆ. ಅದೇನೆಂದರೆ, ಕನ್ನಡದಲ್ಲಿ ವ್ಯಾಸಂಗ ಮಾಡತಕ್ಕಂತಹ ವಿದ್ಯಾರ್ಥಿಗಳಿಗೆ ಪ್ರೈಮರಿ ಶಾಲೆಯಿಂದ ಹಿಡಿದು., ಕಾಲೇಜುಮಟ್ಟದಲ್ಲಿ, ಮುಂದೆ ಡಿಗ್ರಿಮಟ್ಟದಲ್ಲಿ, ನಂತರ ಪೋಸ್ಟ್ ಗ್ರಾಜುಯೇಟ್ಸ್ ಮಟ್ಟದಲ್ಲಿ–ಹೀಗೆ ಎಲ್ಲ ಹಂತಗಳಲ್ಲೂ ಉಚಿತವಾಗಿ ವಿದ್ಯಾಭ್ಯಾಸವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದರೆ ಆಗ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆ ಕಡೆಗೆ ಬರುತ್ತಾರೆಂದು ಹೇಳುತ್ತೇನೆ. ಇವತ್ತು ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ತಾವೆಲ್ಲರೂ ನೋಡಿರಬಹುದು. ಬೆಂಗಳೂರಿನಲ್ಲಿರುವ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಶೇಕಡಾ 50 ಕ್ಕಿಂತ ಕಡಿಮೆ ಅಡ್ಮಿಷನ್ ಇದ್ದರೆ ಅದನ್ನು ಅಪ್ರೂವ್ ಮಾಡುವುದಿಲ್ಲ, ವಾಪಸ್ಸು ತೆಗೆದುಕೊಳ್ಳಿ ಎಂಬುದಾಗಿ ಹೇಳುತ್ತಿದ್ದಾರೆ. ಏಕೆ ಹೀಗಾಗುತ್ತಿದೆ ? ಇಂಗ್ಲೀಷ್‌ನ ಮೇಲೆ ಇರತಕ್ಕಂತಹ ವ್ಯಾಮೋಹವನ್ನು ಕಡಿಮೆ ಮಾಡತಕ್ಕಂತಹದ್ದು ಅಗತ್ಯ ಇದೆ. ಇದರ ಬಗ್ಗೆ ನಾನು ಸಲಹೆ ಮಾಡುವುದೇನೆಂದರೆ, ಕನ್ನಡ ಶಾಲೆಗಳು ಏನಿವೆ, ಆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಿ, ಪಠ್ಯಪುಸ್ತಕಗಳನ್ನು ಉಚಿತವಾಗಿ ಕೊಡಿ, ಆಗ ಎಲ್ಲ ಕಡೆ ಕನ್ನಡ ಎಷ್ಟು ಚೆನ್ನಾಗಿ ಬರುತ್ತದೆಂಬುದನ್ನು ನೋಡಿ.

ಇನ್ನು ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಇಲ್ಲಿ ಎಲ್ಲೂ ಹೇಳಿಲ್ಲ. ಅದರ ಕತೆ ಏನಾಯಿತು ? ಅದನ್ನು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ವಿಚಾರವಾಗಿ ಹೇಳುವುದಾದರೆ, ಅಲ್ಲಿ ಬೇಕಾದಷ್ಟು ಅವ್ಯವಹಾರ, ಹಾಗೂ ಭ್ರಷ್ಟಾಚಾರ ನಡೆದಿದೆ ಎಂಬುಧರ ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳು ಬಂದಿವೆ. ಈಗ ಆ ವ್ಯವಹಾರ ಕೋರ್ಟ್‌ನಲ್ಲಿದೆ. ಇದನ್ನು ಹೋಗಲಾಡಿಸಬೇಕಾಗಿದೆ. ಅದಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಹಿಂದೆಯೇ ಈ ಕೆಲಸವನ್ನು ಮಾಡಿ ಅದನ್ನು ಸರಿ ಮಾಡಬಹುದಿತ್ತು. ಹಿಂದಿನವರು ಅದನ್ನು ಮಾಡಲಿಲ್ಲ. ಈಗಲಾದರೂ ಇದನ್ನು ಸರಿಮಾಡಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸದಸ್ಯರಾಗಬೇಕಾದದ್ದು ಕೇವಲ ಸಾಹಿತಿಗಳು ಮಾತ್ರ. ನಮ್ಮಂತಹವರೂ ಅಲ್ಲಿ ಸದಸ್ಯರಾಗಿಬಿಟ್ಟಿದ್ದಾರೆ. ವ್ಯಾಪಾರ ಮಾಡತಕ್ಕಂತಹವರು, ಉದ್ಯೋಗದಲ್ಲಿರುವವರು, ರಾಜಕಾರಿಣಿಗಳಾದ ನಮ್ಮಂತಹವರು ಸದಸ್ಯರಾಗಿರುವುದರಿಂದ, ಕನ್ನಡ ಸಾಹಿತ್ಯ ಪರಿಷತ್ತು ತನ್ನ ಒರಿಜಿನಾಲಿಟಿಯನ್ನೇ ಕಳೆದುಕೊಂಡಿದೆ. ಆದ್ದರಿಂದ ಇದನ್ನು ಒಬ್ಬ ಆಡಳಿತಾಧಿಕಾರಿಯ ವಶಕ್ಕೆ ಕೊಟ್ಟು ಸರಿಪಡಿಸತಕ್ಕಂತಹ ಪ್ರಯತ್ನವನ್ನು ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ವ್ಯಾಪಾರ ಗೀಪಾರ ಮಾಡತಕ್ಕಂತಹವರಿಗೆ ಸಾಹಿತ್ಯದಲ್ಲಿ ಅಭಿರುಚಿ ಇಲ್ಲ ಅಂತ ನಿಮ್ಮ ಅಭಿಪ್ರಾಯವೇ ? ಬರವಣಿಗೆ ಕೆಲಸ ಮಾಡುವ ಕೆ. ವಿ. ಅಯ್ಯರ್‌ರವರ ಪುಸ್ತಕ ಯಾವುದಕ್ಕೆ ಕಡಿಮೆ ಇದೆ ? ಅವರು ಬರೆದಿರತಕ್ಕಂತಹ ಶಾಂತಲಾ ಪುಸ್ತಕವನ್ನು ನೀವು ಓದಿದ್ದೀರಾ ? ಅದು ಹೇಗಿದೆ ಅಂತ ನಿಮ್ಮ ಅಭಿಪ್ರಾಯ ?

ಶ್ರೀ ಪಿ. ರಾಮದೇವ್.—ಬಹಳ ಉತ್ತಮವಾದ ಕೃತಿ. ನಾನು ಹೇಳಿದ್ದು ಆ ಅಭಿಪ್ರಾಯದಿಂದಲ್ಲ. ಕೋರ್ಟಿನಲ್ಲಿರುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ ಸದಸ್ಯರಾಗುವವರೆಲ್ಲ, ನಾನು ಅಧ್ಯಕ್ಷನಾಗಬೇಕು, ನಾನು ಕಾರ್ಯಕಾರಿ ಸಮಿತಿಯ ಸದಸ್ಯನಾಗಬೇಕೆಂಬ ಅಭಿಲಾಷೆಯುಳ್ಳವರೇ ಸದಸ್ಯರಾಗಿದ್ದಾರೆ. ಆದ್ದರಿಂದ ನಾನು ಆ ರೀತಿ ಹೇಳಿದ್ದು.

ಇನ್ನು ಫ್ಲೈಯ್ಯಿಂಗ್ ಸ್ಕೂಲ್‌ನ ವಿಚಾರದಲ್ಲಿ ಹೇಳುವುದಾದರೆ, ಕನ್ನಡದ ಕೇವಲ ಇಬ್ಬರೇ ಇಬ್ಬರು ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ವಿಮಾನವನ್ನು ನಡೆಸುವುದಕ್ಕೆ ಲೈಸೆನ್ಸ್ ಬೇಕೆಂದು ಕೇಳುವವರು ನಮ್ಮಲ್ಲಿ ಇಲ್ಲವೇ ? ಇಬ್ಬರು ಕನ್ನಡದ ವಿದ್ಯಾರ್ಥಿಗಳಲ್ಲಿ ನಮ್ಮ ಮಾಜಿ ಮುಖ್ಯಮಂತ್ರಿಗಳ ಮಗನೂ ಒಬ್ಬ ಇರಬೇಕೆಂದು ಕಾಣುತ್ತದೆ. ಸರ್ಕಾರಕ್ಕೆ ಈ ಬಗ್ಗೆ ನಾನು ಸಲಹೆ ಕೊಡುವುದೇನೆಂದರೆ, ಹೆಚ್ಚು ಹೆಚ್ಚು ಯುವಕರಿಗೆ ವೈಮಾನಿಕ ಶಾಲೆಗೆ ಪ್ರವೇಶವನ್ನು ಕೊಟ್ಟು ವಿಮಾನವನ್ನು ನಡೆಸತಕ್ಕಂಥ ಒಂದು ಅವಕಾಶ ಸಿಗುವಂತೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಸಲಹೆ ಕೊಡುತ್ತಿದ್ದೇನೆ.

ಅಧ್ಯಕ್ಷರೇ, ನಾನು ಇನ್ನು ಪ್ರೈಮರಿ ಎಜುಕೇಷನ್ ಬಗ್ಗೆ ಒಂದೆರಡು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ವರ್ಷ ಒಂದು ಪ್ರಯತ್ನ ಮಾಡಿದ್ದಾರೆ. ಅಂದರೆ 1982–83 ರಲ್ಲಿ ಯೂನಿಫಾರಂ ಆಗಿ ಪ್ರೈಮರಿ ಎಜುಕೇಷನ್ ಇರಬೇಕು ಅನ್ನುವ ಒಂದು ಪ್ರಯೋಗ ಮಾಡಿದ್ದಾರೆ. ಅದರಲ್ಲಿ ಟಾರ್ಗೆಟ್ ನೋಡಿದರೆ ವಿದ್ಯಾರ್ಥಿಗಳ ಸಂಖ್ಯೆ 51·85. ಅಚೀವ್‌ಮಿಂಟ್ಸ್ 51·12 ಅಂದರೆ ಶೇಕಡಾ 64 ಪರ್ಸೆಂಟ್ ಮಾತ್ರ ಆಯಿತು. ಇನ್ನು ಉಳಿದ 36 ಪರ್ಸೆಂಟ್ ಅಚೀವ್‌ಮೆಂಟ್ ಯಾವಾಗ ಮಾಡುತ್ತೀರಾ ?

ಇದರ ಬಗ್ಗೆ ಏನಾದರೂ ಯೋಜನೆ ಹಾಕಿಕೊಂಡಿದ್ದೀರಾ? ಇದರಲ್ಲಿ ಮಕ್ಕಳಿಗೆ ಏನು ಇನ್‌ಸೆಂಟೀವ್ ಮಾಡಿದ್ದೇವೆ ಅಂತ ಏನು ಹೇಳಿದ್ದೀರಾ ಅದರಲ್ಲಿ ಏನು ಅನ್ಯಾಯವಾಗಿದೆ ಅನ್ನುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಈ ಇನ್‌ಸೆಂಟೀವ್ ಅನ್ನುವುದು ಬಹಳ ಪ್ರಾಮುಖ್ಯವಾದ ವಿಷಯ. ಈ ಮಿಡ್ಡೇ ಮೀಲ್ಸ್‌ಗೆ 1981 ರಲ್ಲಿ 15·76 ಲಕ್ಷ, 1982 ರಲ್ಲಿ 14·23 ಲಕ್ಷ, 1983 ರಲ್ಲಿ 12·50 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಪಕ್ಕದ ರಾಜ್ಯದಲ್ಲಿ ನೋಡಿದರೆ ಅಲ್ಲಿ ಎಲ್ಲಾ ಮಕ್ಕಳಿಗೂ ಕೂಡ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ನೋಡಿದರೆ ಸುಮಾರು 51 ಲಕ್ಷ ಮಕ್ಕಳಿಗೆ ಒಂದನೇ ಸ್ಟ್ಯಾಂಡರ್ಡ್‌ನಿಂದ ಹಿಡಿದು 7 ನೇ ಸ್ಟ್ಯಾಂಡರ್ಡ್‌ನವರೆಗೆ ಇರತಕ್ಕಂಥ ಎಲ್ಲಾ ಮಕ್ಕಳಿಗೂ ಏನು ಒಂದು ಮಧ್ಯಾಹ್ನದ ಉಪಹಾರ ಕೊಡಬೇಕಾಗಿತ್ತೋ ವರ್ಷ ವರ್ಷ ಇದರ ಟಾರ್ಗೆಟನ್ನು ಕಡಿಮೆ ಮಾಡಿಕೊಂಡು ಬರುತ್ತಿದ್ದೀರಿ. ಇನ್ನು ತಾವು ಹೇಳುತ್ತೀರಾ ಈ ಮಕ್ಕಳ ಬಗ್ಗೆ, ಈ ಬಡಮಕ್ಕಳ ಬಗ್ಗೆ ಕಳಕಳಿ ಇದೆ ಎಂದು . ಇದರಲ್ಲಿ ಕೊಟ್ಟಿರುವ ಅಂಕಿಅಂಶದಿಂದ ಈ ಬಗ್ಗೆ ಇಟ್ಟಿರತಕ್ಕಂಥಾ ಹಣವನ್ನು ಪೂರ್ತಾ ಖರ್ಚು ಮಾಡಲಿಲ್ಲ.ಅಂತ ಕಾಣುತ್ತದೆ. ಕೇರ್ ಸಂಸ್ಥೆಯಿಂದ 11·33 ಕೋಟಿ ರೂಪಾಯಿ ಕೊಟ್ಟಿದ್ದರೆ ಇದರಲ್ಲಿ ನಮ್ಮ ರಾಜ್ಯದ ಅಸಿಸ್ಟೆನ್ಸ್ ಸಹ 235 ಲಕ್ಷ ಕೊಟ್ಟಿದ್ದಾರೆ. ಆದರೂ ಆ ಬಡಮಕ್ಕಳಿಗೆ ಏನೂ ಇನ್‌ಸೆಂಟೀವ್ ಸರಿಯಾಗಿ ಕೊಟ್ಟಿಲ್ಲ. ಆದುದರಿಂದ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ರಾಚಯ್ಯನವರ ಗಮನಕ್ಕೆ ತರುವುದೇನೆಂದರೆ, ತಮ್ಮ ಕಾಲದಲ್ಲಾದರೂ ಕೂಡ ಯಾವುದಾದರೂ ಒಂದು ವಿಚಾರವನ್ನು, ಒಂದು ಯೋಜನೆಯನ್ನು ಸಾಧನೆ ಮಾಡಿದರೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಇಂಥವರ ಕಾಲದಲ್ಲಿ ಇದು ಸಾಧನೆಯಾಯಿತು ಅನ್ನುವುದು ಆಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ತಾವು ಇದರ ಬಗ್ಗೆ ಗಮನ ಕೊಟ್ಟು ರಾಜ್ಯದ ಎಲ್ಲಾ ಮಕ್ಕಳಿಗೂ ಒಂದನೇ ಸ್ಟ್ಯಾಂಡರ್ಡ್‌ನಿಂದ ಹಿಡಿದು 7 ನೇ ಸ್ಟ್ಯಾಂಡರ್ಡ್‌ವರೆಗೆ ಇರುವ ಮಕ್ಕಳಿಗೆಲ್ಲಾ ಮಧ್ಯಾಹ್ನದ ಉಪಹಾರ ವ್ಯವಸ್ಥೆಯನ್ನಾದರೂ ಮಾಡಿ. ಹಾಗೆ ಮಾಡದೇ ಹೋದರೆ ಈ ತರಹ ಏನಾದರೂ ಇನ್‌ಸೆಂಟೀವ್ ಕೊಡದೇ ಹೋದರೆ ಡ್ರಾಪ್‌ಔಟ್ಸ್ ಜಾಸ್ತಿಯಾಗುತ್ತದೆ. ಆದುದರಿಂದ ಎಲ್ಲಾ ಬಡ ಮಕ್ಕಳಿಗೂ ಮಧ್ಯಾಹ್ನದ ಉಪಹಾರದ ವ್ಯವಸ್ಥೆಯನ್ನು ಮಾಡಬೇಕು.

ಎರಡನೆಯದಾಗಿ ಉಚಿತವಾಗಿ ಪಠ್ಯಪುಸ್ತಕಗಳನ್ನು ಎಲ್ಲರಿಗೂ ಕೊಡಬೇಕು. ಇವತ್ತು ಸುಮಾರು 60 ಸಾವಿರದವರೆಗೋ ಅಥವಾ ಒಂದು ಲಕ್ಷದವರೆಗೋ ಕೊಡುತ್ತಿದ್ದೀರಿ. ಪಾಶ್ಚಿಮಾತ್ಯ ದೇಶದಲ್ಲಿ ಎಲ್ಲಾ ಮಕ್ಕಳಿಗೂ ಉಚಿತ ಪಠ್ಯಪುಸ್ತಕಗಳನ್ನು ಕೊಡುತ್ತಿದ್ದಾರೆ. ಆ ಪುಸ್ತಕದಲ್ಲಿ ಅವರು ಏನು ಬರೆಯುತ್ತಾರೆ ಎಂದರೆ ಇದು ರಾಜ್ಯದ ಆಸ್ತಿ ಎಂದು ಬರೆಯುತ್ತಾರೆ. ಹಾಗೆ ನೀವು ಇಲ್ಲಿ ಎಲ್ಲಾ ಮಕ್ಕಳಿಗೂ ಉಚಿತ ಪಠ್ಯಪುಸ್ತಕಗಳನ್ನು ಕೊಡುವ ಹಾಗೆ ಒಂದು ಯೋಜನೆಯನ್ನು ತೆಗೆದುಕೊಂಡು ಬರಬೇಕು ಎಂದು ಹೇಳುತ್ತೇನೆ.

ಮೂರನೆಯದಾಗಿ ತಾವು ಇನ್ನೊಂದು ಕೆಲಸ ಮಾಡಬೇಕು. ಅದೇನೆಂದರೆ ಇದು ಬೇರೆ ಕಡೆಗಳಲ್ಲೂ ಇದೆ. ಅವರು ಬರೇ ಉಚಿತವಾಗಿ ಪಠ್ಯಪುಸ್ತಕಗಳನ್ನು ಕೊಡುವುದೇ ಅಲ್ಲದೆ ಆ ಮಕ್ಕಳಿಗೆ ಉಚಿತ ಸಾರಿಗೆ ವ್ಯವಸ್ಥೆಯನ್ನೂ ಕೂಡ ಮಾಡಿಕೊಟ್ಟಿದ್ದಾರೆ. ಇದು ಬೇರೆ ಕಡೆಯಲ್ಲಿ ಇದೆ. ಅದನ್ನಾದರೂ ಮಾಡಿ. ಮಾನ್ಯ ಶ್ರೀ ರಾಚಯ್ಯನವರು ವಿದ್ಯಾಮಂತ್ರಿಗಳಾಗಿದ್ದಾಗ ಇಂಥಾದ್ದನ್ನು ಸಾಧನೆ ಮಾಡಿದ್ದಾರೆ ಅಂತ ಹೇಳುವುದಕ್ಕೆ ಮತ್ತು ಅದು ಚಿರಸ್ಥಾಯಿಯಾಗಿ ಉಳಿಯುವುದಕ್ಕೆ ಏನು ಕೆಲಸ ಮಾಡಬೇಕೋ ಅದನ್ನು ಮಾಡಿ. ಅಂಥಾ ಕೆಲಸ ಮಾಡಿದರೆ ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಅಂಥಾ ಕೆಲಸ ಮಾಡದೇ ಬರೀ ಅಂಕಿ ಸಂಖ್ಯೆಗಳನ್ನು ಕೊಟ್ಟು ಇಷ್ಟು ಕಾಲೇಜುಗಳು ಆಯಿತು. ಇಷ್ಟು ವಿದ್ಯಾರ್ಥಿಗಳು ಜಾಸ್ತಿಯಾಯಿತು. ಇಷ್ಟು ಶಾಲೆಗಳು ಜಾಸ್ತಿಯಾಯಿತು ಅಂತ ಹೇಳಿದರೆ ಸಾಲದು. ಇದರ ಜೊತೆಗೆ ಈ ವಿದ್ಯಾಭ್ಯಾಸದ ಒಂದು ಕ್ವಾಲಿಟಿ ಆಫ್ ಎಜುಕೇಷನ್ ಕೂಡ ಇಂಪ್ರೂವ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ರೆಕಗ್ನಿಷನ್, ಅಫಿಲಿಯೇಷನ್ ಮತ್ತು ಟೀಚರ್ಸ್ ಅಪ್ರೂವಲ್ ವಿಷಯದಲ್ಲಿ ಕರೆಪ್ಷನ್ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ಈ ಕೆಲಸವನ್ನು ಕೆಳಮಟ್ಟದ ಜನರು ಮಾಡುತ್ತಿದ್ದಾರೆ. ಇದನ್ನು ಸುಧಾರಿಸಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI J. A. FERNANDEZ (Nominated).—Mr. Speaker Sir, permit me to speak in English. I am studying Kannada and I hope, within a short time I will be able to speak in Kannada.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ಕನ್ನಡವನ್ನು ಕಲಿಯದೇ ಇದ್ದಂಥಾವರು ಇಲ್ಲಿಗೆ ಬಂದಿದ್ದಾರಲ್ಲಾ, ಇಂಥಾ ಸತದೃಷ್ಟ ಸರ್ಕಾರಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ಇದೇ ಪಕ್ಕದ ತಮಿಳ್‌ನಾಡಿನಲ್ಲಿ ನೋಡಿ. ಇನ್ನೂ ಅಕ್ಕಪಕ್ಕದ ರಾಜ್ಯದಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈ ಕನ್ನಡವನ್ನು ಗೊತ್ತಿಲ್ಲದೇ ಇದ್ದಂಥಾ ಶಾಸಕರು ಅವರು ಊರಿನಲ್ಲಿ ಆ ಕನ್ನಡ ಜನಕ್ಕೆ ಯಾವರೀತಿಯಾಗಿ ಕನ್ನಡದಲ್ಲಿ ಮಾತನಾಡುತ್ತಾರೋ ,ಅವರು ಯಾವ ರೀತಿ ತಿಳಿದುಕೊಳ್ಳುತ್ತಾರೋ ಇದರಿಂದಲೇ ನಮಗೆ ಗೊತ್ತಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥಾ ಕನ್ನಡಿಗರ ಬಗ್ಗೆ ಇವರು ಏನು ತಿಳಿದುಕೊಳ್ಳಬಲ್ಲರು. ಅವರಿಗೆ ಕನ್ನಡ ಬಾರದೇ ಹೋದರೆ ಆ ಹಳ್ಳಿಯ ಬೋರೇಗೌಡನ ಹತ್ತಿರವಾದರೂ ಹೋಗಿ ಕಲಿತುಕೊಂಡು ಬರಲಿ ಅಥವಾ ಸಾಹುಕಾರ

ರೈತನ ಹತ್ತಿರವಾದರೂ ಹೋಗಿ ಕಲಿತುಕೊಂಡು ಬರಲಿ. ಕನ್ನಡ ಗೊತ್ತಿಲ್ಲದೇ ಇರುವ ಶಾಸಕರಿಗೆ ಗ್ರಾಮೀಣ ಜನರಲ್ಲಿ ಯಾವ ರೀತಿಯಾಗಿ ಕಳಕಳಿ ಇದೆ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ನೀವು ಹೀಗೆ ಮಾತನಾಡುತ್ತೀರಿ ಅನ್ನುವುದು ನನಗೆ ಮೊದಲೇ ಗೊತ್ತು. ಆದ್ದರಿಂದ ಅವರನ್ನು ಇಂಗ್ಲೀಷ್‌ನಲ್ಲಿ ಮಾತನಾಡಲಿ ಎಂದು ಹೇಳಿದ್ದು.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ಮಾನ್ಯ ಸದಸ್ಯರು ಬರುವ ವರ್ಷವಾದರೂ ಕೂಡ ಕನ್ನಡವನ್ನು ಕಲಿತುಕೊಂಡು ಬರಲಿ. ಹೋಗಲಿ, ಈ ವರ್ಷ ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಉಪಾಧ್ಯಕ್ಷರು.—ತಾವು ಬರುವ ವರ್ಷವಾದರೂ ಕೂಡ ಕನ್ನಡವನ್ನು ಕಲಿತುಕೊಂಡು ಬನ್ನಿ. ಈವಾಗ ಇಂಗ್ಲೀಷ್‌ನಲ್ಲೇ ತಮ್ಮ ಭಾಷಣವನ್ನು ಮಾಡಿ.

SRI J. A. FERNANDEZ (Nominated).—May I continue Sir ?

MR. DEPUTY SPEAKER.—Yes please.

SRI J. A. FERNANDEZ.—Sir. yesterday the discussion on the subject of Education brought out the theory of nationalisation. We are all aware that many of the nationalised Institutions have not been successful as they were originally made out to be. Evidently they are lacking in various fields. Coming to the Christian Educational Institutions especially those which are considered Anglo-Indian Schools in the City and in the State, I am sure, we will have to accept that the medium of education. apart from English. also inculcates in the students a personality growth. Education is not merely confined to the physical and mental development but also to moral values and the overall development of personality. Therefore, I do believe that these are schools having stood the test of the time should not be, in any way included in a scheme of Nationalisation. As a matter of fact. I would rather suggest that instead of nationalisation, the Government should strengthen its existing schools wherever they are situated be they in urban or rural areas. I think our Anglo Indian schools have now become to be known as isolated islands of glory and splendour. They have a tremendous tradition. They have got dedicated staff. It is not possible, I am sure you will also agree with me to nationalise dedication or initiative or morality or discipline. These are factors which must be considered before any decision on this subject is taken. There should be Nationalisation through positive action rather than by Government decree. If the Government schools can be so strengthened in the teaching facilities. aids and other inputs. they can serve as an opportuhity to shift the emphasis away from our schools and thereby there will be less opportunity for corruption. Another point that comes to my mind to-day is the fact that there is the possibility of corruption at the low levels of the Government structure on the educational side. Sir, before granting recognition to a school, the local Educational Officer irrespective of his rank, has the right to determine the issue and submit his report. I think, a proper questionnaire should be sent out by the authorities of the Department of Education and this questionnaire should be filled up in the presence of the Principal of the school. If this is done. whatever deficiencies are there, they could be sorted out at that level itself rather than keeping such issues pending. Many of the schools who have applied for recognition do not know even after two years whether they will be

granted recognition or not. So far as English Medium Schools and Anglo-Indian Community Schools are concerned, they are sufficiently protected under Article 30 of the Constitution.

Then Sir, I am not very sure. the present syllabus of the S.S.L.C. will suit the rural areas. There have been a lot of failures in the last S.S.L.C. Examination. Therefore, to introduce the three-language formula at village level is not an advisable course of action,

It will be far beyond the capacity of t' e rural folk to abrosb the present S.S.L.C. syllabus. There are many qualified teachers available in the city. but for them to be able to give their best in the rural areas, the structure should be made convenient for them. The Government should spend much more money on the rural education than they are at present. so that the teachers can be weaned away from the city and posted in the rural areas in order to improve the educational standards in rural areas. This is the only way for inter-change of ideas. and a better pattern of education could emerge.

There is another factor. which I don't know whether I could mention here or not. We have barefoot doctors. barefoot lawyers and so why not barefoot teachers ? I represent the Anglo-Indian community. I must confess that some of our community people who were teachers hitherto have been losing their jobs because of the qualifications currently prescribed for the teaching staff. For certain historic or other reasons many of our young ladies and boys are unable to complete their S.S.L.C. because of the language problem. But there is no excuse for this. Through I represent the Anglo-Indian Community, I am trying to learn Kannada. Kannada is a beautiful language. But there are no proper facilities even for us to study Kannada in Karnataka. I have been trying to study this language, As pointed out by the Hon'ble Member Sri Narayan Kumar, I will speak in Kannada. But to learn Kannada, I can assure you that I am having tremendous difficulties. But as I have already stated, there are no proper facilities for us to study Kannada in Karnataka and this is also one of the main reasons why the members of our Community are unable to complete the S.S.L.C. course. Nevertheless, where English has to be taught at the pre-primary level or at the primary level. The Government should give special consideration to the Anlgo-Indian community whose young ladies are capable of teaching English in schools without the minimum prescribed qualifications.

I would like to mention another paradoxical point here. Though our schools in Karnataka were originally called as Anglo-Indian schools. they are run mainly by the Churches. There is no doubt that the management is excellent and the teaching is first class. But unfortunately, thec ommunity which I represent, does not have the wherewithals to be able to afford such education. Since our mother-tongue is English. we need education in English. Till such time we are able to absorb the local language more effectively. I would make an earnest appeal to Sri Rachaiah, the Hon'ble Minister for Education to consider the question of subsidising the education of Anglo-Indian

children in Anglo-Indian Schools. or convents or in christian institutions. as is being done in Tamil Nadu. I would make a special appeal in this behalf and hope that the Government will be kind enough to respond. Thank you.

* ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಹಲವಾರು ಮಂದಿ ವಿದ್ಯಾಭ್ಯಾಸದ ಬೇಡಿಕೆಯನ್ನು ಕುರಿತು ಹಲವಾರು ವಿಚಾರಗಳನ್ನು, ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾನು ಇಲ್ಲಿ ನನಗೆ ಕೊಟ್ಟ ಸಮಯದಲ್ಲಿ ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾವ ಸರ್ಕಾರ ವಿದ್ಯಾಭ್ಯಾಸದ ಬಗ್ಗೆ ಅಸಡ್ಡೆ ತೋರಿಸುತ್ತದಯೋ ಆ ಸರ್ಕಾರ ಸಮಾಜದ ಪ್ರಗತಿಯನ್ನು ಖಂಡಿತ ವಾಗಿಯೂ ಸಾಧಿಸರಿಲಿಕ್ಕೆ ಸಾಧ್ಯವಿಲ್ಲ. ವಿದ್ಯಾ ಇಲಾಖೆಯ ಬೇಡಿಕೆಯನ್ನು ನೋಡಿದಾಗ ಇದೊಂದು ದೊಡ್ಡ ಸಾಗರೋಪಾದಿಯಲ್ಲಿದೆಯೆಂದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಷ್ಟು ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ತಾಂತ್ರಿಕ ಸಂಸ್ಥೆಗಳು, ಇವೆಲ್ಲವನ್ನೂ ನೋಡಿದಾಗ ಇದಕ್ಕೆ ಮೀಸಲಾಗಿಟ್ಟಂತಹ ಹಣ ಬಹಳ ಕಡಿಮೆ ಎಂದೆನಿಸುತ್ತದೆ. ಅಂದರೆ ಈ ಸರ್ಕಾರ ವಿದ್ಯಾಭ್ಯಾಸದ ಪ್ರಾಮುಖ್ಯತೆ ಯನ್ನು ಕಂಡ ಹಾಗೆ ಕಾಣುವುದಿಲ್ಲ. ವರದಿಯ ಕಂಟೆಂಟ್ಸನ್ನು ನೋಡಿದಾಗ 18 ಕಂಟೆಂಟ್ಸ್‌ಗಳು ಇವೆ. ಆದರೆ ಇಲ್ಲಿ ಎಲ್ಲಾ ಇದೆ, ಎಲ್ಲಾ ಇಲ್ಲ ಎನ್ನುವ ಹಾಗೆ ಇದೆ. ನಮ್ಮ ವಿದ್ಯಾಭ್ಯಾಸಕ್ಕೆ ಒಂದು ಗುರಿ ಬೇಕು. ಈ ಗುರಿಯನ್ನು ಸಾಧಿಸಲಿಕ್ಕೆ ವರ್ಷೇ ವರ್ಷೇ ಮಾನಿಟರ್ ಮಾಡುತ್ತಾ ಇರಬೇಕು. ಇಲ್ಲಿ ನಾವು ಯಾವ ಒಂದು ಉದ್ದೇಶವನ್ನಿಟ್ಟುಕೊಂಡು ಬದಲಾವಣೆಯನ್ನು ತರಬೇಕೆಂದಿದ್ದೇವೆಯೋ ಆ ಒಂದು ದಿಕ್ಕಿನಲ್ಲಿ ನಾವು ಹೋಗು ತ್ತಿಲ್ಲವೆಂದು ಕಾಣುತ್ತದೆ. ಇಲ್ಲಿ ಮಾತನಾಡಿದ ಹಿರಿಯ ಸದಸ್ಯರು ಇದನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಈ ವಿದ್ಯಾಭ್ಯಾಸವನ್ನು ನಾವು ಮೂರು ರೀತಿಯಲ್ಲಿ ಡಿಫೈನ್ ಮಾಡಬಹುದಾಗಿದೆ. Education is preparation for life. ಸುಮಾರು 3–4 ಕೋಟಿ ಜನ ವಿದ್ಯಾವಂತರು ಎಂ.ಎ. ಮತ್ತು ಎಂ.ಎಸ್‌ಸಿ. ಕಲಿತವರು ಜೀವನ ಮಾಡಲಿಕ್ಕೆ ಸಾಧ್ಯವಿಲ್ಲವಾಗಿದೆ. ಅವರು ಜೀವನ ಮಾಡುವುದಕ್ಕೆ ಪೇಚಾಡುತ್ತಿದ್ದಾರೆ. ಇದನ್ನು ನೋಡಿದಾಗ ಈ ವಿದ್ಯಾಭ್ಯಾಸದ ಕ್ರಮದಿಂದ ನಾವು ಏನನ್ನು ಸಾಧನೆ ಮಾಡಿದ ಹಾಗಾಯಿತು ? 'Education is expression' ಎಂದು ಮಾನ್ಯ ಸದಸ್ಯರಾದಂತಹ ರಂಗನಾಥ್ ಅವರು ಹೇಳಿದರು, ಅಂದರೆ ತನ್ನ ಭಾವನೆಗಳನ್ನು, ಅಭಿಪ್ರಾಯ ಗಳನ್ನು, ಅವಕಾಶಗಳನ್ನು ವ್ಯಕ್ತ ಮಾಡಲಿಕ್ಕೆ ಯಾವ ವಿದ್ಯಾಭ್ಯಾಸ ಸಹಾಯ ಮಾಡುವುದಿಲ್ಲವೋ ಅದು ವಿದ್ಯಾಭ್ಯಾಸವೇ ? ಈ ದೃಷ್ಟಿಯಿಂದ ನಾವು ಪ್ರಾಥಮಿಕ ಶಿಕ್ಷಣದ ಪದ್ಧತಿಯನ್ನು ನೋಡಿದಾಗ ಇಲ್ಲಿ ಎಲ್ಲಾ ಇದೆ, ಎಲ್ಲಾ ಇಲ್ಲ ಎನ್ನುವ ಹಾಗೆ ಇದೆ. ಇದಕ್ಕೊಂದು ಸೂತ್ರ ಬೇಕು. ಆ ಒಂದು ಸೂತ್ರ ಇಲ್ಲಿ ಕಾಣುತ್ತಿಲ್ಲ. ಪ್ರೀ-ಪ್ರೈಮರಿ ಎಜುಕೇಷನ್‌ನಿಂದ ಪೋಸ್ಟ್ ಗ್ರಾಜುಯೇಟ್ಸ್ ಶಿಕ್ಷಣದವರೆಗೆ ಒಂದಕ್ಕೊಂದಕ್ಕೆ ಸಂಬಂಧ ಇರ ಬೇಕು. ನಮ್ಮ ದೇಶದ ಗುರಿ ಏನು ಇದೆ ಅದಕ್ಕೂ ಇಲ್ಲಿ ಸಂಬಂಧ ಇರಬೇಕು. ಈ ದೃಷ್ಟಿಯಲ್ಲಿ ಜನತಾಪಕ್ಷ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಇನ್ನೂ ಕೆಲವು ಅಂಶಗಳನ್ನು ಉಲ್ಲೇಖ ಮಾಡಲಿಕ್ಕೆ ಬಯಸುತ್ತೇನೆ. ತಮ್ಮ ವರದಿಯ ಪುಟ 14 ರಲ್ಲಿರುವ ಒಂದು ವಾಕ್ಯವನ್ನು ನಾನು ಇಲ್ಲಿ ಓದುತ್ತೇನೆ. ಇದು ಬಹಳ ಅರ್ಥಗರ್ಭಿತವಾಗಿದೆ. "9 ರಿಂದ 14 ವರ್ಷ ವಯಸ್ಸುಳ್ಳ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಶಾಲೆಗೆ ಹೋಗದೇ ಇರುವುದರಿಂದ" ಎಂದು ಇದೆ. ಇದರ ಅರ್ಥ ಏನು ? 9 ರಿಂದ 14ರ ರವರೆಗೆ ಈ ಆರು ವರ್ಷಗಳ ಅವಧಿಯಲ್ಲಿ ಇರುವಂಥ ಮಕ್ಕಳು ಶಾಲೆಗೆ ಬರುತ್ತಿಲ್ಲ ಅಂದರೆ ಆ ಮಕ್ಕಳು ಎಲ್ಲಿ ದುಡಿಯುತ್ತಿದ್ದಾರೆ. ? ಈ ಮಕ್ಕಳನ್ನು ದುಡಿಸುವ ಬಗ್ಗೆ ನಾನೊಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಿದ್ದೇನೆ. ಅವರಿಂದ ಇನ್ನೂ ನಮಗೆ ಸರಿಯಾದ ಉತ್ತರ ದೊರೆತಿಲ್ಲ. 9 ರಿಂದ 14ರ ವಯೋಮಿತಿಯುಳ್ಳ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಶಾಲೆಗೆ ಹೋಗದೆ ಇರುವುದರಿಂದ ಇದರ ಬಗ್ಗೆ ನಮಗೆ ಕಾಳಜಿ ಇಲ್ಲ ಎಂದು ನಾವು ತಿಳಿದುಕೊಳ್ಳಬಹುದೇ ? ಇವತ್ತು ಇಂಜಿನಿಯರಿಂಗ್ ಕಾಲೇಜು ಪ್ರವೇಶಕ್ಕೆ ಒಂದೂವರೆ ಲಕ್ಷ ರೂಪಾಯಿಗಳ ಡೊನೇಷನ್ ಕೊಡಬೇಕು. ಮೆಡಿಕಲ್ ಸೀಟು ಪಡೆಯುವುದಕ್ಕೆ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡಬೇಕು. ಅಲ್ಲದೆ ಇವರಿಗೆ ಸರ್ಕಾರದವರು ಏಡ್ ಕೂಡ ಕೊಡಬೇಕು ಎಂದು ಯೋಚಿಸು ತ್ತಿರುವಾಗ ಈ 9 ರಿಂದ 14 ವರ್ಷ ವಯಸ್ಸಿನ ಮಕ್ಕಳು ಏನು ಪಾಪ ಮಾಡಿದ್ದರು ಎಂದು ನಾನು ಕೇಳುತ್ತೇನೆ. ಈ ಮಕ್ಕಳ ಏಳಿಗೆಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ವಿದ್ಯಾಭ್ಯಾಸದ ಕ್ರಮವನ್ನು ರೂಪಿಸ ಬೇಕು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ವಿದ್ಯಾಭ್ಯಾಸವನ್ನು ಕೊಡುವುದು ಏಕೆ ? ವಿದ್ಯೆಯನ್ನು ಕಲಿತವರು ಜನಸಾಮಾನ್ಯರ ಸಂಪರ್ಕಕ್ಕೆ ಬರಲಿ ಎಂದು. ಆದರೆ ನಮ್ಮ ವಿದ್ಯಾಭ್ಯಾಸದಿಂದ ಏನು ಮಾಡುತ್ತಿದ್ದೇ ವೆಂದರೆ ಅವರನ್ನು ಜನಸಾಮಾನ್ಯರಿಂದ ದೂರ ಮಾಡುತ್ತಿದ್ದೇವೆ. ಕೂಲಿಗಾರರಿಂದ, ಕೃಷಿ ಕಾರ್ಮಿಕರಿಂದ,

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರೂ ಟಿಪ್ಪಣಿ ಅಥವಾ ಭಾಷಣವನ್ನೂ ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೈತರಿಂದ ದೂರ ಮಾಡುತ್ತಿದ್ದೇವೆ. ಶಾಲೆಯಲ್ಲಿ ಕಲಿತವರು ಬಿ.ಎ.;, ಬಿ.ಎಸ್‌ಸಿ;, ಪಾಸ್ ಆದವರು ರೈತರ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಅವನ ಭುಜಕ್ಕೆ ಭುಜ ಕೊಟ್ಟು ಕೆಲಸ ಮಾಡಲು ತಯಾರಿಲ್ಲ. ಈ ಕೆಲಸ ಮಾಡುವವರನ್ನು ನಾವುಗಳು ಗೌರವದಿಂದ ಕಾಣದೇ ಇರುವುದೇ ಇದಕ್ಕೆ ಕಾರಣವಾಗಿದೆ. ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ, ಜನಸಾಮಾನ್ಯರ ಜೀವನಕ್ಕೆ ಸಂಬಂಧವಿಲ್ಲದ ವಿದ್ಯೆಯನ್ನು ನಾವು ಕೊಡುತ್ತಿದ್ದೇವೆಂದು ನೊಂದು ನಾನು ಹೇಳಬೇಕಾಗಿದೆ. ಇದಕ್ಕೆ ಒಬ್ಬರು ವಿದ್ಯಾ ಮಂತ್ರಿಗಳಿದ್ದರೆ ಸಾಲದು. ಮೂರು ನಾಲ್ಕು ಮಂದಿ ಈ ಶಾಖೆಗೆ ಬೇಕು. ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಡೈರೆಕ್ಟರ್ ಇರಬಹುದು. ಅವರು ಬರೀ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಇರುತ್ತಾರೆ. ಅವರಿಗೆ ವಿದ್ಯೆಯ ಬಗ್ಗೆ ಬಹಳ ಅನುಭವ ಬೇಕು. ಇವರು ಟ್ರಾನ್ಸ್‌ಫರ್ ಬಗ್ಗೆ ಯೋಚನೆ ಮಾಡುವುದಲ್ಲ. ನಾನೂ ಹೋಗಿ ಕೇಳಿದ್ದೇನೆ. ಇಲ್ಲ ಎಂದಲ್ಲ. ಟ್ರಾನ್ಸ್‌ಫರ್ ಮಾಡುವುದನು ಎಲ್ಲಾ ವಿಕೇಂದ್ರೀಕರಣ ಮಾಡಬೇಕು. ಅದನ್ನು ಡಿ.ಡಿ.ಪಿ.ಐ. ಮಾಡಲಿ ಅಥವಾ ಒಂದು ಜಿಲ್ಲೆಯಲ್ಲಿ ಒಬ್ಬ ಅಧಿಕಾರಿ ಮಾಡಲಿ. ಟ್ರಾನ್ಸ್‌ಫರ್ಸನ್ನು ಮಂತ್ರಿಗಳು, ಡೈರೆಕ್ಟರ್ಸ್ ಮಾಡಬೇಕು ಎಂದು ಏನೂ ಇಲ್ಲ. ಇವರು ವಿದ್ಯೆಯ ಬಗ್ಗೆ ಹೆಚ್ಚು ಗಮನ ಕೊಡಬೇಕು. ಇವತ್ತು ಮ್ಯಾನೇಜ್‌ಮೆಂಟ್ ಹೇಗಿದೆಯೆಂದರೆ, ಇಡೀ ಲೋಕದಲ್ಲೆಲ್ಲಾ 5 ಸಾವಿರ ಬ್ರಾಂಚಸ್ ಇದ್ದರೂ ಕೂಡ ಅಮೆರಿಕಾದಲ್ಲಿ ಒಂದು ಕಡೆ ಕೂತು 5 ಸಾವಿರ ಬ್ರಾಂಚಸ್‌ನಲ್ಲಿ ವಹಿವಾಟು ಹೇಗೆ ನಡೆಯುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ಇಲ್ಲಿ ಆ ರೀತಿಯಲ್ಲಿ ಮ್ಯಾನೇಜ್‌ಮೆಂಟ್ ಮಾಡಲಿಕ್ಕೆ ಸರ್ಕಾರ ತಯಾರಾಗಬೇಕು. ವಿದ್ಯಾಮಂತ್ರಿಗಳಿಗೆ. ರಾಜ್ಯ ಮಂತ್ರಿಗಳಿಗೆ, ಡೈರೆಕ್ಟರ್ಸ್‌ಗೆ ಎಲ್ಲಾ ವಿದ್ಯೆಯ ಬಗ್ಗೆ ಕಾಳಜಿ ಇರಬೇಕು. ಕಾಳಜಿ ಇರುವವರು ಸೇರಿದರೆ ಮಾತ್ರ ಜೀವನಕ್ಕೂ ವಿದ್ಯೆಗೂ, ಗುರಿಗೂ ವಿದ್ಯೆಗೂ ಸಂಬಂಧ ಬರುತ್ತದೆ. ಇಲ್ಲಿ ಇನ್‌ವಾಲ್ವ್‌ಮೆಂಟ್ ಆಫ್ ದಿ ಟೀಚರ್ಸ್ ಮಾಡುವುದಕ್ಕೆ ಸಾಧ್ಯವಾಗಬೇಕು. ಪ್ರೈಂ ಮಿನಿಸ್ಟರ್ ಬರಲಿ ಚೀಫ್ ಮಿನಿಸ್ಟರ್ ಬರಲಿ, ಇಂಡಸ್ಟ್ರಿಯಲಿಸ್ಟ್ಸ್ ಮೀಟಿಂಗ್ ಕರೆಯುತ್ತಾರೆ. ಛೇಂಬರ್ ಆಫ್ ಕಾಮರ್ಸ್ ಅವರು ಮೀಟಿಂಗ್ ಕರೆಯುತ್ತಾರೆ. ವಿದ್ಯಾಮಂತ್ರಿಗಳು ಆ ರೀತಿ ಎಲ್ಲಾ ಟೀಚರ್ಸ್ ಅಸೋಸಿಯೇಷನ್‌ನವರನ್ನು ಕರೆದು ಅವರ ಅಭಿಪ್ರಾಯಗಳನ್ನು ಕೇಳಿದ್ದು ನಾನು ನೋಡಲಿಲ್ಲ. ವಿದ್ಯಾರ್ಥಿಗಳ ಅಸೋಸಿಯೇಷನ್‌ನವರನ್ನು ಕರೆದು ಅಭಿಪ್ರಾಯಗಳನ್ನು ಕೇಳಿದ್ದು ನಾನು ನೋಡಲಿಲ್ಲ. ಏಕೆಂದರೆ, ಮಾನ್ಯ ರಾಚಯ್ಯನವರು ವಿದ್ಯಾಮಂತ್ರಿಗಳು ಆರ್ಡರ್ ಕೊಡಬಹುದು, ಅಥವಾ ಅಭಿಪ್ರಾಯ ಕೊಡಬಹುದು. ಆ ಒಂದು ಅಭಿಪ್ರಾಯವನ್ನು ಅಲ್ಲಿ ಜಾರಿ ಮಾಡುವವರು ಯಾರು? ಅವರ ಚಿಂತನೆ ಪೆನ್‌ಷನ್ ಮೇಲೆ ಇರುತ್ತದೆ, ರಜೆ ಮೇಲೆ ಇರುತ್ತದೆ. ಅಥವಾ ಸಂಬಳದ ಮೇಲೆ ಇರುತ್ತದೆ. ಅವರಿಗೆ ಹೈದರಾಬಾದ್ ಸಂಬಳ ಸಿಗಬೇಕು, ಮತ್ತು ನಾಲ್ಕನೇ ಒಂದು ಭಾಗ ಮಾತ್ರ ಪೆನ್‌ಷನ್ ಬರುತ್ತದೆ ಎಂದು ಹೇಳುತ್ತಿರುತ್ತಾರೆ. ಈ ಪ್ರಶ್ನೆಗಳು ಅವರ ತಲೆಗೆ ಹೋಗಬಾರದು. ಮಾನ್ಯ ರಂಗನಾಥ್‌ರವರು ಈ ವಿಚಾರವಾಗಿ ಹೇಳಿದರು "ತ್ರೀಆರ್ಸ್‌ಗೆ" ಗಮನ ಕೊಡುತ್ತಾ ಇದ್ದರು ಎಂದು ಹೇಳಿದರು. ಒಂದು ಭಾಷೆ ಖಚಿತವಾಗಿ ಬರಬೇಕು. ಇವತ್ತು ಅದೂ ಇಲ್ಲ, ಒಂದು ಭಾಷೆಯ ವಿಷಯ, ಗಣಿತ, ಸಾಧಾರಣ ವ್ಯವಹಾರ ಜ್ಞಾನ—ಈ ಮೂರರ ಬಗ್ಗೆ ಕಾಳಜಿ ಇಲ್ಲದೇ ಹೋದರೆ ಏನಾಗುತ್ತದೆ? 8 ನೇ ಕ್ಲಾಸಿಗೆ ಬಂದರೂ, 10 ನೇ ಕ್ಲಾಸಿಗೆ ಬಂದರೂ ಒಂದು ಪತ್ರ ಬರೆಯುವುದಕ್ಕೆ ಬರುವುದಿಲ್ಲ., ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಬರುವುದಿಲ್ಲ. ಮಾನ್ಯ ಸ್ನೇಹಿತರು ಸಿಲಬಸ್ ಬಗ್ಗೆ ಹೇಳಿದರು. ಸಿಲಬಸ್ ಬಹಳ ಮುಖ್ಯ. ಸಿಲಬಸ್ ಬಗ್ಗೆ ಕಾಳಜಿ ಇದೆಯೇ? ಸಿಲಬಸ್ ಬಗ್ಗೆ ಅಧ್ಯಾಪಕರ ಅಭಿಪ್ರಾಯಗಳೇನು? ಕಮಿಟಿಗಳ ಅಭಿಪ್ರಾಯ ಬೇರೆ ಇರಬಹುದು. ರಷ್ಯಾ ಚೈನಾ, ಅಥವಾ ಅಮೇರಿಕಾದಿಂದಲೋ ಕಲ್‌ಔಟ್ ಮಾಡಿ ಸಿಲಬಸ್‌ನಲ್ಲಿ ಹಾಕಿದಿರಿ. ಮಾರ್ಡನ್ ಮ್ಯಾಥಮ್ಯಾಟಿಕ್ಸ್, ಮಾಡ್ರನ್ ಸೈನ್ಸ್ 6 ನೇ ಕ್ಲಾಸ್, 7 ನೇ ಕ್ಲಾಸ್‌ನಲ್ಲಿ ಬರುತ್ತಾ ಇದೆ. ನನಗೆ ಎಲ್ಲಾ ಹಳ್ಳಿಗಳಲ್ಲಿ ಮೇಸ್ಟ್ರುಗಳು ಹೇಳುತ್ತಾ ಇದ್ದಾರೆ. ವಿದ್ಯಾರ್ಥಿಗಳೂ ಕೂಡ ಹೇಳುತ್ತಾ ಇದ್ದಾರೆ. ವಿದ್ಯಾರ್ಥಿಗಳು ಏನು ಹೇಳುತ್ತಾ ಇದ್ದಾರೆ ಎಂದರೆ, ನಮ್ಮ ಮೇಸ್ಟ್ರುಗಳಿಗೆ ಆಧುನಿಕ ಲೆಕ್ಕ ಬರುವುದಿಲ್ಲ, ಥಿಯರಿ ಬರುವುದಿಲ್ಲ. ಇವೆಲ್ಲಾ ನಮ್ಮ ಮೇಸ್ಟ್ರುಗಳಿಗೆ ಗೊತ್ತಿಲ್ಲ, ಅವರು ಹಿಂದಿನ ಅರ್ಥಮಿಟಿಕ್‌ನಲ್ಲಿದ್ದಾರೆ ಎಂದು. ಮಾನ್ಯ ರಂಗನಾಥನವರೂ ಕೂಡ ಇದರ ಬಗ್ಗೆ ಹೇಳಿದರು. ಆಧುನಿಕ ವಿಜ್ಞಾನ ಆಧುನಿಕ ಲೆಕ್ಕ, ಗಣಿತ ಅಗತ್ಯವಾದುದೇ, ನನಗೆ ಆಶ್ಚರ್ಯವಾಗುತ್ತದೆ. ದುಡ್ಡೇ ಖರ್ಚು ಮಾಡುವುದಿಲ್ಲ, ಖರ್ಚು ಮಾಡಿದರೆ 50 ಸಾವಿರ ಒಂದು ಲಕ್ಷ, ಎರಡು ಲಕ್ಷ ಖರ್ಚು ಮಾಡುತ್ತಾರೆ. ಅಧ್ಯಾಪಕರಿಗೆ ಟ್ರೈನಿಂಗ್ ಕೊಡದೇ ಹೋದರೆ ರೀಓರಿಯಂಟೇಷನ್ ತರಬೇತಿ ಕೊಡದೇ ಹೋದರ You have no right to change the syllabus. ಸಿಲಬಸ್ ಬದಲು ಮಾಡಿರುವುದರಿಂದ ಮಕ್ಕಳು ಬೀದಿಯಲ್ಲಿ ಹೋಗುವುದು ಮತ್ತು ಡ್ರಾಪ್‌ಔಟ್ಸ್ ಆಗುತ್ತಿರುವುದು. ಆದುದರಿಂದ ಕಾಂಪಿಟೇಟೀವ್ ಎಕ್ಸಾಮಿನೇಷನ್‌ನಲ್ಲಿ ಹಳ್ಳಿಗಾಡಿನ ಮಕ್ಕಳನ್ನು ಕಂಪೇರ್ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಶಾಲೆಗಳ ಸ್ಥಿತಿ. ಆದುದರಿಂದ ಪ್ರೈಮರಿ ಎಜುಕೇಷನ್ ಸರಿಯಾಗಿ ಕೊಡಬೇಕು, ಕೋಲಿಬಿಯೇಟ್ ಎಜುಕೇಷನ್‌ನ್ನು ನೆಗ್ಲೆಟ್ ಮಾಡಿದರೂ ಚಿಂತೆಯಿಲ್ಲ. ಇದರ ಬಗ್ಗೆ ಟೆಕ್ನಿಕಲ್ "ನೋ ಹೌ" ಬೇಕಾದಷ್ಟು ಇದೆ. ಮುಂದಿನ ಪೀಳಿಗೆ ಅಭಿವೃದ್ಧಿಯಾಗಬೇಕಾದರೆ ಪ್ರೈಮರಿ ಎಜುಕೇಷನ್ ಕಡೆ ಹೆಚ್ಚು ಗಮನ ಕೊಡಬೇಕು. ಈ ದಿಶೆಯಲ್ಲಿ ಕೆಲಸ ಮಾಡಿರುವುದು ಬಹಳ ಕಡಿಮೆಯಾಗಿದೆ.

ಇನ್ನು ಸೆಕೆಂಡರಿ ಎಜುಕೇಷನ್ ಸಿಸ್ಟಂ ಬಗ್ಗೆ ಹೇಳುವುದಾದರೆ, ಸೆಕೆಂಡರಿ ಶಾಲೆಗಳಿಗೆ ಬೇಕಾದಷ್ಟು ಲೈಸನ್ಸ್ ಕೊಟ್ಟಿದ್ದೀರಿ. ಆದರೆ ಅದಕ್ಕೆ ಲೈಬ್ರರಿ ಇದೆಯೇ, ಕ್ರೀಡಾಂಗಣ ಇದೆಯೇ, ಒಂದೊಂದು ಸಬ್ಜೆಕ್ಟ್ ಕಲಿಸಲಿಕ್ಕೆ ಸಂಬಂಧಪಟ್ಟ ಮೇಸ್ಟರುಗಳು ಇದ್ದಾರೆಯೇ ? ಈ ಒಂದು ಕ್ರೈಟೀರಿಯ ತೆಗೆದುಕೊಳ್ಳದೇ ಇರುವುದರಿಂದ ಇದೂ ಕೂಡ ಹದಗೆಟ್ಟಿದೆ. ಕೆಲವು ಕಡೆ ಶಾಲೆಗಳು ವಿಪರೀತ ಇವೆ; ಇನ್ನು ಕೆಲವು ಕಡೆ ಶಾಲೆಗಳೇ ಇಲ್ಲ. ಈ ಸೆಕೆಂಡರಿ ಎಜುಕೇಷನ್ ಶಾಲೆಗಳಲ್ಲಿ ಎಕ್ವಿಪ್‌ಮೆಂಟ್ಸ್ ಬೇಕು, ಸಬ್ಜೆಕ್ಟ್ ಟೀಚರ್ಸ್ ಬೇಕು, ಕ್ರಾಫ್ಟ್ ಕಲಿಸುವಂಥ ಅವಕಾಶ ಇರಬೇಕು. ಏಕೆಂದರೆ, ಸೆಕೆಂಡರಿ ನಂತರ ಕಾಲೇಜಿಗೆ ಹೋಗಬೇಕು ಎಂದು ಹೇಳುವುದಿಲ್ಲ. ಇವತ್ತು 37½ ಪರ್ಸೆಂಟ್ ಕಾಲೇಜಿಗೆ ಹೋಗುತ್ತಾರೆ, ಅದು ಬೇಡ, 20 ಪರ್ಸೆಂಟ್ ಬೇಡ, ಬರೀ 15 ಪರ್ಸೆಂಟ್ ಮಾತ್ರ ಓದಿಸಿ. It must be borne by the people. The people must be in a position to bear these expenses. ಅದಿಲ್ಲದೆ "ಮುಂಡಾಸು ಮೂವತ್ತು ಮೊಳ" ದೊಡ್ಡದು ಮಾಡಿಕೊಂಡರೆ ಏನೂ ಪ್ರಯೋಜನವಿಲ್ಲ. ಇವತ್ತು ಯಾವುದು ದೇಶದ ಬೆಳವಣಿಗೆಯನ್ನು ತಡೆಗಟ್ಟಿದೆ ಎನ್ನುವುದನ್ನು ನೋಡಬೇಕು. ಇವೊತ್ತಿನ ದಿವಸ 10–15 ಪರ್ಸೆಂಟ್ ಕಾಲೇಜಿಗೆ ಹೋದರೆ ಸಾಕು. ಪೋಸ್ಟ್ ಆಫೀಸಿನಲ್ಲಿ ಸ್ಟಾಂಪ್ ಒತ್ತುವುದಕ್ಕೆ ಬಿ.ಎ., ಬಿ.ಎಸ್‌ಸಿ. ಏಕೆ ? Is it not a burden on the Exchequer ? ಇವತ್ತು ಎಷ್ಟು ಜನ ಬಿ.ಎ., ಬಿ.ಎಸ್‌ಸಿ., ಬಿ.ಕಾಂ ಮಾಡುತ್ತಾರೆ ? ನಮ್ಮಲ್ಲಿ ಕಂಪ್ಯೂಟರ್ ಸಿಸ್ಟಂ ಇದೆ. ಎಕ್ಸಾಮಿನೇಷನ್‌ಗೆ ಕಂಪ್ಯೂಟರನ್ನು ಹಾಕಿದ್ದಾರೆ. ಮೇಸ್ಟರುಗಳಿಗೆ ಸ್ವಲ್ಪ ಕಡಿಮೆ ಕೆಲಸ ಕೊಡೋಣ ಎಂದು ಕಂಪ್ಯೂಟರನ್ನು ಹಾಕಿದ್ದಾರೆ. ಇದರ ಬಗ್ಗೆ ಅವರಿಗೆ ಸರಿಯಾದ ಮಾರ್ಗದರ್ಶನ ಕೊಡಬೇಕು. ಇನ್ನೊಂದು ವಿಚಾರ ಏನೆಂದರೆ, ಒಕೇಷನಲ್ ಕೋರ್ಸಸ್. ಇದು ಬಹಳ ಸಂತೋಷದ ವಿಚಾರ. 7–8 ವರ್ಷಗಳ ಹಿಂದೆ ಇದು ಬಹಳ ಕಡಿಮೆ ಇತ್ತು. ಈಗ ಇದು ಹೆಚ್ಚಾಗಿ 174 ಒಕೇಷನಲ್ ಕೋರ್ಸಸ್ ಇವೆ. ನಮ್ಮ 19 ಜಿಲ್ಲೆಗಳಲ್ಲಿ ಏನು ಇದನ್ನು ಪ್ರಾರಂಭ ಮಾಡಿದ್ದಾರೆ., ಇದನ್ನು ಸಂಪೂರ್ಣವಾಗಿ ನಾನು ಸ್ವಾಗತಿಸುತ್ತೇನೆ. ನಾನು ಹೇಳುವುದೇನೆಂದರೆ, ಈ 174 ಕೋರ್ಸಸ್ ಸಾಲದು. ಯಾರಾದರೂ ಅಮೆರಿಕಾಕ್ಕೆ ಹೋದರೆ ನೋಡಿಕೊಂಡು ಬನ್ನಿ. ಅಲ್ಲಿ ಕುಕ್ಕಿಂಗಿಗೂ ಒಂದು ಕೋರ್ಸ್ ಇದೆ. ನಮ್ಮಲ್ಲಿ ವಿದ್ಯಾಭ್ಯಾಸ ಮಾಡಿದವ ಪೆನ್ ಹಿಡಿದು ಬರೆಯಬೇಕು. ನಮ್ಮಲ್ಲಿ ಬಿ.ಇ. ಆದವರು ಇಂಜಿನಿಯರ್ ಆಗಿರುತ್ತಾರೆ, ಟೆಕ್ನಿಕಲ್, ಮೆಕ್ಯಾನಿಕಲ್ ಎಲ್ಲಾ ಮಾಡಿಕೊಂಡಿರುತ್ತಾರೆ. ಈ ಇಂಜಿನಿಯರ್ಸ್ ಅವರು ಕೆಲಸ ಮಾಡಿಸುತ್ತಾರಲ್ಲದೆ ಅವರು ಮಾಡಲಿಕ್ಕೆ ಹೋಗುವುದಿಲ್ಲ; ಅದಕ್ಕೋಸ್ಕರವಾಗಿಯೇ ನಾವು ಹಿಂದೆ ಬಿದ್ದಿದ್ದೇವೆ. ಆದ್ದರಿಂದ ಈ 174 ಕೋರ್ಸಸ್ ಏನಿವೆ, ಇಷ್ಟು ಸಾಕಾಗುವುದಿಲ್ಲ, ಸಾಧಾರಣ 800–1000 ಒಕೇಷನಲ್ ಕೋರ್ಸಸ್ ನಮ್ಮಲ್ಲಿ ಬೇಕು. ಈ ರೀತಿ ಬೆಳೆದರೆ ಯಾರಿಗೆ ಬೇಡ ? ರೈತರೂ ಕೂಡ ಬೇಡ ಎಂದು ಹೇಳುವುದಿಲ್ಲ. ಇವೆಲ್ಲ ಬಿಜಿ ಜಾಬ್‌ಗಳು. ಅವನ್ನು ಸರ್ಕಾರಕ್ಕೆ ಅವಲಂಬಿತನಾಗುವುದಿಲ್ಲ, ಸರ್ಕಾರಕ್ಕೆ ಅವಲಂಬಿತನಾದರೆ ಎಫಿಷಿಯನ್ಸಿ ಕಡಿಮೆಯಾಗುತ್ತದೆ. ಎಫಿಷಿಯನ್ಸಿ ಬರಬೇಕು ಅಂದರೆ ಒಕೇಷನಲ್ ಕೋರ್ಸಸ್ ಜಾಸ್ತಿಯಾಗಬೇಕು, ತಮ್ಮ ಕಾಲ ಮೇಲೆ ತಾವು ನಿಲ್ಲುವಹಾಗೆ ಆಗಬೇಕು. ನಮ್ಮಕಡೆ ಕೆಲವರಿಗೆ ಬ್ಯಾಂಕಿನಿಂದ ಸಾಲ ಕೊಡುತ್ತಾರೆ. ಆದನ್ನು ಇಂತಹವರಿಗೆ ಕೊಡಬೇಕು.

ಒಕೇಷನಲ್ ಟ್ರೈನಿಂಗ್ ಆಗಿ ಬಂದಂಥ ಹುಡುಗರಿಗೆ ಬ್ಯಾಂಕಿನಲ್ಲಿ ಸಾಲ ಸಿಗುತ್ತಿಲ್ಲ. ನಮಗೆ ಸಾಲ ಕೊಡಿಸಿ ಎಂದು ಎಷ್ಟೋ ಜನ ಹುಡುಗರು ನನ್ನ ಹತ್ತಿರ ಬಂದಿದ್ದರು. ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಆಲೋಚನೆ ಮಾಡಿ ಅಂಥ ಹುಡುಗರಿಗೂ ಸುಲಭವಾಗಿ ಬ್ಯಾಂಕ್‌ನಲ್ಲಿ ಸಾಲ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆರ್ಟ್ ಬಗ್ಗೆ ಹೇಳುವುದಾದರೆ, ಸರ್ಕಾರೀ ಕ್ಷೇತ್ರದಲ್ಲಿ ಒಂದೇ ಆರ್ಟ್ಸ್ ಸ್ಕೂಲ್ ಇದೆ. ಆದರೆ ಪ್ರೈವೇಟ್‌ನಲ್ಲಿ 19 ಸ್ಕೂಲ್‌ಗಳು ಇವೆ. ಆದುದರಿಂದ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಆರ್ಟ್ ಸ್ಕೂಲ್‌ನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಚಿತ್ರಕಲೆ, ಶಿಲ್ಪಕಲೆ ಮುಂತಾದ ಕರಕುಶಲದ ಕಡೆಗೆ ಗಮನ ಕೊಡದಿದ್ದರೆ ಮುಂದೆ ಜೀವನ ಮಾಡುವುದಕ್ಕೇ ಬಹಳ ಕಷ್ಟವಾದೀತು. ಆದುದರಿಂದ ಇದಕ್ಕಾಗಿ ಹೆಚ್ಚಿನ ಹಣವನ್ನು ಖರ್ಚುಮಾಡಿ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಶಾಲೆಯನ್ನು ತೆರೆಯಬೇಕೆಂದು ಒತ್ತಾಯ ಮಾಡಬಯಸುತ್ತೇನೆ. ಇನ್ನು ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ಬಗ್ಗೆ ಜಿಲ್ಲಾ ಪರಿಷತ್ ಬಿಲ್ ಬಂದಾಗ ಅದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕನ್ನಡವನ್ನು ಎಲ್ಲಾ ಹಂತಗಳಲ್ಲೂ ಕೂಡಲೇ ಜಾರಿಗೆ ತರುವ ಬಗ್ಗೆ ಶಿಕ್ಷಣ ಮಂತ್ರಿಗಳು ಒಬ್ಬರೇ ಅಲ್ಲ—ಎಲ್ಲಾ ಮಂತ್ರಿಗಳೂ ಸಹ ಗಮನ ಕೊಟ್ಟು ಜಾರಿಗೆ ತರಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆ ಮತ್ತು ಕನ್ನಡ ಸಂಸ್ಕೃತಿ ಮತ್ತು ಯುವಜನ ಇಲಾಖೆಯ ಬೇಡಿಕೆಯ ಮೇಲೆ ಯಾವ ರೀತಿಯಾಗಿ ಸ್ವಾರಸ್ಯಕರವಾಗಿ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾತನಾಡಬೇಕು ಎನ್ನುವುದು ಅರ್ಥವಾಗುತ್ತಿಲ್ಲ. ನಮ್ಮ ಶ್ರೀಮಾನ್ ಫರ್ನಾಂಡೀಸ್‌ರವರು ಈಗಾಗಲೇ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ರಾಮನಗರದ ಒಬ್ಬ ಬೋರೇಗೌಡರವರು ಇಲ್ಲಿಗೆ ಬಂದಿದ್ದರು. ಅವರು ನನ್ನ ಕೇಳಿದರು,–ಇವರು ಯಾರು, ಯಾವ ಕ್ಷೇತ್ರದಿಂದ ಆರಿಸಿ ಶಾಸಕರಾಗಿ ಬಂದಿದ್ದಾರೆ ಎಂದು. ಈ ಜನತಾ ಸರ್ಕಾರಕ್ಕೆ ಕನ್ನಡದ ಬಗ್ಗೆ ಬಹಳ ಕಳಕಳಿ ಇದೆ, ಗೋಕಾಕ್ ವರದಿಯನ್ನು ಪೂರ್ಣ ಜಾರಿಗೆ ತರುತ್ತಾರೆ ಎನ್ನತಕ್ಕ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೆ. ಅರ್ಧಭಾಗ ಮಾತ್ರ ನನಗೆ ಇವರ ಮೇಲೆ ನಂಬಿಕೆ ಇತ್ತು, ಅದೂ ಕೂಡ ಈಗ ಬಿದ್ದುಹೋದ ಹಾಗಾಗಿದೆ. ಏತಕ್ಕೆಂದರೆ ಇವತ್ತು ಇವರು ಶ್ರೀ ಫರ್ನಾಂಡೀಸ್‌ರವರನ್ನು ನೇಮಕ ಮಾಡದಿದ್ದರೆ ಕೊಳ್ಳೆ ಏನು ಹೋಗುತ್ತಿತ್ತು? ಯಾವ ಭಾಗ್ಯಕ್ಕೋಸ್ಕರವಾಗಿ ಇವರನ್ನು ನೇಮಕ ಮಾಡಲಾಯಿತು? ಇವತ್ತು ಅವರು ಏನು ಮಾತನಾಡಿದರು ಎಂಬುದು ನಮಗೆ ಗೊತ್ತಾಗಲಿಲ್ಲ, ರಾಮನಗರದಿಂದ ಬಂದಿದ್ದ ಬೋರೇಗೌಡರಿಗೂ ಅರ್ಥವಾಗಲಿಲ್ಲ; ಮತ್ತು ಯಾವ ಕನ್ನಡಿಗರಿಗೂ ಅರ್ಥವಾಗಲಿಲ್ಲ...

ಶ್ರೀ ಬಿ. ರಾಚಯ್ಯ.—ರಾಜ್ಯಾಂಗ ದತ್ತವಾಗಿ ಆಂಗ್ಲೋ ಇಂಡಿಯನ್‌ರನ್ನು ನೇಮಕ ಮಾಡಿದ್ದೇವೆ...

ಶ್ರೀ ಜಿ. ನಾರಾಯಣ ಕುಮಾರ್.—ಅವರು ಮಾತನಾಡಿದ್ದು ಆಂಗ್ಲ ಭಾಷೆಯಲ್ಲಿ, ನಮ್ಮ ಎದುರುಗಡೆ ಕುಳಿತಿರತಕ್ಕಂಥ ಐ.ಎ.ಎಸ್. ಆಫೀಸರ್‌ರವರಿಗೆಲ್ಲಾ ತುಂಬಾ ಆನಂದ ಆಗಿಹೋಗಿ ಬಿಟ್ಟಿದೆ. ಇಂಗ್ಲೀಷ್‌ನಲ್ಲಿ ಏನು ಚೆನ್ನಾಗಿ ಮಾತನಾಡುತ್ತಿದ್ದಾರೆ, ಆದರೆ ಅವರು ಏನು ಮಾತನಾಡಿದರು ಎಂಬುದು ನನಗೂ ಸಹ ಅರ್ಥವಾಗಲಿಲ್ಲ. ಆದುದರಿಂದ ಆದಷ್ಟು ಇಲ್ಲಿ ಚರ್ಚೆ ಕನ್ನಡದಲ್ಲಿಯೇ ನಡೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಶ್ರೀ ಕೆ. ಹೆಚ್. ರಂಗನಾಥ್‌ರವರು ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದರು. ಇವೊತ್ತಿನ ದಿವಸ ಹುಡುಗರಿಗೆ ಚರಿತ್ರೆ, ಭೂಗೋಳ ಎನ್ನತಕ್ಕದ್ದನ್ನು ಹೇಳಿಕೊಡುವುದನ್ನೇ ಕೈ ಬಿಟ್ಟಿದ್ದಾರೆ. ಅದೇ ರೀತಿಯಾಗಿ ಇವೊತ್ತಿನ ದಿವಸ ಕನ್ನಡದಲ್ಲಿ ವ್ಯಾಕರಣ ಇಲ್ಲವೇ ಇಲ್ಲ. ವ್ಯಾಕರಣ ಇಲ್ಲದೇ ಕನ್ನಡ ಭಾಷೆಯನ್ನು ಶುದ್ಧವಾಗಿ ಸರಿಯಾಗಿ ಮಾತನಾಡಲು ಸಾಧ್ಯವೇ? ಆದರೆ ಇಂಗ್ಲೀಷ್‌ನಲ್ಲಿ ಗ್ರಾಮರ್ ಎಂಬುದು ಇಟ್ಟುಕೊಂಡಿದ್ದಾರೆ. ಇಂಗ್ಲೀಷ್‌ನವರು ನಮ್ಮ ದೇಶವನ್ನು ಆಳಿ ನಮ್ಮಿಂದ ಕೋಟಿಗಟ್ಟಲೆ ಹಣವನ್ನು ದೋಚಿ ತಮ್ಮ ಇಂಗ್ಲೀಷ್‌ನ್ನು ಇಲ್ಲಿ ಬೆಳೆಸುವುದಕ್ಕಾಗಿ ಹಣವನ್ನು ಚೆಲ್ಲಿ ಹೋಗಿದ್ದಾರೆ. ಆದರೆ ಇವತ್ತು ನಮ್ಮ ಕನ್ನಡ ನಾಡಿನಲ್ಲಿ ಕನ್ನಡದ ಅಭಿವೃದ್ಧಿಗೋಸ್ಕರವಾಗಿ ವಿದ್ಯಾ ಇಲಾಖೆಯವರು ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆಂದು ನಾನು ಕೇಳಬಯಸುತ್ತೇನೆ. ನಮ್ಮ ಹುಡುಗರಿಗೆ ವ್ಯಾಕರಣ ಎಂದರೆ ಗೊತ್ತಿಲ್ಲ. ಏನು ಎಂದರೆ 'ಕ್ಯಾಕಲ್ಸ' ಎಂದು ಹೇಳುತ್ತಾರೆ. ಆ ಮಟ್ಟದಲ್ಲಿ ಇವೊತ್ತಿನ ದಿವಸ ವಿದ್ಯಾಭ್ಯಾಸವಿದೆ. ಲಿಂಗಗಳು ಎಷ್ಟು ಎನ್ನುವುದು ಗೊತ್ತಿಲ್ಲ. ಯಾವ ಯಾವ ಲಿಂಗಗಳು ಇವೆ ಎಂದರೆ ಶಿವಲಿಂಗ ಎಂದು ಹೇಳುತ್ತಾರೆ. ಕನ್ನಡದ ಬಗ್ಗೆ ಏನೂ ಗೊತ್ತಿಲ್ಲದೇ ಅಧಿಕಾರಿಗಳನ್ನು ಇಟ್ಟುಕೊಂಡು ನೀವು ಇನ್ನು ಹೇಗೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುತ್ತೀರಿ? ಮಾನ್ಯ ರಾಚಯ್ಯನವರು ವಿದ್ಯಾಮಂತ್ರಿಗಳಾಗಿದ್ದಾರೆ, ಬಹಳ ಅನುಭವ ಪಡೆದಿದ್ದಾರೆ. ಅವರಿಗೆ ನಮ್ಮ ತಂದೆ ವಯಸ್ಸಾಗಿದೆ, ಅವರು ಈ ವಿದ್ಯಾಭ್ಯಾಸ ಇಲಾಖೆಯಲ್ಲಿರತಕ್ಕ ಕುಂದುಕೊರತೆಗಳನ್ನು ಸರಿಪಡಿಸುತ್ತಾರೆಂದು ತಿಳಿದಿದ್ದೇನೆ. ಮಾನ್ಯ ಶ್ರೀ ಕೃಷ್ಣನ್‌ರವರು ಮತ್ತು ನಾನು ಮಂಡ್ಯ, ಮದ್ದೂರಿನಿಂದ ದೊಡ್ಡ ಬೃಹತ್ತಾದ ಶಿಕ್ಷಕ–ಶಿಕ್ಷಕಿಯರ ಮೆರವಣಿಗೆಯನ್ನು ನಡೆಸಿ ಅವತ್ತಿನ ದಿವಸ ಮಾನ್ಯ ವಿದ್ಯಾಮಂತ್ರಿಗಳವರಿಗೆ ಮತ್ತು ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಅರ್ಪಿಸಿದಾಗ ಆಗ ಒಂದು ವಾಗ್ದಾನವನ್ನು ಕೊಟ್ಟಿದ್ದರು. ಒಂದು ಭರವಸೆ ಕೊಟ್ಟಿದ್ದರು, ಇವರನ್ನೆಲ್ಲಾ ಕೆಲಸದಿಂದ ತೆಗೆಯುವುದಿಲ್ಲ. ಅವರನ್ನೆಲ್ಲಾ ಖಾಯಂ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದರು. ಆದರೆ 29ನೇ ತಾರೀಖಿನ ದಿವಸ ಕು., ಮಂಗಳ ಎನ್ನತಕ್ಕ ಹೆಣ್ಣುಮಗಳು, ಶಿಕ್ಷಕಿಯಾಗಿ ಚನ್ನಪಟ್ಟಣದಲ್ಲಿ ಕೆಲಸ ಮಾಡುತ್ತಿದ್ದಳು. ಅವಳ ದುಡಿಮೆಯಿಂದಲೇ ಅವಳ ವೃದ್ಧ ತಾಯಿ ಮತ್ತು ಇಬ್ಬರು ಅಣ್ಣ ತಮ್ಮಂದಿರ ಜೀವನ ಸಾಗುತ್ತಿತ್ತು. ಮತ್ತು ಅವಳು ಮುಂದೆ ತನ್ನ ಕೆಲಸ ಖಾಯಂ ಆದಲ್ಲಿ ಮದುವೆ ಕೂಡ ಮಾಡಿಕೊಳ್ಳ ಬಹುದು ಎನ್ನತಕ್ಕ ಆಶೋತ್ತರಗಳನ್ನು ಇಟ್ಟುಕೊಂಡಿದ್ದಳು. ಅವರು ನಿರೊದ್ಯೋಗಿಗಳಾಗಿದ್ದರೂ ಚಿಂತೆಯಿಲ್ಲ. ಸಂಸಾರ ಸಾಗಿಸ ಬಹುದೆಂಬ ಆಸೆ ಇತ್ತು. ಆದರೆ ಇವೊತ್ತಿನ ದಿವಸ, 7640 ಜನರ ಪೈಕಿ ಮಂಗಳ ಎಂಬ ಹೆಣ್ಣು ಮಗಳು ರೈಲಿಗೆ ತಲೆ ಕೊಟ್ಟು ಸತ್ತಿದ್ದಾಳೆ. ಅಲ್ಲಿಗೆ 7639 ಜನರು ಉಳಿದಿದ್ದಾರೆ. ತನ್ನ ತಂದೆತಾಯಿಗಳನ್ನು ಸಾಕುವುದಕ್ಕೆ ಹಣವಿಲ್ಲದೆ, ಉದ್ಯೋಗ ಖಾಯಂ ಆಗಿಲ್ಲವೆಂದು ಮತ್ತು ಸರ್ಕಾರದಲ್ಲಿ ನನಗೆ ಹುದ್ದೆ ಖಾಯಂ ಆಗುತ್ತದೋ ಇಲ್ಲವೋ ಎಂದು ಮಂಗಳ ತನ್ನ ಜೀವನದ ಕೊನೇ ಉಸಿರು ಎಳೆದಿದ್ದಾಳೆ. ಇದಕ್ಕೆ ಕಾರಣ, ವಿದ್ಯಾ ಇಲಾಖೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ಆಕೆಯು ಜೀವನದಲ್ಲಿ ಬೇಸರ ಬಂದು, ನೊಂದು–ಬೆಂದು ಈ ಕನ್ನಡ ರಾಜ್ಯದಲ್ಲಿ ಇರಲೇಬಾರದೆಂದು ರೈಲಿಗೆ ತಲೆ ಕೊಟ್ಟು ಪ್ರಾಣ ಕಳೆದುಕೊಂಡಿದ್ದಾಳೆ. ಈ ರಾಜ್ಯದಲ್ಲಿ ನೆರೆ ರಾಜ್ಯದ ತಮಿಳರು ಬಾಳಿ ಬದುಕುತ್ತಿದ್ದಾರೆ. ಪಕ್ಕದ ರಾಜ್ಯದ ತೆಲುಗರು ಬದುಕುತ್ತಿದ್ದಾರೆ, ಕೇರಳದ ಜನರು ಬಾಳಿ ಬದುಕುತ್ತಿದ್ದಾರೆ, ಆದರೆ ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದು ಕೆಲಸ ಮಾಡುತ್ತಿದ್ದ ಹೆಣ್ಣು ಮಕ್ಕಳನ್ನು ಖಾಯಂ ಮಾಡದೇ ಇದ್ದುದರಿಂದ ನಾವು ಎಂತಹ ನತದೃಷ್ಟರಾಗಿದ್ದೇವೆಂಬುದನ್ನು ವಿಚಾರ ಮಾಡಬೇಕಾಗಿದೆ. ಇವೊತ್ತಿನ ದಿವಸ ಎಷ್ಟೋ ಲಕ್ಷ ಜನ ಉದ್ಯೋಗವಿಲ್ಲದೆ ಸಾಯತಕ್ಕ ಪರಿಸ್ಥಿತಿ ಒದಗಿ ಬಂದಿದೆ. ಇದಕ್ಕೆ ಕಾರಣರು ಯಾರು? ಇವೊತ್ತಿನ ದಿವಸ ವಿದ್ಯಾ ಇಲಾಖೆಯಲ್ಲಿರತಕ್ಕ ಪ್ರೌಢ ಶಾಲೆಯ

ಉಪಾಧ್ಯಾಯರು ಕೂಡ ನಮ್ಮ ಖಾಯಮಾತಿಯನ್ನು ಕಾಣುತ್ತೇವೆಯೇ ಎಂದು ಸಂಶಯ ಪಡತಕ್ಕ ಮಟ್ಟಕ್ಕೆ ಬಂದಿದ್ದಾರೆ. ನಮ್ಮ ಜೀವನದಲ್ಲಿ ಖಾಯಮಾತಿಯನ್ನು ಕಾಣುವುದಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಅವರನ್ನು ಕಾಡುತ್ತಿದೆ. ಚನ್ನಪಟ್ಟಣದ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಶಿಕ್ಷಕಿ ಮಂಗಳಎಂಬ ಮಹಿಳೆ ಸತ್ತು ಇವತ್ತಿಗೆ 5ದಿನಗಳಾಗಿವೆ. ಇದರ ಬಗ್ಗೆ ವಿದ್ಯಾ ಇಲಾಖೆ ಏನು ಮಾಡುತ್ತಿದೆ ? ಐ.ಎ.ಎಸ್. ಅಧಿಕಾರಿಗಳಿಗೆ ಕನ್ನಡ ಬೇಕಾಗಿಲ್ಲ; ಅವರಿಗೆ ಕನ್ನಡ ಗೊತ್ತಿಲ್ಲ. ಕನ್ನಡ ಎಂದರೆ ಎನ್ನಡ ಎನ್ನುತ್ತಾರೆ. ಅವರಿಗೇನು ಗೊತ್ತು ಕನ್ನಡ ? ನಾವು ಕನ್ನಡ ಗೊತ್ತಿಲ್ಲದೆ ಇದ್ದವರನ್ನು ವಿದ್ಯಾ ಇಲಾಖೆಗೆ ತರುತ್ತೇವೆ. ಇದರಿಂದ ವ್ಯವಸ್ಥಿತವಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕಾಗಲೀ, ಕೆಲಸ ಕಾರ್ಯಗಳನ್ನು ಸುಗಮವಾಗಿ ಮಾಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ಹಿಂದಿನ ಸರ್ಕಾರದಲ್ಲಿ ಶಿಶು ವಿಹಾರದ ಉಪಾಧ್ಯಾಯರುಗಳಿಗೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರಿಯಾಗಿ ಸಂಬಳ ಪಾವತಿಯಾಗುತ್ತಿರಲಿಲ್ಲ. 3–4–5 ವರ್ಷದ ಮಕ್ಕಳಿಗೆ, ಮಾತೇ ಗೊತ್ತಿಲ್ಲದ ಮಕ್ಕಳಿಗೆ ಪಾಠ ಹೇಳತಕ್ಕ ಶಿಶು ವಿಹಾರದ ಶಿಕ್ಷಕರ ಪರಿಸ್ಥಿತಿಯನ್ನು ನೋಡಿದಾಗ ಬಹಳ ದುಃಖವಾಗುತ್ತದೆ. ಅವರು ಇವತ್ತು ನರಕ ಯಾತನೆಯಲ್ಲಿದ್ದಾರೆ. ಖಾಸಗೀ ಸಂಸ್ಥೆಯವರು ಲಾಭ ಸಂಪಾದನೆ ಮಾಡುವುದಕ್ಕೆ ನೋಡುತ್ತಾರೆಯೇ ಹೊರತು ಶಿಕ್ಷಕರಿಗೆ ಸರಿಯಾದ ಸಂಬಳ ಸಾರಿಗೆಗಳನ್ನು ಕೊಡುವುದಿಲ್ಲ. ಇದು ಕನ್ನಡ ರಾಜ್ಯದ, ಕನ್ನಡಿಗರ ದುರಾದೃಷ್ಟವೇ ಸರಿ. ನಾವು ಹೇಳಿದ್ದೂ ಹೇಳಿದ್ದೆ, ನಮ್ಮ ಚರಿತ್ರೆ ಹಾಗೆ ಇದೆ; ನಮ್ಮ ಚರಿತ್ರೆ ಹೀಗೆ ಇದೆ ಎಂದು ಹೇಳಿಕೊಂಡು ಹೋಗುತ್ತಿದ್ದೇವೆ. ಇವೊತ್ತಿನ ದಿವಸ ಕನ್ನಡ ಉಳಿಯಬೇಕಾದರೆ ವಿದ್ಯಾ ಇಲಾಖೆಯಲ್ಲಿ ಕೆಲಸ ಆಗಬೇಕು. ಮೂಲತಃ ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ಆಗಬೇಕು. ಗೋಕಾಕ್ ವರದಿ ಬಗ್ಗೆ ಚಳುವಳಿ ಮಾಡಿದಾಗ ಅನೇಕರು ಗುಂಡಿನ ಹೊಡೆತಕ್ಕೆ ಸಿಕ್ಕಿ ಸತ್ತಿದ್ದಾರೆ. ಅದರ ಪರಿಣಾಮ ಏನಾಯಿತು ? ಇವತ್ತು ಕನ್ನಡದ ಏಳ್ಗೆಗಾಗಿ ಎಷ್ಟು ಕೋಟಿ ರೂಪಾಯಿ ಹಣ ಇಟ್ಟಿದ್ದಾರೆ ? ಈಗ ಕನ್ನಡ ಕಾವಲು ಸಮಿತಿ ಎಂದು ಮಾಡಿದ್ದಾರೆ, ಅದು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ? ನಮ್ಮ ನಾಡು ಕನ್ನಡ, ನಮ್ಮ ರಾಜ್ಯ ಕನ್ನಡ, ನಾವು ಕನ್ನಡಕ್ಕಾಗಿ ಬಾಳಿ ಬದುಕಬೇಕು ಎಂದು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೇ ಹೊರತು ಕೇವಲ ಒಂದು ಸ್ಥಾನಕ್ಕಾಗಿ ಕೆಲಸ ಮಾಡತಕ್ಕದ್ದು ಸಲ್ಲದೆಂದು ಹೇಳಬೇಕಾಗಿದೆ. ಈ ವಿದ್ಯಾ ಇಲಾಖೆಯಲ್ಲಿ ಕನ್ನಡಕ್ಕಾಗಿ ಹೊಸದಾಗಿ ಏನೇನು ಮಾಡಿದ್ದಾರೆಂಬುದನ್ನು ನೋಡಿಕೊಂಡು ಬರೋಣವೆಂದರೆ ನಮಗೆ ಈ ಪುಸ್ತಕವನ್ನು ಸಂಜೆ ನಾವು ಮನೆಗೆ ಹೋಗುವಾಗ ಕೊಡುತ್ತಾರೆ. ಮತ್ತೆ ಬೆಳಿಗ್ಗೆ ಬೇಗ ಬರಬೇಕೆಂದರೆ ನಮಗೆ ಓದುವುದಕ್ಕೆ ವೇಳೆಯೇ ಇರುವುದಿಲ್ಲ. ಆದ್ದರಿಂದ ಮೊದಲೇ ಕೊಡತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ನೀವು ಈ ಇಲಾಖೆಗೆ ಎಷ್ಟು ಕೋಟಿ ರೂಪಾಯಿ ಕೊಟ್ಟಿದ್ದೀರಿ, ಹಿಂದೆ ಈ ಇಲಾಖೆ ಏನು ಕೆಲಸ ಮಾಡಿದೆ, ಮುಂದೆ ಏನು ಮಾಡುತ್ತದೆ ಎಂಬುದನ್ನೆಲ್ಲಾ ತಿಳಿದುಕೊಂಡು ನಾವು ಇದರ ಬಗ್ಗೆ ಏನು ಹೇಳಬೇಕೆಂಬುದನ್ನು ಆಲೋಚನೆ ಮಾಡಿಕೊಂಡು ಬರುವುದಕ್ಕೆ ಮೊದಲೇ ಪುಸ್ತಕಗಳನ್ನು ನಮ್ಮ ಕೈಗೆ ಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಾವು ಇದರ ಬಗ್ಗೆ ಏನು ತಾನೇ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ ? ಮತ್ತು ನಮಲ್ಲಿರತಕ್ಕ ಕಳಕಳಿಯನ್ನು ಯಾವ ರೀತಿ ವ್ಯಕ್ತ ಮಾಡಬೇಕು ? ಇವೊತ್ತಿನ ದಿವಸ ವಿದ್ಯಾ ಇಲಾಖೆ ನೆಪಮಾತ್ರಕ್ಕೆ ಇದೆ ಎಂದರೆ ತಪ್ಪಾಗಲಾರದು. ಅಲ್ಲಿ ವಿದ್ಯೆಯೂ ಇಲ್ಲ, ಏನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದುಗಡೆ ಹೊಗಳಿ ಮುಂದುಗಡೆ ನೆಪ ಮಾತ್ರಕ್ಕೆ ಅಂದರೆ ಹೇಗೆ ?

ಶ್ರೀ ಜಿ. ನಾರಾಯಣ ಕುಮಾರ್.—ನಾನು ಮಂತ್ರಿಗಳ ಬಗ್ಗೆ ಹೇಳುತ್ತಿಲ್ಲ, ಹಿಂದಿನ ಸರ್ಕಾರ ಮಾಡಬಾರದ್ದು ಮಾಡಿದೆ. ಇನ್ನುಮುಂದಾದರೂ ಮಾಡತಕ್ಕ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಲಿ ಎಂದು ಹೇಳುತ್ತಿದ್ದೇನೆ. ಕೃಷ್ಣನ್‌ರವರು ನನ್ನ ಆತ್ಮೀಯ ಅಭಿಮಾನಿಗಳು. ಇವೊತ್ತಿನ ದಿವಸ ವಿಜ್ಞಾನ ಮುಂದುವರಿದಿದೆ; ದೇವರು ದಿಂಡರು ಎಲ್ಲ ಪುಸ್ತಕಗಳಲ್ಲಿ ಕಾಣುತ್ತಿದ್ದೇವೆಂದರು. ಅವರು ಶ್ರೀ ಕೃಷ್ಣನ ಹೆಸರನ್ನು ಇಟ್ಟುಕೊಂಡಿದ್ದಾರೆ. ಆ ಹೆಸರನ್ನು ಏತಕ್ಕೆ ಕಿತ್ತುಹಾಕಬಾರದು ? ಶ್ರೀ ಕೃಷ್ಣನ ಭಗವದ್ಗೀತೆಯಲ್ಲಿ ಹಾಗೆ ಇದೆ, ಹೀಗೆ ಇದೆ ಎಂದು ಹೇಳುತ್ತಾರೆ. ಅದರಂತೆ ಅವರು ನಡೆದುಕೊಳ್ಳಲಿ. ಕೃಷ್ಣನ್‌ರವರು ಇನ್ನೂ ನೂರು ವರ್ಷಗಳ ಕಾಲ ಇರಲಿ. ಅವರು ಮಾಡಿದಂತಹ ಕೆಲಸ, ಮಾಡಿದಂತಹ ಹೋರಾಟ ಕಾರ್ಮಿಕರಿಗೆ ಬಳುವಳಿಯಾಗಿ ಇರಲಿ. ಅದನ್ನು ಚರಿತ್ರೆಯಲ್ಲಿ ರೂಪಿಸಿದರೆ ಅವರು ಏತಕ್ಕೆ ದೇವರ ಹೆಸರನ್ನು ಇಟ್ಟುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಅವರು ಲೆನಿನ್ ಮತ್ತು ಕಾರ್ಲ್ ಮಾರ್ಕ್ಸ್‌ವಾದವನ್ನು ತಮ್ಮ ಮುಂದಿಟ್ಟುಕೊಂಡು ನಡೆಯುತ್ತಿದ್ದಾರೆ. ಅವರನ್ನು ನಾವು ದೇವರು ಎಂದು ಕರೆಯಬಹುದು. ಶ್ರೀ ರಾಮಕೃಷ್ಣರವರು ಮಾಡಿದ ತ್ಯಾಗದಿಂದಾಗಿ ಅವರನ್ನು ದೇವರು ಎನ್ನುತ್ತೇವೆ. ಸುಮ್ಮಸುಮ್ಮನೆ ಯಾರ್ಯಾರನ್ನೋ ದೇವರು ದಿಂಡರು ಅನ್ನುವುದಿಲ್ಲ. ಶ್ರೀ ರಾಮಚಂದ್ರನ ಚರಿತ್ರೆ ದೊಡ್ಡದಾಗಿ ಇದೆ. ನಮ್ಮ ರಾಜ್ಯದಲ್ಲಿ ಅಂಥ ಒಂದು ಸಂಸ್ಕೃತಿ ಇದೆ. ಯಾರೋ ಮಾಡಿದಂತಹ ಸೇವೆಯನ್ನು ಕವಿಗಳು, ಸಾಹಿತಿಗಳು ಬರೆದುಕೊಂಡು ಹೋಗುತ್ತಾರೆ. ಸಂದರ್ಭ ನೋಡಿ ಬರೆಯತಕ್ಕ ವೈಶಿಷ್ಟ್ಯ ನಮ್ಮ ಕನ್ನಡ ನಾಡಿನಲ್ಲಿದೆ. ಕೃಷ್ಣನ್‌ರವರು ಹೇಳಿದರು, ನಾನು ಮನೆಯಲ್ಲಿ ಪೂಜೆ ಮಾಡುತ್ತೇನೆ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಹೇಳಿದ್ದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ನಿಮ್ಮನ್ನು ದೇವರ ದ್ರೋಹಿ ಎಂದು ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಯಾರು ಬೇಕಾದರೂ ದೇವಸ್ಥಾನಕ್ಕೆ, ಮಸೀದಿಗೆ, ಚರ್ಚಿಗೆ ಹೋಗಲಿ ಬೇಡವೆಂದು ತಡೆಯುವುದಕ್ಕಾಗುವುದಿಲ್ಲ. ಅವರಿಗೆ ಸಂವಿಧಾನದಲ್ಲಿ ಹಕ್ಕಿದೆ, ಅದನ್ನು ಬೇಡ ಅನ್ನುವುದಕ್ಕಾಗುವುದಿಲ್ಲ. ಆದರೆ ಚಿಕ್ಕ ಮಕ್ಕಳಿಗೆ ವೈಜ್ಞಾನಿಕವಾಗಿ ಪಾಠ ಹೇಳಿಕೊಡಬೇಕು, ಅವಾಸ್ತವಿಕತೆ ಅವರ ಪಾಠದಲ್ಲಿ ಇರಕೂಡದು. ಹಾಗೆ ತರಬೇತಿ ನೀಡಿದರೆ ಮುಂದೆ ಒಳ್ಳೆಯ ಪೀಳಿಗೆ ತಯಾರಾಗುವುದಕ್ಕೆ ಅವಕಾಶವಾಗುತ್ತದೆ. ನಾನು ಇವೊತ್ತಿನ ದಿವಸ ಯಾವ ರೀತಿ ಅವೈಜ್ಞಾನಿಕತೆ, ಅವಾಸ್ತವಿಕತೆ ಇದೆ ಎಂಬುದನ್ನು ಹೇಳಿದೆ; ನಾನು ಏನು ಹೇಳಿದೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅವರು ನಾನು ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದಾಗ ಎಲ್ಲಾ ದೇವಸ್ಥಾನಗಳಿಗೂ ಕರೆದುಕೊಂಡು ಹೋದರು. ಯಾವ ದೇವಸ್ಥಾನವನ್ನೂ ಬಿಡಲಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಕರ್ನಾಟಕದಲ್ಲಿ ಅನೇಕ ಶಿಶುವಿಹಾರಗಳು ನಡೆಯುತ್ತಿದ್ದು ಅದರಲ್ಲಿ ಶಿಕ್ಷಕ ಶಿಕ್ಷಕಿಯರು ಕೆಲಸ ಮಾಡುತ್ತಿದ್ದಾರೆ. ಆದರೆ ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ 50 ಪರ್ಸೆಂಟ್ ಧನಸಹಾಯ ಸರ್ಕಾರ ನೀಡಿ ಇನ್ನು 50 ಪರ್ಸೆಂಟ್ ವ್ಯವಸ್ಥಾಪಕರು ಕೊಡಬೇಕು ಎಂಬ ಮಾತು ಬರಹದಲ್ಲಿ ನೋಡುವುದಕ್ಕೆ ಚೆನ್ನಾಗಿದೆ ಅಷ್ಟೆ. ನನ್ನ ಅನುಭವದಲ್ಲಿ ಹೇಳುತ್ತೇನೆ., ಕನ್ನಡ ಶಾಲೆಗಳನ್ನು ನಡೆಸುವುದು ತುಂಬಾ ಕಷ್ಟ. ನಾನು ಕೆಂಪೇಗೌಡ ವಿದ್ಯಾಸಂಸ್ಥೆ ಎಂದು ಮಾಡುವುದಕ್ಕೆ ಹೋಗಿ ಕೈಸುಟ್ಟುಕೊಂಡೆ. ನಮ್ಮ ಹತ್ತಿರ ಹಣ ಇಲ್ಲ. ಧನಿಕರನ್ನು ಕೇಳುವುದಕ್ಕೆ ಹೋದರೆ ನಾರಾಯಣ ಕುಮಾರ್‌ಗೆ ನಾವು ಏತಕ್ಕೆ ಹಣ ಕೊಡೋಣ ಎಂದು ಹೇಳುತ್ತಾರೆ. ಸರ್ಕಾರದಲ್ಲಿ ನೋಡಿದರೆ ಪ್ರೋತ್ಸಾಹ ಇಲ್ಲ. ಲಂಚ ರುಷುವತ್ತುಗಳನ್ನು ಕೊಡುವುದಕ್ಕೆ ಯಾರ ಕೈಯಲ್ಲೂ ಆಗುವುದಿಲ್ಲ. ಇದರಲ್ಲಿ ಒಂದು ವ್ಯಾಪಾರ ವರ್ಗವೇ ಇದೆ. ಹಣ ಬಂದಮೇಲೆ 50 ಭಾಗ ನನಗೆ, 50 ಭಾಗ ನಿನಗೆ ಎಂದು ಅಧಿಕಾರಿಗಳು ಮತ್ತು ವ್ಯವಸ್ಥಾಪಕ ವರ್ಗದವರು ಹಂಚಿಕೊಳ್ಳುವ ನಿದರ್ಶನಗಳು ಬೇಕಾದಷ್ಟಿವೆ. ಆದರೆ ಅಭಿಮಾನದಿಂದ ಸಂಸ್ಥೆ ಕಟ್ಟೋಣ ಎಂದು ಬಂದರೆ ಅದನ್ನು ನಡೆಸುವುದು ಬಹಳ ಕಷ್ಟವಾಗಿದೆ. ಕನ್ನಡ ಶಿಶುವಿಹಾರಗಳ ಬಗ್ಗೆ ಮತ್ತು ಕನ್ನಡ ಶಾಲೆಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಅಲ್ಲಿನ ಉಪಾಧ್ಯಾಯರು ಮತ್ತು ಉಪಾಧ್ಯಾಯನಿಯರಿಗೆ ಸರ್ಕಾರದಿಂದ ಸಂಬಳ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ ಮೂರು ಶಾಲೆಗಳಿದ್ದು ಅದನ್ನು ಸರ್ಕಾರಕ್ಕೆ ಬಿಟ್ಟುಕೊಡುವುದಕ್ಕೆ ನಾನು ತಯಾರಿದ್ದೇನೆ. ಅದನ್ನು ಸರ್ಕಾರ ತೆಗೆದುಕೊಂಡು ನಡೆಸಲಿ. ಕನ್ನಡ ಶಿಶುವಿಹಾರದಲ್ಲಿ ಸಣ್ಣಪುಟ್ಟ ಮಕ್ಕಳಿಗೆ ಪಾಠ ಹೇಳುವುದು ಅಷ್ಟು ಸುಲಭವಲ್ಲ. ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಹೇಳಬಹುದು; ಪ್ರಾಥಮಿಕ ಶಾಲೆಗಳ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಹೇಳಬಹುದು; ಆದರೆ ಶಿಶುವಿಹಾರದಲ್ಲಿ ಪಾಠಪ್ರವಚನ ಹೇಳುವುದು ಬಹಳ ಕಷ್ಟ ಇದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರಿಗೆ ಯಾವ ರೀತಿ ಪೂರ್ಣ ಸಂಬಳ ಕೊಡುತ್ತಾರೋ ಅದೇರೀತಿ ಕನ್ನಡ ಶಿಶುವಿಹಾರಗಳ ಉಪಾಧ್ಯಾಯರಿಗೂ ಕೊಡುವ ವ್ಯವಸ್ಥೆ ಮಾಡಿದರೆ ಈ ಸರ್ಕಾರಕ್ಕೆ ಕೀರ್ತಿ ಬರುತ್ತದೆ. ನನ್ನ ಕ್ಷೇತ್ರ ಬಿನ್ನಿಪೇಟೆ. ಅಲ್ಲಿ ಒಂದು ಕನ್ನಡ ಶಾಲೆ ಇದೆ. ಅಲ್ಲಿ ಮನುಷ್ಯತ್ವವಿರುವ ಯಾರೂ ಪಾಠ ಹೇಳುವುದಕ್ಕಾಗುವುದಿಲ್ಲ. ಹುಡುಗರೂ ಅಂಥ ಕಡೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಬಿನ್ನಿಪೇಟೆ ಕ್ಷೇತ್ರದಲ್ಲಿರುವ ಕನ್ನಡ ಶಾಲೆ ಸರ್ಕಾರೀ ಶಾಲೆ. ಮಾನ್ಯ ಮಂತ್ರಿಗಳನ್ನು ಆ ಶಾಲೆ ತೋರಿಸಲು ಎರಡು ಮೂರು ಬಾರಿ ಕರೆದಿದ್ದೇನೆ. ಅವರು ನಾನು ಕರೆದಾಗಲೆಲ್ಲಾ 'ನಾನು ಪ್ರವಾಸಕ್ಕೆ ಹೋಗುತ್ತಿದ್ದೇನೆ, ಇನ್ನೊಂದು ಸಾರಿ ಬರುತ್ತೇನೆ' ಎಂದು ಹೇಳಿದರು. ಪಾದರಾಯನಪುರದಲ್ಲಿ ಬಹಳ ಬಡವರು, ಹರಿಜನರು, ಮುಸ್ಲಿಮರು ಇದ್ದಾರೆ. ಆ ಜನರಲ್ಲಿ ಹೆಚ್ಚಾಗಿ ಕೂಲಿಕಾರರು ಮತ್ತು ಕಾರ್ಮಿಕರು ಇದ್ದಾರೆ. ಸಿಲ್ಕ್ ಫ್ಯಾಕ್ಟರಿಗೆ ಹೋಗತಕ್ಕ ಸಾಮಾನ್ಯ ಜನರಿದ್ದಾರೆ. ಆದರೆ ಅಲ್ಲಿರುವ ಶಾಲೆಯ ಪರಿಸ್ಥಿತಿಯನ್ನು ನೋಡಿದರೆ ಆ ದುಸ್ಥಿತಿಯಲ್ಲಿ ಯಾವ ರೀತಿ ಕನ್ನಡ ಕಲಿಯುವುದಕ್ಕೆ ಸಾಧ್ಯ ಎಂಬುದನ್ನು ನೋಡಬೇಕು. ಗೋಡೆ ಕುಸಿದು ಬಿದ್ದಿದೆ. ಕಿಟಕಿಗೆ ಬಾಗಿಲುಗಳಿಲ್ಲ. ಮಕ್ಕಳು ಅಲ್ಲೇ ಕಕ್ಕಸ್ಸಿಗೆ ಹೋಗಿರುವುದರಿಂದ ದುರ್ವಾಸನೆ ತುಂಬಿರುತ್ತದೆ. ಇದು ಶಾಲೆ; ಶಾಲಾ ಕಟ್ಟಡ; ಗೋಕಾಕ್ ವರದಿ; ಇದು ಕನ್ನಡ ಆಡಳಿತ ಭಾಷೆ ಮಾಡತಕ್ಕ ವೈಶಿಷ್ಟ್ಯ.

ಶ್ರೀ ಎಂ. ಎಸ್. ಕೃಷ್ಣನ್.—ಗೋಕಾಕ್ ವರದಿ ಇದಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಗೋಕಾಕ್ ವರದಿ ಎಂದರೆ ಕನ್ನಡದ ಬಗ್ಗೆ. ಏನು ಕೃಷ್ಣನ್ ಅವರೇ, ಕರ್ನಾಟಕದಲ್ಲೇ ಇದ್ದೀರಿ, ಅಷ್ಟೂ ಗೊತ್ತಾಗಲಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೇಳಿದ್ದು ನೋಡಿದರೆ ಅನುಮಾನ ಬರುತ್ತದೆ. ಮಕ್ಕಳೆಲ್ಲಾ ಕಕ್ಕಸ್ಸಿಗೆ ಹೋಗಿರುತ್ತಾರೆ ಎಂದು ಹೇಳಿ ತಕ್ಷಣ ಇದು ಗೋಕಾಕ್ ವರದಿ ಎಂದು ಹೇಳಿದರೆ ಏನರ್ಥ ?

ಛೇರ್ಮನ್.—ಶಾಲೆಗಳ ಬಗ್ಗೆ ಹೇಳಿ. ಗೋಕಾಕ್ ವರದಿ ಬಗ್ಗೆ ಬೇಡ.

ಶ್ರೀ ಜಿ. ನಾರಾಯಣ ಕುಮಾರ್.—ಗೋಕಾಕ್ ವರದಿಯಲ್ಲಿ ಎಲ್ಲವೂ ಕನ್ನಡಮಯವಾಗಿದೆ. ಅದನ್ನು ಪೂರ್ಣವಾಗಿ ಜಾರಿಗೆ ತಂದರೆ ಕನ್ನಡ ಚಳುವಳಿಗಾರರಾದ ನಾವೆಲ್ಲರೂ ಸರ್ಕಾರಕ್ಕೆ ಶರಣಾಗುತ್ತೇವೆ ಎಂದು ಹೇಳಿದ್ದೇನೆ. ಅದಕ್ಕೆ ಒಪ್ಪಿಕೊಳ್ಳುತ್ತೀರಾ ? ಇದು ಕಮ್ಯುನಿಸ್ಟ್ ರಾಜ್ಯ ಅಲ್ಲ. ಕನ್ನಡ ರಾಜ್ಯ ಆಗಬೇಕು ಎಂದು ಹೇಳುತ್ತೇನೆ. ಆಧುನಿಕ ವಿಜ್ಞಾನ ಕರ್ನಾಟಕದಲ್ಲಿ ಇಲ್ಲ ಎಂದು ಹೇಳಿದರು. ಚೈನಾದಿಂದ, ರಷ್ಯಾದಿಂದ

ನಾವು ಕಲಿಯಬೇಕಾಗಿಲ್ಲ. ಕರ್ನಾಟಕಕ್ಕೆ ಒಳ್ಳೆಯ ಚರಿತ್ರೆ ಇದೆ. ಸಪ್ತ ಸಾಮ್ರಾಜ್ಯವನ್ನು ಆಳಿದ ರಾಜ್ಯ ಕರ್ನಾಟಕ. ಕರ್ನಾಟಕ ರಾಜ್ಯದ ಜನ ಯಾರಿಗೂ ಕಡಿಮೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ನಾರಾಯಣ ಕುಮಾರ್ ಅವರು ನನ್ನ ಮೇಲೆ ಏತಕ್ಕೆ ಈ ರೀತಿ ಕೋಪ ಮಾಡಿಕೊಳ್ಳುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಗೋಕಾಕ್ ವರದಿ ಬಗ್ಗೆ ಅವರಿಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ನನಗೂ ಇದೆ. ನಾನು ಅವರಿಗೆ ಹೇಳುವುದು ಸರಿಯಾಗಿ ರೆಕಾರ್ಡ್‌ಗೆ ಹೋಗಲಿ ಎಂಬ ದೃಷ್ಟಿಯಿಂದ ಮಧ್ಯೆ ಮಾತನಾಡಿದೆ. ಆದರೆ ಅದಕ್ಕೆ ಅವರು ರಷ್ಯಾ, ಚೈನಾ, ಮಾಸ್ಕೋ, ವಿಯಟ್ನಾಂ, ಲೆನಿನ್ ಎಲ್ಲಾ ಹೇಳಿದರೆ ಅವರಿಗೆ ಗೊತ್ತಿರುವುದು ನನಗೂ ಗೊತ್ತಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಗೋಕಾಕ್ ವರದಿಯನ್ನು ಜಾರಿಗೆ ತಂದರೆ ಕೃಷ್ಣನ್ ಅವರಿಗೆ ಸ್ವಲ್ಪ ತೊಡಕೆ. ಅವರೂ ಕನ್ನಡದವರೇ. ಇವತ್ತಲ್ಲ ಇನ್ನು ಹತ್ತು ವರ್ಷವಾಗಲೀ ಗೋಕಾಕ್ ವರದಿ ಪೂರ್ಣವಾಗಿ ಜಾರಿಗೆ ಆಗೇ ಆಗುತ್ತದೆ. ನಾನು ಪಾದರಾಯನಪುರದ ಕನ್ನಡ ಶಾಲೆಯ ದುಸ್ಥಿತಿಯ ಬಗ್ಗೆ ಹೇಳುತ್ತಿದ್ದೆ. ಅಲ್ಲಿ ಗೋಡೆಯೆಲ್ಲಾ ಒಡೆದುಹೋಗಿದೆ. ಮಾನ್ಯ ಅಧ್ಯಕ್ಷರು, ಮಾನ್ಯ ಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ದಯುವಿಟ್ಟು ಬಂದು ನೋಡಬೇಕು. ಅಲ್ಲಿ ಯಾವ ರೀತಿ ಕನ್ನಡ ಕಲಿಯುವುದಕ್ಕೆ ಸಾಧ್ಯ ಎಂಬುದನ್ನು ನೋಡಿ. ಗೋಡೆ ಎಲ್ಲಾ ಬಿದ್ದುಹೋಗಿದೆ. ಕಟ್ಟಡಕ್ಕೆಲ್ಲಾ ಗೋರಕ ಹಿಡಿದಿದೆ. ಸುಣ್ಣ ಬಣ್ಣ ಮಾಡಿಸಿ ಎಷ್ಟೋ ವರ್ಷಗಳಾಗಿವೆ. ಹಿಂದಿನ ಸರ್ಕಾರದವರೂ ಅದರ ಬಗ್ಗೆ ನೋಡಲಿಲ್ಲ. ತಾವೂ ನೋಡದಿದ್ದರೆ ಅಲ್ಲಿ ಕನ್ನಡ ಕಲಿಯುವುದು ಹೇಗೆ ಕನ್ನಡ ಆಡಳಿತ ಭಾಷೆ ಯಾವ ರೀತಿ ಆಗುತ್ತದೆ? ಕನ್ನಡಿಗರು ಯಾವ ರೀತಿ ಬದುಕಿ ಬಾಳಬೇಕು ಎಂದು ಕೇಳುತ್ತಿದ್ದೇನೆ. ? ಇಂಥ ಶಿಥಿಲವಾದ ಕನ್ನಡ ಶಾಲೆಗಳು ಇಡೀ ಕರ್ನಾಟಕದಲ್ಲಿ ಸಹಸ್ರಾರು ಇವೆ. ಇದರ ಬಗ್ಗೆ ಗಮನ ಹರಿಸಿ ಕನ್ನಡ ಶಾಲೆಗಳನ್ನು ಉದ್ಧಾರ ಮಾಡುವುದಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ಕನ್ನಡ ಆಡಳಿತ ಭಾಷೆಗೆ ವಿಶೇಷವಾದ ಆದ್ಯತೆಯನ್ನು ನೀಡಿದಂತಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ.

ಛೇರ್ಮನ್.—ಮುಕ್ತಾಯ ಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.—ನನಗೆ ಎರಡು ನಿಮಿಷ ಅವಕಾಶ ಕೊಡಿ. ನಾನು ಕನ್ನಡ ಸಂಸ್ಕೃತಿ ಮತ್ತು ಯುವಜನ ಸೇವಾ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಯುವಜನ ಸೇವಾ ಮಂತ್ರಿಗಳು ಯುವಕರಾಗಿದ್ದು ಒಳ್ಳೆಯ ಉತ್ಸಾಹಶಾಲಿಗಳಾಗಿದ್ದಾರೆ. ಆದರೆ ಅವರ ಜೇಬಿನಲ್ಲಿ ದುಡ್ಡಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಜೇಬಿನಲ್ಲಿಲ್ಲವೇ ?

ಶ್ರೀ ಜಿ. ನಾರಾಯಣ ಕುಮಾರ್.—ಜೇಬಿನಲ್ಲಿ ಎಂದರೆ ಇಲಾಖೆಯಲ್ಲಿ. ಕನ್ನಡದ ಅರ್ಥ ಹೇಗಾದರೂ ಮಾಡಿಕೊಳ್ಳಬಹುದು. ಒಳ್ಳೆಯದಾಗಿಯೂ ಅರ್ಥ ಮಾಡಿಕೊಳ್ಳಬಹುದು, ಕೆಟ್ಟದ್ದಾಗಿಯೂ ಅರ್ಥ ಮಾಡಿಕೊಳ್ಳಬಹುದು. ಇವತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಇಲಾಖೆಯಲ್ಲಿ ಕನ್ನಡ ಸಂಸ್ಕೃತಿ, ನಾಟಕ, ಕ್ರೀಡೆಗಳ ಬಗ್ಗೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೋ ಗೊತ್ತಾಗಲಿಲ್ಲ. ಸಂಗೀತ ನಾಟಕ ಅಕಾಡೆಮಿಯಲ್ಲಿ ಹಿಂದಿನ ಸರ್ಕಾರದವರು ನೇಮಿಸಿದ್ದಂಥ ರಾಜಕೀಯ ಜನರನ್ನೇ ಇವತ್ತೂ ಇಟ್ಟುಕೊಂಡಿದ್ದಾರೆ. ಈ ಜನರು ಹಿಂದಿನ ಸರ್ಕಾರದ ಏಜೆಂಟರಾಗಿದ್ದರು. ಈ ಜನರನ್ನು ಮೊದಲು ತೆಗೆಯಬೇಕು. ಅವರನ್ನು ತೆಗೆದರೆ ಮಾತ್ರ ಕನ್ನಡ ಸಂಗೀತ, ನಾಟಕ ಉದ್ಧಾರ ಆಗುತ್ತದೆಯೇ ಹೊರತು ಇಲ್ಲದಿದ್ದರೆ ಮಾಮೂಲಿ ಹೆಗ್ಗಣಗಳಂತೆ ತಿಂದು ಸರ್ಕಾರದ ಮುಖಕ್ಕೆ ಮಸಿ ಬಳಿಯುವಂಥ ಪ್ರಸಂಗ ಬರುತ್ತದೆ. ನಗರಸಭೆಯ ಮೂಲಕ ಗುಬ್ಬಿ ರಂಗಮಂದಿರವನ್ನು ಕಟ್ಟಿಸಲು ಹಿಂದಿನ ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಇವತ್ತು ಅದರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಬೇಕು. ನಾನು ಗ್ರಾಮೀಣ ಭಾಷೆಯನ್ನು ಉಪಯೋಗಿಸಿದರೆ ಮಾನ್ಯ ಸದಸ್ಯರು ನಗುತ್ತಾರೆ. ಆದರೆ ಅದನ್ನು ಉಪಯೋಗಿಸದೇ ವಿಧಿ ಇಲ್ಲ. ನೆರೆರಾಜ್ಯದಿಂದ ವಲಸೆ ಬಂದಿದ್ದಾರಲ್ಲ–ತಮಿಳು ಜನಾಂಗ ಅವರ ಕೊಂಪೆಯ ರೀತಿ ಈ ಗುಬ್ಬಿ ರಂಗ ಮಂದಿರ ಇದೆ. ಇದನ್ನು ನೋಡಿ ಕನ್ನಡಿಗರು ನಾಚಿಕೆ ಪಡಬೇಕಾಗಿದೆ. ಸರ್ಕಾರ ಅದನ್ನು ತೆಗೆದುಕೊಂಡು ನವೆಂಬರ್ 1 ರೊಳಗಾಗಿ ರಂಗಮಂದಿರವನ್ನು ನಿರ್ಮಾಣ ಮಾಡಿ ಉದ್ಘಾಟನೆ ಮಾಡುವುದಾದರೆ ನಾನು ಯುವಜನ ಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಶ್ರೀಮತಿ ಬಿ. ಜಯಮ್ಮನವರಿಗೆ ಹೇಳಿದೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಿಗೆ ಅಭಿಪ್ರಾಯ ಸ್ವಾತಂತ್ರ್ಯ ಇದೆ. ಆದರೆ ಮಾತನಾಡುವಾಗ ಸಂಗೀತ ನಾಟಕ ಅಕಾಡೆಮಿಯಲ್ಲಿ ಹಿಂದಿನ ಸರ್ಕಾರದ ** ಇದ್ದಾರೆ ಎಂದು ಅಷ್ಟು ಹಗುರವಾಗಿ ಶಬ್ದಗಳನ್ನು ಉಪಯೋಗ ಮಾಡವುದು ಸರಿಯೇ ಎಂದು ನೋಡಬೇಕು. ಅಲ್ಲಿರುವ ಸಾಹಿತಿಗಳನ್ನು ಬದಲಾವಣೆ ಮಾಡುವುದಕ್ಕೆ ಯಾರೂ ಅಡ್ಡಿ ಬರುವುದಿಲ್ಲ. ಯಾರನ್ನು ಬೇಕಾದರೂ ನೇಮಕ ಮಾಡಲಿ. ಆದರೆ ಹಿಂದಿನ ಸರ್ಕಾರದವರು ನೇಮಿಸಿರುವುದು ಅವರ *** ಎಂದು ಹೇಳುವುದಾದರೆ ಮುಂದೆ ಬರತಕ್ಕವರು ಜನತಾ ** ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಸಾಹಿತಿಗಳನ್ನು ** ಎಂದು ಚೇಳು ಕುಟುಕಿದಂತೆ ಮಾತನಾಡತಕ್ಕದ್ದು ಇಡೀ ಸಾಹಿತ್ಯ ಕ್ಷೇತ್ರಕ್ಕೇ ಅಪಮಾನ ಮಾಡಿದಂತಾಗುತ್ತದೆ. ಸಾಹಿತಿಗಳ ಬಗ್ಗೆ, ಸಂಗೀತಗಾರರ ಬಗ್ಗ ಅಷ್ಟು ಹಗುರವಾಗಿ ಹೇಳಬಾರದು. ಸಂಗೀತ ನಾಟಕ ಅಕಾಡೆಮಿಯಲ್ಲಿ ದೊಡ್ಡದೊಡ್ಡವರಿದ್ದಾರೆ. ಮಲ್ಲಿಕಾರ್ಜುನ ಮನ್ಸೂರ್ ಅವರಿದ್ದಾರೆ; ಇನ್ನೂ

** Expunged as ordered by the Chair

ಮುಂತಾದ ದೊಡ್ಡ ದೊಡ್ಡ ಸಾಹಿತಿಗಳು ಸಂಗೀತಗಾರರು ಇದ್ದಾರೆ. ಅವರ ಬಗ್ಗೆ ಅಷ್ಟು ಹಗುರವಾಗಿ ಮಾತನಾಡಿದರೆ ಅವರು ರಾಜೀನಾಮೆ ಕೊಡುವಂಥ ಪ್ರಸಂಗ ಬರುವುದು ಮಾತ್ರವಲ್ಲ ಕರ್ನಾಟಕ ರಾಜ್ಯದಲ್ಲಿ ಅವರಿಗೆ ಅಪಮಾನದಿಂದ ಕಾಣೆದಂತಾಗುತ್ತದೆ. ಅಂತರ ರಾಷ್ಟ್ರೀಯ ಪ್ರಸಿದ್ಧಿ ಪಡೆದವರು ಸಂಗೀತ ನಾಟಕ ಅಕಾಡೆಮಿಯಲ್ಲಿ ಇದ್ದಾರೆ. ಆದ್ದರಿಂದ ಮಾನ್ಯ ಸದಸ್ಯರೇ ಅವರಾಡಿದ ಮಾತುಗಳನ್ನು ಹಿಂದೆ ತೆಗೆದುಕೊಳ್ಳುವುದು ಒಳ್ಳೆಯದು. ಸಾಹಿತಿಗಳು, ಸಂಗೀತಗಾರರೆಲ್ಲರನ್ನೂ ನಾವು ಅಭಿಮಾನದಿಂದ ಕಾಣಬೇಕಾಗುತ್ತದೆ. ಗೌರವ ಕೊಡಬೇಕಾಗುತ್ತದೆ.

ಛೇರ್ಮನ್.—ಆ ಮಾತುಗಳು ಬೇಡಿ. ರೆಕಾರ್ಡ್‌ನಲ್ಲಿ ಆ ಮಾತುಗಳಿರುವುದು ಬೇಡ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಏನು ತಿಳಿದುಕೊಂಡಿದ್ದಾರೆ ಆ ರೀತಿ ಮಾತು ನಾನು ಹೇಳಿದ್ದಲ್ಲ. ಆದರೆ ಹೇಳಿದ್ದಕ್ಕೆ ಎಡಗೈ ಹೆಬ್ಬೆಟ್ಟು ಒತ್ತಿ ನಾನಿಷ್ಟು ನೀನಿಷ್ಟು ಎಂದು ಲೆಕ್ಕಾಚಾರ ಹಾಕುತ್ತಾರಲ್ಲಾ ಅಂತಹವರ ಬಗ್ಗೆ ಹೇಳಿದೆನೇ ಹೊರತು ಕವಿಗಳಾಗಲೀ ಸಾಹಿತಿಗಳಾಗಲೀ, ಕಲಾವಿದರಾಗಲೀ, ಅವರ ಬಗ್ಗೆ ನಾನು ಹೇಳಿಲ್ಲ.

ಶ್ರೀ ಎಂ. ವೀರಪ ಮೊಯ್ಲಿ.—ಈ ಬಗ್ಗೆ ವಿಚಾರ ಮಾಡಿ. ಇಷ್ಟು ಹಗುರವಾಗಿ ಸಾರಾಸಗಟು ಹೇಳುವುದು ಸರಿಯಲ್ಲ. ಅಲ್ಲಿ ಮನ್ಸೂರ್‌ರವರು ಇದಾರೆ, ಗಂಗೂಬಾಯಿ ಹಾನಗಲ್‌ರವರು ಇದಾರೆ. ಅಂತರ ರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ ಸಾಹಿತಿಗಳ ಬಗ್ಗೆ ಈ ರೀತಿ ಮಾತನಾಡಿದರೆ ತಮ್ಮ ಕನ್ನಡ ಅಭಿಮಾನ ಎಷ್ಟು ಎಂಬುದನ್ನು ಅಳತೆ ಮಾಡಬೇಕಾಗುತ್ತದೆ. ಕನ್ನಡದ ಬಗ್ಗೆ ತಮಗೆ ಅಭಿಮಾನ ಇದೆ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ಅವರ ಬಗ್ಗೆ ಮಾತನಾಡಲಿಲ್ಲ. ನಾನು ಮಾನ್ಯ ವೀರಪ್ಪ ಮೊಯ್ಲಿಯವರ ಬಗ್ಗೆಯಾಗಲೀ, ಮಾನ್ಯ ರಂಗನಾಥ್‌ರವರ ಬಗ್ಗೆಯಾಗಲೀ ಮಾತನಾಡಿದೆನೇ ? ಸಾಮೂಹಿಕವಾಗಿ ಹಿಂದಿನ ಸರ್ಕಾರದ ಬಗ್ಗೆ... ಈಗ ಅವರು ಆಡಳಿತದಲ್ಲಿ ಇಲ್ಲ ಬಿಡಿ. ಪಾಪ ಅವರಿಗೆ ನೋವು ತಗಲೋಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರು ಅರ್ಥ ಸಚಿವರಾಗಿದ್ದರು. ಅವರಿಗೆ ಆ ನೋವು ತಗಲೋಲ್ಲ. "ಚೇಲ" ಎನ್ನತಕ್ಕ ಪದ ಅಷ್ಟು ಅಗೌರವವಾದ ಮಾತು ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ತಪ್ಪು ತಿಳಿದುಕೊಳ್ಳಬಾರದು. ಆದರೆ ನಾನು ಹೇಳತಕ್ಕ "ಚೇಲ" ಎನ್ನತಕ್ಕ ಪದ ಆ ದೃಷ್ಟಿಯಿಂದ ಹೇಳಿದ್ದಲ್ಲ. ಎಂತಹವರ ಬಗ್ಗೆ ನಾನು ಹೇಳುತ್ತಿದ್ದೇನೆ ಎಂದರೆ ವಾಟಾಳ್ ನಾಗರಾಜ್‌ರವರಂಥ ಜನಕ್ಕೆ ಇವರು ರಕ್ಷಣೆ ಕೊಟ್ರಲ್ಲಾ ತಮ್ಮ ಸರ್ಕಾರದಲ್ಲಿ ಇಂತಹವರನ್ನು ಏಜೆಂಟ್ ಆಗಿ ಇಟ್ಕೊಂಡ್ರಲ್ಲಾ—ಅಂತಹವರ ಬಗ್ಗೆ ಹೇಳುತ್ತಿದ್ದೇನೆ. ಇದು ನಿಮಗೆ ಹೇಳಿದ್ದಲ್ಲ. ವಾಟಾಳ್ ನಾಗರಾಜ್‌ರವರಂತಹ ಏಜೆಂಟ್ ಲಕ್ಷಾಂತರ ರೂಪಾಯಿ ಕೊಳ್ಳೆ ಹೊಡೆದ್ರು, ಅಂತಹ ಏಜೆಂಟ್‌ಗೆ ಹೇಳುತ್ತಿದ್ದೇನೆ. ಅವತ್ತು ಬಿ. ಜಯಮ್ಮನವರನ್ನು ಸಂಗೀತ ನಾಟಕ ಅಕೆಡೆಮಿಯ ಅಧ್ಯಕ್ಷರನ್ನಾಗಿ ಹಾಕಿದ್ದೀನಿ ಅಂತ ಹೇಳಿ, ಗೋಕಾಕ್ ವರದಿಗೆ ಸರ್ಕಾರ ಒಪ್ಪಿಕೊಂಡಿರುವಾಗ ಈಗ ರಾಜ್ಯಪಾಲರ ಮುಂದೆ ವಯಸ್ಸಾದವರ್ನ ಕರೆದುಕೊಂಡು ಹೋಗಿ ಸತ್ಯಾಗ್ರಹ ಎಂದು ಮಾಡುತ್ತಿದ್ದಾರಲ್ಲಾ ಅವರಿಗೆ ಮಾನ ಮರ್ಯಾದೆ ಇಲ್ಲವೇ, ನೀವು ಸ್ವಲ್ಪ ಹೇಳಿ ಸ್ವಾಮಿ, ? ಪಾಪ ಗೌರವ ಇರುವವರ ಬಗ್ಗೆ ನಾನು ಹಾಗೆ ಹೇಳುವುದಿಲ್ಲ. ನನಗೂ ಆತ್ಮಗೌರವ ಇದೆ. ನಾನೂ ಕೂಡ ಗುರುಗಳ ಹತ್ರ ಅಷ್ಟೋ ಇಷ್ಟೋ ಕನ್ನಡ ಕಲಿತುಕೊಂಡಿದ್ದೇನೆ.

ಮಾನ್ಯ ಸಭಾಪತಿ.—ತಾವು ತಮ್ಮ ಭಾಷಣ ಮುಗಿಸಿ. 30 ನಿಮಿಷ ತೆಗಿದುಕೊಂಡಿದ್ದೀರಿ.

ಶ್ರೀ ಜಿ. ನಾರಾಯಣ ಕುಮಾರ್.—ಗುಬ್ಬಿ ರಂಗಮಂದಿರವನ್ನು ನವೆಂಬರ್ ಒಳಗೆ ನಿರ್ಮಾಣ ಮಾಡಿ ಅಲ್ಲಿ ಉತ್ತಮ ನಾಟಕಗಳನ್ನು ಪ್ರದರ್ಶನ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ ತಾವು ಮಾಡುತ್ತೀರಿ ಎಂಬ ನಂಬಿಕೆ ನನಗಿದೆ. ನಂತರ ಚೌಡಯ್ಯ ಸ್ಮಾರಕ ಭವನ ಇದೆ. ಚೌಡಯ್ಯ ಸ್ಮಾರಕ ಭವನ ಅಂತ ಹೇಳಿ ಹಿಂದೆ 20 ಲಕ್ಷ ರೂಪಾಯಿ ದರೋಡೆ ಗಿರೋಡೆ ಅಂತಾ ಬಂತು. ಅದು ನಮಗೆ ಬೇಡ. ಈ ಸ್ಮಾರಕವನ್ನು ಸರ್ಕಾರ ವಹಿಸಿಕೊಳ್ಳಬೇಕು. ಇದು ಒಂದು ದೊಡ್ಡ ವ್ಯಾಪಾರೀ ಸಂಸ್ಥೆಯಾಗಿದೆ. ಚೌಡಯ್ಯ ಸ್ಮಾರಕ ಏಕೆ ? ಅವರು ಒಳ್ಳೆಯ ವಿದ್ವಾಂಸರು, ಅವರ ಹೆಸರಿನಲ್ಲಿ ಅದನ್ನು ಕಟ್ಟಿದ್ದಾರೆ. ಅಲ್ಲಿ ದೊಡ್ಡ ವ್ಯಾಪಾರ ನಡೆದಿದೆ. 20 ಲಕ್ಷ ರೂಪಾಯಿ ಬಗ್ಗೆ ಹಿಂದಿನ ಸರ್ಕಾರದಲ್ಲಿ ಅಪಾದನೆ ಬಂತು. 20 ಲಕ್ಷ ರೂಪಾಯಿ ಏಕೆ ಕೊಡಬೇಕೆಂದು ಹೇಳಿ ಆಗ ವಿರೋಧ ಪಕ್ಷದಲ್ಲಿ ಇದ್ದವರು ರಾದ್ಧಾಂತ ಮಾಡಿದರು. ಆ ದುಡ್ಡೆಲ್ಲಾ ಹಂಚಿಕೆ ಆಗೋಯ್ತು ಬಿಡಿ. ಅದು ಯಾರಿಗೆ ಸೇರಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕೆ. ಕೆ. ಮೂರ್ತಿಯವರು ಬಿ.ಡಿ.ಎ. ಸಂಹಾರ ಮಾಡಿದರು. ಲಂಚಗುಳಿತನವನ್ನು ಮಟ್ಟಾ ಹಾಕಿದರು; ಬಡವರ ರೆವಿನ್ಯೂ ಸೈಟ್‌ಗಳನ್ನು ಬಲಿ ಹಾಕಿದರು. ಆ ಭವನಕ್ಕೆ 20 ಲಕ್ಷ ರೂಪಾಯಿ ಕೊಡಲಾಯಿತು. ಆದರೆ ಬಡ ಬೋರೇಗೌಡನ ದುಡ್ಡನ್ನು ಹಿಂದಿನ ಸರ್ಕಾರ ಇದಕ್ಕೆ ಕೊಟ್ಟಿತ್ತು. ಈ ಚೌಡಯ್ಯ ಸ್ಮಾರಕ ಭವನವನ್ನು ಯುವಜನ ಮಂತ್ರಿಗಳು ತಮ್ಮ ಇಲಾಖೆಗೆ ವಹಿಸಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಪ್ರದೇಶದಲ್ಲಿ ಪ್ರೌಢ ಶಾಲೆಗಳು ಕಡಿಮೆ. ನಮ್ಮ ಬಿನ್ನಿಪೇಟೆ ಹಿಂದುಳಿದ ಪ್ರದೇಶ. ಇದು ಕೂಲಿಗಾರರ ಕ್ಷೇತ್ರ. ಇಲ್ಲಿ ಪ್ರೌಢ ಶಾಲೆಗಳು ಇಲ್ಲ, ಮಾಧ್ಯಮಿಕ ಶಾಲೆಗಳು ಇಲ್ಲ. ನಮಗೆ ಸರ್ಕಾರೀ ಶಾಲೆಗಳು ಬೇಕಾಗಿವೆ. ನಮ್ಮ ಪ್ರದೇಶದಲ್ಲಿ ಇಂಗ್ಲೀಷ್ ಶಾಲೆಗಳು ಅಧಿಕವಾಗಿವೆ. ಇಲ್ಲಿ ಇಂಗ್ಲೀಷ್ ಶಾಲೆಗಳ

ಅಧಿಕವಾಗಿದ್ದು ಅಲ್ಲಿನ ಕನ್ನಡಿಗರಾಗಿರತಕ್ಕ ಕೂಲಿಗಾರರು ಇಂಗ್ಲೀಷ್ ಶಾಲೆಗಳವರು ಕೇಳುವಷ್ಟು ಚಂದಾ ಕೊಟ್ಟು ತಮ್ಮ ಮಕ್ಕಳನ್ನು ಆ ಶಾಲೆಗಳಿಗೆ ಸೇರಿಸುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ನಮ್ಮ ಕ್ಷೇತ್ರಕ್ಕೆ ಕನ್ನಡದ ಪ್ರೌಢ, ಮಾಧ್ಯಮಿಕ, ನರ್ಸರಿ ಶಾಲೆಗಳು, ಪ್ರಾಥಮಿಕ ಶಾಲೆಗಳು ಮತ್ತು ಶಿಶು ವಿಹಾರಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದಕ್ಕೆ ಮಾನ್ಯ ವಿದ್ಯಾ ಮಂತ್ರಿಗಳು ಅವಕಾಶ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ನಮ್ಮ ಒಂದು ಬಡವರ ಕ್ಷೇತ್ರವಾದ ಬಿನ್ನಿಪೇಟೆಯಲ್ಲಿ ನಮ್ಮ ಸರ್ಕಾರಿ ಐ.ಎ.ಎಸ್. ಅಧಿಕಾರಿ ಗಳು ಸೇರಿ ಒಂದು ದೊಡ್ಡ ರಾದ್ಧಾಂತ ಮಾಡಿ ಒಂದು ಇಸ್ಪೀಟ್ ಕ್ಲಬ್‌ನ್ನು ತೆಗೆದಿದ್ದಾರೆ. ಇದನ್ನು ವಿದ್ಯಾ ಇಲಾಖೆ ಪ್ರತಿಭಟಿಸಿ ಇದನ್ನು ಕೂಡಲೇ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪರವಾನಗಿ ಇಲ್ಲದೇ ಇದ್ದಕ್ಕಿದ್ದ ಹಾಗೆ ಈ ಐ.ಎ.ಎಸ್. ದೊರೆಗಳು ಸೇರಿಕೊಂಡು ಇಸ್ಪೀಟ್ ಕ್ಲಬ್‌ನ್ನು ಮಾಡಿದ್ದಾರೆ. ಇದನ್ನು ನಮ್ಮ ಪ್ರದೇಶ ದಲ್ಲಿ ತಪ್ಪಿಸದೇ ಹೋದ್ರೆ ಅವರ ವಿರುದ್ಧ ಧರಣಿ ಮತ್ತು ಹೋರಾಟ ಮಾಡಬೇಕಾಗುತ್ತದೆ ಹಾಗೂ ಪ್ರತಿಭಟಿಸಬೇಕಾಗುತ್ತದೆ. ಅಲ್ಲಿ ಮರ್ಯಾದಸ್ಥರು ಮತ್ತು ಸಾಮಾನ್ಯ ನಾಗರೀಕರು ವಾಸ ಮಾಡುತ್ತಿದ್ದಾರೆ ಈ ಬಗ್ಗೆ ಬಹಳ ಕಳಕಳಿಯನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಸಭಾಪತಿ.—35 ನಿಮಿಷಗಳಾದವು. ತಾವು ಬೇರೆ ಬೇಡಿಕೆಗಳ ಬಗ್ಗೆ ಮಾತನಾಡುವಿರಂತೆ. ತಾವು ಇನ್ನು 1 ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಜಿ. ನಾರಾಯಣ ಕುಮಾರ್.—ಆದುದರಿಂದ ಇವತ್ತು ಕರ್ನಾಟಕದ ನಮ್ಮ ಸರ್ಕಾರ ಪಠ್ಯ ಪುಸ್ತಕಗಳಲ್ಲಿ ಕನ್ನಡ ಚರಿತ್ರೆ ಬಗ್ಗೆಯಾಗಲೀ, ಕನ್ನಡ ನಾಡು ನುಡಿಗೋಸ್ಕರ ಹೋರಾಟ ಮಾಡಿದ ಜನರ ಬಗ್ಗೆ ಮತ್ತು ನಮ್ಮ ಗತ ವೈಭವ ಇವತ್ತು ಏನು ಇದೆ ಅದನ್ನು ಸಾರಿರತಕ್ಕ ವ್ಯಕ್ತಿಗಳ ಬಗ್ಗೆಯಾಗಲೀ ಏನೂ ಇಲ್ಲ....

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಈ ಸದನದಲ್ಲಿ ಏನು ಒಂದು ವರ್ಗದ ಜನರು ಇಲ್ಲ ಎಂದು ಹೇಳಿ ನೇರವಾಗಿ ಅವರ ಮೇಲೆ ಆಪಾದನೆ ಮಾಡಿದರೆ ಹೇಗೆ? ನಾವು ಸಮಾಜದಲ್ಲಿ ನಡೆದುಕೊಳ್ಳುವುದು ಹೇಗೆ? ನಾವು ಇಲ್ಲಿ ಶಾಸಕರಾಗಿ ಬಂದಿದ್ದೇವೆ. ಸಮಾಜದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಬೇಕಾದ ಐ.ಎ.ಎಸ್. ಅಧಿಕಾರಿಗಳು ಇಸ್ಪೀಟ್ ಕ್ಲಬ್ ಮಾಡಿದ್ದಾರೆಂದು ಸಾರಾಸಗಟಾಗಿ ಹೇಳುವುದು ಈ ಸದನಕ್ಕೆ ಭೂಷಣ ತರತಕ್ಕದ್ದಲ್ಲ. ಸದನದ ಘನತೆಗೆ ಗೌರವ ತರತಕ್ಕದ್ದಲ್ಲ. ಇಲ್ಲಿ ಡಿಫೆಂಡ್ ಮಾಡುವುದಕ್ಕೆ ಅವರು ಇಲ್ಲ. ಅವರ ಬಗ್ಗೆ ಟೀಕೆ ಮಾಡುವುದಿದ್ದರೆ ನಿಯಮದ ಪ್ರಕಾರ ನೋಟೀಸ್ ಕೊಟ್ಟು ಅವರ ಚರ್ಚೆ ಮಾಡಲಿ. ಆದ್ದರಿಂದ ಇದು ಕಡತದಲ್ಲಿ ಹೋಗಬಾರದು. ಇದು ಹೋದರೆ ಚೆನ್ನಾಗಿರುವುದಿಲ್ಲವೆಂದು ಸದನಕ್ಕೆ ತಿಳಿಸಬಯಸುತ್ತೇನೆ.

ಮಾನ್ಯ ಸಭಾಪತಿ.—ನಾರಾಯಣ ಕುಮಾರ್‌ರವರೇ ನಿರ್ದಿಷ್ಟವಾದ ದಾಖಲೆಗಳು ಇದ್ದರೆ ಕೊಡಿ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ಹೇಳಿದ್ದು, ನಾಗರೀಕರು ವಾಸ ಮಾಡತಕ್ಕ ಸ್ಥಳದಲ್ಲಿ, ಸುತ್ತ ಮುತ್ತ ವಿದ್ಯಾ ಸಂಸ್ಥೆಗಳು ಇರತಕ್ಕ ಸ್ಥಳದಲ್ಲಿ ನಮ್ಮ ಬಡ ರೈತ ಮನೆ ಕಟ್ಟಿಕೊಂಡರೆ ಮರುದಿನ ನಗರಸಭೆ ಯವರು ಗುದ್ದಲಿ, ಪಿಕಾಸಿ ತೆಗೆದುಕೊಂಡು ಬಂದು ನೆಲಸಮ ಮಾಡುತ್ತಾರೆ. ಹಿಂದಿನ ಸರ್ಕಾರದಲ್ಲಿ ಒಂದು ಸರ್ಕಸ್ ದುರಂತ ನಡೆಯಿತು. ಅದೇ ರೀತಿಯ ದುರಂತ ಈಗಲೂ ನಡೆದರೆ ಏನು ಮಾಡುತ್ತೀರಿ? *** ನಮ್ಮ ಕಡೆ ಬಡ ಹೆಣ್ಣು ಮಕ್ಕಳು ರಸ್ತೆಯಲ್ಲಿ ಓಡಾಡುವಾಗ ಕುಡಿದ ಅಮಲಿನಲ್ಲಿ ಅವರ್‍ನ ಹಿಡಿದುಕೊಂಡರೆ ಯಾರು ಜವಾಬ್ದಾರರು? ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಜವಾಬ್ದಾರಿ ವಹಿಸಿಕೊಂಡು ಮಾತನಾಡಬೇಕೇಹೊರತು ವಿರೋಧ ಮಾಡತಕ್ಕದ್ದಲ್ಲ.

ಮಾನ್ಯ ಸಭಾಪತಿ.—ಆಪಾದನೆ ನಿರ್ದಿಷ್ಟವಾಗಿರಬೇಕು. ಅದಕ್ಕೆ ಬೇರೆ ಒಂದು ತೆಗೆದುಕೊಂಡು ಬನ್ನಿ.

ಶ್ರೀ ಜಿ. ನಾರಾಯಣ ಕುಮಾರ್.—ಇದು ನಿರ್ದಿಷ್ಟವಾಗಿದೆ. ತಾವು ಈಗಲೇ ಬನ್ನಿ ಹೋಗೋಣ. ಮಾನ್ಯ ವಿರೋಧ ಪಕ್ಷದ ನಾಯಕರೂ ಬರಲಿ. ಇದ್ದಕ್ಕಿದ್ದ ಹಾಗೆ ದೊಡ್ಡ ಪೆಂಡಾಲ್ ಹಾಕಿಕೊಂಡು ರಾತ್ರೋ ರಾತ್ರಿ ಕುಳಿತುಕೊಂಡಿದ್ದಾರೆ. ಇದು ನಾಗರೀಕರ ಗೌರವದ ಪ್ರಶ್ನೆಯಾಗಿದೆ.

MR. CHAIRMAN :—It will not go on record.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ವೀರಪ್ಪ ಮೊಯ್ಲಿಯವರ ಪ್ರದೇಶದಲ್ಲಿ ಆಗಿದ್ದರೆ ಅವರು ಬಿಡುತ್ತಿರಲಿಲ್ಲ.

ಮಾನ್ಯ ಸಭಾಪತಿ.—ಇಲ್ಲ. ಅದು ಹಾಗೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಗಲೇ ಅವರು ಸಾಹಿತಿಗಳನ್ನು ಚೇಲಾಗಳು ಎಂದು ಹೇಳಿದರು. ಈಗ ಐ.ಎ.ಎಸ್. ಅಧಿಕಾರಿಗಳು ಇಸ್ಪೀಟ್ ಆಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಜಿ. ನಾರಾಯಣ ಕುಮಾರ್.—ನಿಮ್ಮ ಸರ್ಕಾರಕ್ಕೆ ಹೇಳಿದ್ದು. ಸಾಹಿತಿಗಳನ್ನು ನಾವು ಯಾವತ್ತೂ ಚೇಲಾಗಳು ಎಂದು ಹೇಳಿಲ್ಲ. ಸಾಹಿತಿಗಳಿಗೆ ಆತ್ಮಗೌರವ ಇರುತ್ತದೆ. ನಾನು ಆ ಬಗ್ಗೆ ಹೇಳಲಿಲ್ಲ.

(ಗೊಂದಲ)

** Expunged as ordered by The Chair.

ಮಾನ್ಯ ಸಭಾಪತಿ.—ಜನರಲ್ ರಿಮಾರ್ಕ್ಸ್ ಬೇಡ. ಬೇಡಿಕೆ ಬಗ್ಗೆ ಮಾತನಾಡಿ ಸ್ವಾಮಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಯುವಜನ ಮಂತ್ರಿಗಳು ಇಲ್ಲಿ ಇದ್ದಾರೆ. ಅಲ್ಲಿ ಕ್ಲಬ್ ಇದ್ದರೆ ಆ ಬಗ್ಗೆ ಇವರು ಆಕ್ಷೇಪಣೆ ಎತ್ತಿದರೆ ಅದನ್ನು ವಿಚಾರಿಸುತ್ತಾರೆ. ಆದರೆ ಸಾರ್ವತ್ರಿಕವಾಗಿ ಐ.ಎ.ಎಸ್. ಅಧಿಕಾರಿಗಳೆಲ್ಲರೂ ಅಲ್ಲಿಗೆ ಬರುತ್ತಾರೆನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ದಯಮಾಡಿ ಅವರು ಆ ರೀತಿ ಮಾತನಾಡಬಾರದು.

ಮಾನ್ಯ ಸಭಾಪತಿ.—ಅದನ್ನು ಕಡತದಿಂದ ತೆಗೆದುಹಾಕಿಬಿಡಿ. ಅದನ್ನು ಕಡತದಿಂದ ತೆಗೆದುಹಾಕಿಬಿಟ್ಟಿದೆ. ಮಾನ್ಯ ನಾರಾಯಣ ಕುಮಾರ್‌ರವರೇ ದಯವಿಟ್ಟು ತಾವು ತಮ್ಮ ಭಾಷಣವನ್ನು ಮುಕ್ತಾಯಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.— ಸ್ವಾಮಿ,ಬಿನ್ನಿಪೇಟೆ ಕ್ಷೇತ್ರದ ಹೆಣ್ಣು ಮಕ್ಕಳು ಬಂದು ಗಲಾಟೆ ಮಾಡುತ್ತಿರುತ್ತಾರೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ನೀತಿಗಳನ್ನು ನಿರೂಪಿಸಿದ್ದೀರಿ. ಶಾಲೆಗಳ ಪಕ್ಕದಲ್ಲಿ ಹೆಂಡದ ಗುಡಿಸಲುಗಳು ಇರಬಾರದು, ಇಸ್ಪೀಟ್ ಕ್ಲಬ್ ಇರಬಾರದು, ಆದರೆ, ನಮ್ಮ ಕ್ಷೇತ್ರದಲ್ಲಿ ಶಾಲೆಗಳ ಪಕ್ಕದಲ್ಲಿಯೇ ಹೆಂಡದಂಗಡಿ ಇವೆ. ಆದ್ದರಿಂದ ಮಕ್ಕಳಿಗೆ ಬೋಧಿಸುವ ಪಠ್ಯಪುಸ್ತಕಗಳಲ್ಲಿ ಕರ್ನಾಟಕ ಚರಿತ್ರೆಯ ಬಗ್ಗೆ, ಕರ್ನಾಟಕದ ಗತ ವೈಭವದ ಬಗ್ಗೆ, ಕವಿ ಪುಂಗವರ ಬಗ್ಗೆ, ಮತ್ತು ಚಕ್ರವರ್ತಿಗಳ ಬಗ್ಗೆ ಪರಿಚಯವಿರುವ ಪಠ್ಯಪುಸ್ತಕಗಳನ್ನು ಇಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಹನುಮಂತರಾವ್ ದೇಸಾಯಿ (ಅಫಜಲ್‌ಪುರ).—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಶಿಕ್ಷಣ ಇಲಾಖೆಯ ಬೇಡಿಕೆಗಳನ್ನು ಕುರಿತು ಅನೇಕ ಜನ ಹಿರಿಯ ಸದಸ್ಯರುಗಳು ಹಾಗೂ ಕಿರಿಯ ಸದಸ್ಯರುಗಳು ತಮ್ಮ ಸಲಹೆಗಳನ್ನು ವ್ಯಕ್ತಪಡಿಸಿದ್ದಾರೆ. ಮಾತನಾಡಿದವರೆಲ್ಲಾ ಶಾಲೆಗಳ ದುಃಸ್ಥಿತಿ, ಶಾಲೆಗಳಲ್ಲಿ ನಡೆಯುತಕ್ಕ ಅವ್ಯವಹಾರಗಳ ಬಗ್ಗೆ, ಕಟ್ಟಡಗಳ ಕೊರತೆ, ಶಿಕ್ಷಕರ ಕೊರತೆಯ ಬಗ್ಗೆ ಸರ್ವೇಸಾಮಾನ್ಯವಾಗಿ ಕರ್ನಾಟಕದ ಮೂಲೆ ಮೂಲೆಯಿಂದ ಕೇಳಿಬರುತ್ತಿರುವ ಕೂಗಾಗಿದೆ. ಇದನ್ನು ನಾನು ಕೂಡ ಒಪ್ಪುತ್ತೇನೆ. ಈ ಸದನದ ಅಮೂಲ್ಯವಾದಂಥ ಸಮಯವನ್ನು ಮಾತನಾಡಿರತಕ್ಕ ಸದಸ್ಯರುಗಳು ಹೇಳಿರತಕ್ಕ ವಿಚಾರಗಳನ್ನು ಮತ್ತೆ ಹೇಳುವುದಕ್ಕೆ ತೆಗೆದು ಕೊಳ್ಳುವುದಿಲ್ಲ. ಇಂದಿನ ಶಿಕ್ಷಣ ಪದ್ಧತಿ ನಿಜವಾಗಿಯೂ ಬದಲಾವಣೆಯಾಗಬೇಕು. ಇಂದಿನ ಶಿಕ್ಷಣ ಪದ್ಧತಿಯಿಂದ ಸಮಾಜದಲ್ಲಿರತಕ್ಕ ದುರ್ಬಲ ವರ್ಗದವರಿಗೆ, ಹಳ್ಳಿಯಲ್ಲಿರತಕ್ಕ ಕೃಷಿ ಕಾರ್ಮಿಕರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಇಂದಿನ ಶಿಕ್ಷಣ ಪದ್ಧತಿಯಿಂದ ವೈದ್ಯರ ಮಗ ವೈದ್ಯನಾಗುತ್ತಾನೆ, ವಕೀಲರ ಮಗ ವಕೀಲನಾಗುತ್ತಾನೆ, ಇಂಜಿನಿಯರ್ ಮಕ್ಕಳು ಇಂಜಿನಿಯರ್ ಆಗುತ್ತಾರೆ. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿ ಹೊಲದಲ್ಲಿ ಕೆಲಸ ಮಾಡುವಂಥ ರೈತನ ಮಕ್ಕಳು ವೈದ್ಯರಾಗಬೇಡವೇ ? ಇಂಜಿನಿಯರ್‌ಗಳು ಆಗಬಾರದೇ ? ಅವರು ಉದ್ಯೋಗದಲ್ಲಿ ಹೋಗಬೇಡವೇ ? ಅಂಥ ಒಂದು ಅವಕಾಶವನ್ನು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಕಲ್ಪಿಸಿ ಕೊಟ್ಟಿಲ್ಲ. ಇವತ್ತಿನ ಪದ್ಧತಿಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದವರಿಗೆ ಮಾತ್ರ ಅಂದರೆ ಮೆರಿಟ್ ಮೇಲೆ ಬಂದಂಥ ಮಕ್ಕಳಿಗೆ ಮಾತ್ರ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಅವಕಾಶ ಇದೆ. ಹಳ್ಳಿಯಲ್ಲಿರತಕ್ಕಂಥ ಬಡ ರೈತನ ಮಕ್ಕಳಿಗೆ, ಕೂಲಿಕಾರರ ಮಕ್ಕಳಿಗೆ, ಹಿಂದುಳಿದ ವರ್ಗದವರ ಮಕ್ಕಳಿಗೆ ಅವಕಾಶ ಸಿಗುವುದಿಲ್ಲ. ಹಳ್ಳಿಗಾಡಿನ ಮಕ್ಕಳು ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುವಂಥ ಪರಿಸರ ಅಲ್ಲಿ ಇಲ್ಲ. ಸವಲತ್ತು ಇಲ್ಲ, ಅವಕಾಶ ಕೂಡ ಇಲ್ಲ. ಪಟ್ಟಣಗಳಲ್ಲಿ ದುಡ್ಡು ಕೊಟ್ಟು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. 80 ರಿಂದ 90 ಮತ್ತು 98 ಪರ್ಸೆಂಟ್ ಹೇಗೆ ಬರುತ್ತೆ ? ಜೊತೆಗೆ 2–3 ಲಕ್ಷ ರೂಪಾಯಿ ಕ್ಯಾಪಿಟೇಷನ್ ಕಟ್ಟಿ, ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಪಡೆಯುತ್ತಾರೆ. ಆದರೆ, ಹಳ್ಳಿಗಾಡಿನ ಮಕ್ಕಳಿಗೆ ಆ ಚೈತನ್ಯ ಇಲ್ಲ. ಅದಕ್ಕೋಸ್ಕರ ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ, ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೈತರ, ಕೂಲಿ ಕಾರ್ಮಿಕರ ಹಾಗೂ ಹಿಂದುಳಿದವರ ಮಕ್ಕಳಿಗೆ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ಕಾಯ್ದಿರಿಸಬೇಕೆಂದು ಹೇಳುತ್ತೇನೆ.

ಇನ್ನು ಶಿಕ್ಷಕರ ನೇಮಕಾತಿ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂದರ್ಶನಕ್ಕೆ ಬಂದಿರುವಂಥ ಅಭ್ಯರ್ಥಿಗಳು ಯಾವ ಯಾವ ವಿಷಯದಲ್ಲಿ ಪ್ರಭುತ್ವ ಹೊಂದಿರುತ್ತಾರೋ ಅಂಥವರನ್ನು ನೇಮಕ ಮಾಡಿಕೊಳ್ಳದೇ, ಯಾವ ಊರು, ಯಾವ ಜಿಲ್ಲೆ ಎಂದು ಕೇಳಿ ನೇಮಕ ಮಾಡಿಕೊಳ್ಳುತ್ತಾರೆ. ಅವರಿಗೆ ಯಾವ ವಿಷಯದಲ್ಲಿ ಆಳವಾದ ಜ್ಞಾನ ಇದೆ, ಪ್ರಭುತ್ವ ಪಡೆದಿದ್ದಾರೆನ್ನುವುದನ್ನು ವಿಚಾರ ಮಾಡುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಎರಡು ವರ್ಷಗಳ ಹಿಂದೆ ಅಫಜಲ್‌ಪುರ ಪ್ರಾಥಮಿಕ ಶಾಲೆಗೆ ಒಬ್ಬರು ಇನ್‌ಸ್ಪೆಕ್ಟರು ಬಂದು, ಮಾಸ್ತರು ತರಗತಿಯಲ್ಲಿ ಪಾಠ ಹೇಳುತ್ತಿದ್ದ ಸಂಧರ್ಭದಲ್ಲಿ ಇನ್‌ಸ್ಪೆಕ್ಟರು ಹೋಗಿ "ಶಿವಧನಸ್ಸು" ಮುರಿದವರು ಯಾರು ಎಂದು ಒಬ್ಬ ವಿದ್ಯಾರ್ಥಿಯನ್ನು ಕೇಳಿದರು. ಆತ ನಾನು ಮುರಿದಿಲ್ಲವೆಂದು ಹೇಳಿದ. ಮತ್ತೊಬ್ಬ ವಿದ್ಯಾರ್ಥಿಯನ್ನು ಕೇಳಿದರು, ನಾನು ಕಳೆದ ಎಂಟು ದಿವಸದಿಂದ ಶಾಲೆಗೆ ಬಂದಿಲ್ಲ, ನಾನು ಮುರಿದಿಲ್ಲವೆಂದ; ಕೊನೆಗೆ ತರಗತಿಯ ಉಪಾಧ್ಯಾಯರನ್ನೇ ಕೇಳಿದರು. ಅವರು

---

* ಈ ಚಿಹ್ನೆ ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮ್ಮ ಕೆಲಸದಲ್ಲಿ ನಾವು ಇರುತ್ತೇವೆ, ಧನಸ್ಸು ಯಾರೂ ಮುರಿದಿಲ್ಲವೆಂದರು. ಕೊನೆಗೆ ಹೆಡ್ ಮಾಸ್ತರನ್ನು ಕೇಳಿದರು. ಅವರು ಅದಕ್ಕೆ ನಮ್ಮ ಸ್ಕೂಲಿನ ಹುಡುಗರು ಮುರಿದಿದ್ದರೆ ಅದರ ಲುಕ್ಸಾನು ತುಂಬಿ ಕೊಡುತ್ತೇವೆಂದರು. ರಾಮಾಯಣದ ಉದಾಹರಣೆಯನ್ನು ಕೂಡ ಹೇಳಿಕೊಡುವಂಥ ಪ್ರಭುತ್ವ ಅವರಿಗಿರುವುದಿಲ್ಲ. ಅಂಥ ಶಿಕ್ಷಕರು ವಿದ್ಯಾಭ್ಯಾಸವನ್ನು ಹೇಳಿಕೊಡುತ್ತಿದ್ದಾರೆ. ಈ ವಿಚಾರದಲ್ಲಿಯೂ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಗಡಿನಾಡು ಕನ್ನಡಿಗರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕಲ್ಬುರ್ಗಿ ಜಿಲ್ಲೆಯ ಗಡಿಯಲ್ಲಿ ಅಕ್ಕಲಕೋಟು ತಾಲ್ಲೂಕು ಇದೆ. ದಕ್ಷಿಣ ಸೊಲ್ಲಾಪುರ ತಾಲ್ಲೂಕುಗಳಲ್ಲಿ 100ಕ್ಕೆ 90 ರಷ್ಟು ಜನ ಕನ್ನಡ ಮಾತನಾಡುವವರಿದ್ದಾರೆ. ಈ ಎರಡೂ ತಾಲ್ಲೂಕುಗಳು ಮಹಾರಾಷ್ಟ್ರದಲ್ಲಿವೆ. ನಮ್ಮ ಸರ್ಕಾರದವರು ಗಡಿಯಲ್ಲಿರತಕ್ಕ ಜನಗಳಿಗೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟಿದ್ದಾರೆ. ಮರಾಠಿ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ, ಮಹಾರಾಷ್ಟ್ರ ಸರ್ಕಾರದವರು ಕನ್ನಡ ಕಲಿಯಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಹೈಸ್ಕೂಲುಗಳನ್ನು ತೆಗೆಯುವುದಕ್ಕೆ ಪರವಾನಗಿ ಕೊಟ್ಟಿಲ್ಲ. ಆಜ್ಞೆಯನ್ನು ಹೊರಡಿಸಿ, ಶಾಲೆಗಳನ್ನು ಮುಚ್ಚಿಸಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರದವರು ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ವಿದ್ಯಾಮಂತ್ರಿಗಳು ಬಹಳ ಸಮರ್ಥರಿದ್ದಾರೆ. ಮೊದಲಿನಿಂದಲೂ ಈ ಖಾತೆಯಲ್ಲಿ ಬಂದಂಥ ಭ್ರಷ್ಟಾಚಾರ, ಅವ್ಯವಹಾರ ಹೋಗಲಾಡಿಸುವ ಸಲುವಾಗಿ ಹಗಲು ರಾತ್ರಿ ಪ್ರಯತ್ನ ಮಾಡುತ್ತಿದ್ದಾರೆ. ಇದು ಒಬ್ಬರು ಮಾಡತಕ್ಕ ಕೆಲಸ ಅಲ್ಲ. ಈ ಸದನದಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರೂ ಅದಕ್ಕೆ ಒಂದು ಬೆಂಬಲ ಕೊಟ್ಟು, ಲೋಪದೋಷಗಳೇನಾದರೂ ಇದ್ದರೆ ಅವುಗಳನ್ನು ಸರ್ಕಾರದ ಗಮನಕ್ಕೆ ತಂದು, ನಾವೆಲ್ಲರೂ ಕೂಡಿ, ಈ ಶಿಕ್ಷಣದ ಸುಧಾರಣೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು, ಇದುವರೆಗೂ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇವೊತ್ತು ವಿದ್ಯಾ ಬೇಡಿಕೆಯ ಬಗ್ಗೆ ಉತ್ತರ ಆಗಬೇಕಾಗಿದೆ. ಆದ್ದರಿಂದ ಈ ಸಭೆ ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕೆಂದು ತೀರ್ಮಾನ ಮಾಡಬೇಕು.

ಒಬ್ಬ ಸದಸ್ಯರು.—ಅಧ್ಯಕ್ಷರೇ, ಪ್ರತಿಯೊಬ್ಬ ಸದಸ್ಯರೂ 30 ನಿಮಿಷ, 40 ನಿಮಿಷ ಮಾತನಾಡಿದರೆ ಹೇಗೆ ತೀರ್ಮಾನ ಮಾಡಲಿಕ್ಕೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾವು ಬೆಳಿಗ್ಗೆ 10 ಗಂಟೆಯಿಂದ ಕುಳಿತುಕೊಂಡಿದ್ದೇವೆ. ಮಾನ್ಯ ಮಂತ್ರಿಗಳು ಸೋಮವಾರ ಉತ್ತರ ಕೊಡಲಿ.

ಅಧ್ಯಕ್ಷರು.—ಈಗ ಕಾಂಗ್ರೆಸ್ (ಐ) ಅವರು 214 ನಿಮಿಷ ತೆಗೆದುಕೊಂಡಿದ್ದಾರೆ, ಜನತಾ ಪಕ್ಷದವರು 117 ನಿಮಿಷ ತೆಗೆದುಕೊಂಡಿದ್ದಾರೆ, ಬಿ.ಜೆ.ಪಿ. ಯವರು 55 ನಿಮಿಷ ತೆಗೆದುಕೊಂಡಿದ್ದಾರೆ, ಸಿ.ಪಿ.ಐ.ನವರು 61 ನಿಮಿಷ ತೆಗೆದುಕೊಂಡಿದ್ದಾರೆ. ಇಂಡಿಪೆಂಡೆಂಟ್ಸ್‌ನವರು 45 ನಿಮಿಷ ತೆಗೆದುಕೊಂಡಿದ್ದಾರೆ. ಸಿ.ಪಿ.ಐ.(ಎಮ್) ಅವರು 19 ನಿಮಿಷ ತೆಗೆದುಕೊಂಡಿದ್ದಾರೆ. ಈ ಸದನ ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕೆಂದು ತೀರ್ಮಾನ ಮಾಡಿದರೆ, ಅಷ್ಟು ಸುದೀರ್ಘವಾಗಿ ಮಾತನಾಡಲಿಕ್ಕೆ ಅವಕಾಶ ಇದೆ. ಒಟ್ಟಿನಲ್ಲಿ ಇವತ್ತು ಇದು ಮುಗಿಯಬೇಕು.

ಒಬ್ಬ ಸದಸ್ಯರು.—ಅಧ್ಯಕ್ಷರೇ, ನಾವು ಗುಲ್ಬರ್ಗ, ರಾಯಚೂರು ಕಡೆಯವರು ಮಾತನಾಡಿಲ್ಲ.

ಅಧ್ಯಕ್ಷರು.—ಈಗ ಧಾರವಾಡ, ಗುಲ್ಬರ್ಗ, ಬಿಜಾಪುರ, ರಾಯಚೂರು ಎಂದು ನಿರ್ಧಾರ ಮಾಡಲಿಕ್ಕೆ ಆಗುವುದಿಲ್ಲ. ಈಗ ನಾನು ಮಂತ್ರಿಗಳನ್ನು ಉತ್ತರ ಹೇಳಲಿಕ್ಕೆ ಕರೆಯಬೇಕಾಗುತ್ತದೆ.

ಶ್ರೀ ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ನಾನು ಕಳೆದ ನಾಲ್ಕು ಬೇಡಿಕೆಗಳ ಮೇಲೆ ಮಾತನಾಡಬೇಕೆಂದು ಸಂಜೆ 7 ಗಂಟೆಯವರೆಗೂ ಕಾದು ಕುಳಿತು ನಿರಾಶೆಯಾಗಿ ಹೋಗುತ್ತಿದ್ದೇನೆ.

ಅಧ್ಯಕ್ಷರು.—ಆ ವಿಚಾರ ತಮ್ಮ ನಾಯಕರ ಕಡೆ ಹೇಳಬೇಕು.

ಶ್ರೀ ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು, ಸಭಾನಾಯಕರು, ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿರೋಧ ಪಕ್ಷದ ಸಚೇತಕರು, ಇವರ್ಯಾರೂ ಇರುವುದಿಲ್ಲ. ಅಂದರೆ ಈ ಸಭೆಯಲ್ಲಿ ಯಾರು ಇದನ್ನು ನಿಯಂತ್ರಿಸಬೇಕು.

ಅಧ್ಯಕ್ಷರು.—ನಿಮ್ಮ ನಾಯಕರನ್ನು ನೀವೇ ನಿಯಂತ್ರಿಸಬೇಕು.

ಶ್ರೀ ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ನಾವು ಹಿಂದೆ ಕುಳಿತಿರತಕ್ಕ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಎಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ನನ್ನನ್ನು ಕೇಳುವ ಬದಲು ತಮ್ಮ ನಾಯಕರನ್ನು ಕೇಳಿದರೆ ಸರಿಹೋಗುತ್ತದೆ. ಈಗ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಜೀವರಾಜ್ ಆಳ್ವ (ಕ್ರೀಡಾ ಮತ್ತು ಯುವಜನ ಸೇವಾ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುವಾಗ ಇಲ್ಲಿ ನಾನು ಇರಲಿಲ್ಲ. ಡೆಲ್ಲಿಯಲ್ಲಿ ಭಾರತದ ಬೇರೆ ಬೇರೆ ರಾಜ್ಯದ ಕ್ರೀಡಾ ಮಂತ್ರಿಗಳ ಒಂದು ಪರಿಷತ್ತು ಸೇರಿತ್ತು. ಅದರಲ್ಲಿ ಒಂದು

ಮುಖ್ಯವಾದ ವಿಷಯ ಚರ್ಚೆಗೆ ಬಂದಿದ್ದರಿಂದ. ಮಾನ್ಯ ಮುಖ್ಯಮಂತ್ರಿಗಳ ಅಪ್ಪಣೆ ಮೇರೆಗೆ ಮತ್ತು ತಮ್ಮ ಅಪ್ಪಣೆ ಪಡೆದು ಡೆಲ್ಲಿಗೆ ಹೋಗಿದ್ದೆ. ಆ ಕಾರಣದಿಂದ ನಾನು ನಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿ ಮಾಡಲಿಕ್ಕೆ ಆಗಲಿಲ್ಲ. ನನ್ನ ಪರವಾಗಿ ವಿದ್ಯಾಮಂತ್ರಿಗಳು ಮಾಡಿದರು. ಆದ್ದರಿಂದ ಇದಕ್ಕೆ ತಮ್ಮ ಕ್ಷಮೆಯನ್ನು ಮತ್ತು ಸಭೆಯ ಕ್ಷಮೆಯನ್ನು ಕೇಳುತ್ತೇನೆ. ಡೆಲ್ಲಿಗೆ ಹೋದ ವಿಚಾರದಲ್ಲಿ ಒಂದು ಮುಖ್ಯವಾದ ಅಂಶವೇನೆಂದರೆ, ಈ ಸ್ಪೋರ್ಟ್ಸ್ ಎನ್ನುವ ವಿಷಯವನ್ನು ಸ್ಟೇಟ್ ಸಬ್ಜೆಕ್ಟ್‌ನಿಂದ ತೆಗೆದು ಕನ್‌ಕರೆನ್ಸ್ ಲಿಸ್ಟ್‌ಗೆ ಹಾಕುವ ಒಂದು ಪ್ರಯತ್ನವನ್ನು ಮಾನ್ಯ ಕ್ರೀಡಾ ಮಂತ್ರಿಗಳಾದ ಬೂಟಾಸಿಂಗ್ ಅವರು ಮಾಡಿದರು. ಅದು ಅಜೆಂಡಾದಲ್ಲಿ ಇಲ್ಲದಿದ್ದರೂ ಕೂಡ ಅವರ ಪ್ರಿಯಾಂಬಲ್. ಪ್ರಿಲಿಮಿನರಿ ಟೆಕ್ಸ್ಟನಲ್ಲಿ ಅವರು ರಾಜ್ಯದ ಕ್ರೀಡಾ ಮಂತ್ರಿಗಳ ಆಲೋಚನೆ ಕೇಳುವುದನ್ನು ಮಾಡಿದರು. ಕರ್ನಾಟಕದ ಪರವಾಗಿ ನಾವು ಮಾತನಾಡಿದಾಗ ಈ ಒಂದು ಆಲೋಚನೆಯನ್ನು ಕೇಂದ್ರ ಸರ್ಕಾರದವರು ಕೈಬಿಡಬೇಕು. ಇದು ಸ್ಟೇಟ್‌ಲಿಸ್ಟ್‌ನಲ್ಲಿಯೇ ಇರಬೇಕು. ಕನ್‌ಕರೆನ್ಸ್ ಲಿಸ್ಟ್‌ಗೆ ಸೇರಿಸಬಾರದು ಎಂದು ಪ್ರತಿಪಾದನೆ ಮಾಡಿದೆವು. ಅವರು ಮಾಡಿದ ಪ್ರತಿಪಾದನೆ ನಾವು ಸರ್ಕಾರದ ಪರವಾಗಿ ವಿರೋಧಿಸಿದೆವು. ಒಂದು ವಿಷಯ ಅಲ್ಲಿ ಬಂದಿದೆ. ಸ್ಪೋರ್ಟ್ಸ್ ನಾವು ಸಪ್ಲಿಮೆಂಟ್ ಮಾಡಬೇಕಾದರೆ ನಿಮಗೆ ಹೆಚ್ಚಿನ ಹಣವನ್ನು ವ್ಯವಸ್ಥೆ ಮಾಡಬೇಕಾದರೆ, ನಾವು ಇದರ ಬಗ್ಗೆ ಹೆಚ್ಚು ಬರ್ಡನ್ ಏತಕ್ಕೆ ತೆಗೆದುಕೊಳ್ಳಬೇಕು ಎಂದು ಫೈನಾನ್ಸ್ ಮಿನಿಸ್ಟರ್ ಕೇಳುತ್ತಾರೆ. ಆ ಕಾರಣದಿಂದ ಆಗುತ್ತಿಲ್ಲ ಎನ್ನುವ ಒಂದು ಪ್ರತಿಪಾದನೆಯನ್ನು ಮಾನ್ಯ ಬೂಟಾಸಿಂಗ್ ಮಾಡಿದರು. ನನ್ನ ಪ್ರಶ್ನೆ ಏನು ಇತ್ತು ಅಂದರೆ. ಸುಮಾರು 8 ಕೋಟಿ ರೂಪಾಯಿಗಳನ್ನು ನಮ್ಮ ಕ್ರೀಡಾ ಇಲಾಖೆಗೆ ಭಾರತದಾದ್ಯಂತ ಖರ್ಚು ಮಾಡುತ್ತಿದ್ದಾರೆ. ಸುಮಾರು 1500 ಕೋಟಿ ರೂಪಾಯಿಗಳನ್ನು ಏಷ್ಯಾಡ್‌ಗೋಸ್ಕರ ಖರ್ಚು ಮಾಡಿದರು. ನಾನು ಏಷ್ಯಾಡ್ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೂ ಕೂಡ 6–7 ಕೋಟಿ ರೂಪಾಯಿಗಳನ್ನು ಕೊಟ್ಟಂತಹ ಕೇಂದ್ರ ಬಜೆಟ್ಟಿನಲ್ಲಿ. ನಮ್ಮ ಕರ್ನಾಟಕ ಸರ್ಕಾರಕ್ಕೆ ದೊರಕಿದ ಹಣದ ಒಂದು ಅಲೋಕೇಷನ್ ಬರೀ ಒಂದು ಲಕ್ಷ ರೂಪಾಯಿ ಮಾತ್ರ. ಒಂದು ಲಕ್ಷ ರೂಪಾಯಿ ಕೊಟ್ಟು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡಿದೆ. ಈ ವ್ಯವಸ್ಥೆಯಲ್ಲಿಯೇ ಹೀಗೆ ಇರುವಾಗ, ಒಂದು ವೇಳೆ ಸ್ಟೇಟ್ ಸಬ್ಜೆಕ್ಟ್ ತೆಗೆದು ಅದು ಕನ್‌ಕರೆನ್ಸ್‌ಲಿಸ್ಟ್‌ಗೆ ಸೇರಿದರೆ, ಇನ್ನೆಷ್ಟು ಮಲತಾಯಿ ಧೋರಣೆಯಾಗುತ್ತದೆಯೋ ಎಂದು ಹೆದರಿಕೆ ನಮ್ಮ ಸರ್ಕಾರಕ್ಕೆ ಇದೆ. ಅದಕ್ಕೆ ಸಮಂಜಸ ಉತ್ತರ ಕೊಡಬೇಕೆಂದು ಕೇಳಿಕೊಂಡೆವು. ಈ ಕಾರಣಗಳಿಂದಾಗಿ ನಾನು ವಿರೋಧಿಸಬೇಕಾಗಿ ಬಂತು. ಇವೊತ್ತು ಒಂದು ಮಾತು ಹೇಳಬೇಕಾದರೆ. ಈ ಯುವಜನ ಕ್ರೀಡಾ ಇಲಾಖೆ 1969 ರಲ್ಲಿ ಆರಂಭವಾದ ಇಲಾಖೆ. ಇದರ ಪ್ರಥಮ ಮಂತ್ರಿಗಳು ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು. ಒಂದು ಕಾಲದಲ್ಲಿ ದೇವರಾಜ್‌ಅರಸರು ಯೂತ್ ಸರ್ವೀಸ್ ಮಿನಿಸ್ಟರ್ ಆಗಿದ್ದರು. ಗುಂಡೂರಾವ್ ಅವರು ಯೂತ್ ಸರ್ವೀಸ್ ಮಿನಿಸ್ಟರ್ ಆಗಿದ್ದರು. ಆದರೆ ಕಾರಣಾಂತರಗಳಿಂದ. ಸುಮಾರು 1969 ರಿಂದ. 15 ವರ್ಷದಲ್ಲಿ ಕಾಲಿಡುತ್ತಿದ್ದೇವೆ. ಈ ಇಲಾಖೆಯನ್ನು ಯಾವ ರೀತಿಯಲ್ಲಿ ಪುಷ್ಟೀಕರಿಸಬೇಕಾಗಿತ್ತೋ, ಚೆನ್ನಾಗಿ ಕಾಣಿಸಬೇಕಾಗಿತ್ತೋ, ಆ ತರಹದಲ್ಲಿ ಕಾಣಲಿಕ್ಕೆ ಆಗಿಲ್ಲ. ಈ ಇಲಾಖೆಯ ಬೇಡಿಕೆಯ ಬಗ್ಗೆ, ನಾನು ವಿರೋಧ ಪಕ್ಷದ ವತಿಯಿಂದ ಬೇಡಿಕೆಯ ಬಗ್ಗೆ ವಿರೋಧಿಸಿ ಮಾತನಾಡಿದ್ದೆ. ಬೇಡಿಕೆಯನ್ನು ವಿರೋಧಿಸುವುದಕ್ಕೆ ಕಾರಣ ಇಷ್ಟೆ.—ಈ ಇಲಾಖೆಗೆ ಕೊಟ್ಟ ಹಣ ಸಾಲದು ಎಂದು ವಿರೋಧಿಸಿದ್ದೆ. ಇವೊತ್ತು 15 ವರ್ಷಗಳ ನಂತರ ಇಡೀ ಕರ್ನಾಟಕದ ಜನಸಂಖ್ಯೆ ನಾಲ್ಕು ಕೋಟಿಗೆ ಬಂದಿದೆ. ಅದರಲ್ಲಿ ಸುಮಾರು 2 ಕೋಟಿ ಯುವಜನತೆ ಇದ್ದಾರೆ. ಅವರ ಆಶೋತ್ತರಗಳನ್ನು ಪ್ರತಿಬಿಂಬಿಸುವಂಥದ್ದು ಈ ಇಲಾಖೆ. ಈ ಇಲಾಖೆಗೆ ಸಿಕ್ಕುವಂಥ ಹಣ ಬರೀ ಎರಡು ಕೋಟಿ ರೂಪಾಯಿ ಮಾತ್ರ. ಮಾನ್ಯ ರಾಂದೇವ್‌ರವರು, ಈ ಇಲಾಖೆಯಲ್ಲಿ ವಿವಿಧ ಕ್ರೀಡಾ ಸಂಸ್ಥೆಗಳಿಗೆ 20 ಲಕ್ಷ ರೂಪಾಯಿ ಕೊಡುವ ಏರ್ಪಾಡು ಇದೆ ಎಂದುಹೇಳಿದರು. ಅವರು ಸರಿಯಾಗಿ ಹೇಳಿದ್ದಾರೆ. ನಮ್ಮಲ್ಲಿ ಸುಮಾರು 16 ಸಾವಿರ ಯುವಜನ ಯೂತ್ ಕ್ಲಬ್ಸ್ ಇವೆ. ನಮ್ಮಲ್ಲಿ 16 ಸಾವಿರ ಯುವಕ ಮಂಡಲಿಗಳಿದ್ದು ಆರ್ಥಿಕ ತೊಂದರೆಯಿಂದಾಗಿ ಸರ್ಕಾರದವರು ನಿರ್ದಿಷ್ಟವಾದ ನಿಲುವನ್ನು ತಾಳದೇ ಇದ್ದುದರಿಂದ ಅವು ಇವತ್ತು 6 ಸಾವಿರಕ್ಕೆ ಇಳಿದಿವೆ. ಇವತ್ತು ಕರ್ನಾಟಕ ರಾಜ್ಯದ ಯುವಕರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಇಲಾಖೆ ಇದು ಆಗಬೇಕಾದರೆ ಆರ್ಥಿಕ ವ್ಯವಸ್ಥೆ ಸರಿಯಾಗಿ ಇರಬೇಕಾಗುತ್ತದೆ. ಹಣದ ಕೊರತೆ ಇದೆ ಎಂದು ತಿಳಿದ ಮೇಲೆ ನೀವು ಮೊದಲೇ ಪ್ರಯತ್ನ ಮಾಡಬೇಕಾಗಿತ್ತು ಎಂದು ಮಾನ್ಯ ರಂಗನಾಥ್‌ರವರು ಹೇಳಿದರು. ನಾನು ಈ ಯುವಕ ಖಾತೆಯ ಸಚಿವನಾಗಿ ಆಗುವುದಕ್ಕೆ ಮುಂಚೆಯೇ ಬಜೆಟ್ ಪ್ರೊಪೋಸಲ್ ಹೊರಟು ಹೋಗಿತ್ತು. ನಮ್ಮೆಲ್ಲರ ನೆಚ್ಚಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಯುವಕ ಕ್ರೀಡಾ ಇಲಾಖೆಯ ಬಗ್ಗೆ ಹೆಚ್ಚಿನ ಅಭಿಮಾನ ಅಭಿರುಚಿಗಳನ್ನು ಇಟ್ಟುಕೊಂಡಿದ್ದಾರೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ತಕ್ಷಣವೇ ಈ ಇಲಾಖೆಯ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ಇಟ್ಟುಕೊಂಡು ನಾನು ಕೆಲಸ ಮಾಡಬೇಕಾದರೆ ನನಗೆ ಹೆಚ್ಚಿನ ಹಣವನ್ನು ಒದಗಿಸದಿದ್ದರೆ ಇದನ್ನು ನಡೆಸುವುದು ಬಹಳ ಕಷ್ಟವಾಗುತ್ತದೆಂದು ಕೇಳಿಕೊಂಡೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಕೊಡುತ್ತೇವೆಂದು ಹೇಳುತ್ತಿದ್ದಾರೆ. But, the Chief Minister says. you can only ask for an enhancement of 15% over the previous year's budgetary allocations. ಅವರು ಕೊಡತಕ್ಕ 15 ಪರ್ಸೆಂಟಿನಲ್ಲೂ

ಕೂಡ ನಮಗೆ ಸಿಕ್ಕುವುದು ಕೇವಲ 10–15 ಲಕ್ಷ ರೂ. ಮಾತ್ರ. ಪ್ರತಿ ಯೂನಿಟ್ಟೂ ಸೇರಿ ಈ ಕ್ರೀಡಾ ಇಲಾಖೆಗೆ ಕನಿಷ್ಟ 60–70 ಲಕ್ಷ ರೂ. ಗಳನ್ನಾದರೂ ಒದಗಿಸಿಕೊಡಿ ಎಂದು ಮುಖ್ಯಮಂತ್ರಿಗಳಲ್ಲಿ ಕೇಳಿ ಕೊಂಡಿದ್ದೇನೆ. ಈ ದಿಸೆಯಲ್ಲಿ ನಾವು ಇನ್ನೊಂದು ಯೋಚನೆಯನ್ನು ಮಾಡಿದ್ದೇವೆ. ಕ್ರಿಕೆಟ್, ಹಾಕಿ, ವಾಲಿಬಾಲ್, ಮುಂತಾದ ಕ್ರೀಡೆಗಳ ಮೇಲೆ ಮನರಂಜನಾ ತೆರಿಗೆ ಎಂದು ಹಾಕಿ ಆದರಿಂದ ಬರತಕ್ಕ ಹಣವನ್ನೂ ಕೂಡ ಈ ಕ್ರೀಡಾ ಇಲಾಖೆಗೆ ಕೊಡಬೇಕೆಂದು ಕೇಳಿದ್ದೇನೆ. ಹಿಂದಿನ ಸರ್ಕಾರದಲ್ಲಿ ಕೂಡ ಸ್ಪೋರ್ಟ್ಸ್ ಸೆಸ್ ಎಂದು ಹಾಕಿದ್ದರು. ಈ ಹಣ ಮೋಟಾರ್ ವೆಹಿಕಲ್ಸ್ ಮೇಲೆ, ಎಕ್ಸೈಸ್‌ಮೇಲೆ, ಪ್ರಾಪರ್ಟಿ ಟ್ಯಾಕ್ಸ್ ಮೇಲೆ ಹಾಕಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಇದು ಸ್ಕ್ರುಟಿನಿ ಕಮಿಟಿಯಲ್ಲಿದೆ. ಅದು ಬಂದ ಮೇಲೆ ನಮ್ಮ ಕ್ರೀಡಾ ಇಲಾಖೆಗೆ ಒಂದು ಪ್ರೋತ್ಸಾಹಕರವಾದ ಹಣವಾಗಿ ಬರಬಹುದು. ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ ಒಂದು ಮಾತನ್ನು ಬೂಟಾಸಿಂಗ್‌ರವರಲ್ಲಿ ಕೇಳಿದೆ. ನೀವು 1600 ಕೋಟಿ ರೂ. ಗಳನ್ನು ಏಷ್ಯಾಡ್‌ಗೆ ಖರ್ಚುಮಾಡಿದ್ದೀರಿ. ಸುಮಾರು 8 ಕೋಟಿ ರೂ. ಗಳನ್ನು ಸ್ಪೋರ್ಟ್ಸ್ ಅಥಾರಿಟೀಸ್ ಆಫ್ ಇಂಡಿಯಾ ಎನ್ನುವ ಬಿಳಿ ಆನೆಗಳು ನೆಹರು ಸ್ಟೇಡಿಯಂ ಮತ್ತು ಇಂದ್ರಪ್ರಸ್ಥ ಸ್ಟೇಡಿಯಂಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಖರ್ಚುಮಾಡಿ ಮುಂದೆ ಇದಕ್ಕಾಗಿ ಇನ್ನೂ ಅಧಿಕ ಬಂಡವಾಳವನ್ನು ಕೊಡುವ ಯೋಚನೆಯನ್ನು ತಾವು ಮಾಡಿದ್ದೀರಿ, ಆದ್ದರಿಂದ ಮುಂದೆ ಬರತಕ್ಕ ಏಷ್ಯಾಡ್‌ಗೋಸ್ಕರ 1 ಕೋಟಿ ರೂ. ಗಳನ್ನು ನಮ್ಮ ಕರ್ನಾಟಕಕ್ಕೆ ಕೊಟ್ಟರೆ ನಾವು ಕನಿಷ್ಟ 10 ಚಿನ್ನದ ಪದಕಗಳನ್ನಾದರೂ ಗೆದ್ದುಕೊಂಡು ಬರುತ್ತೇವೆಂದು ಹೇಳಿದೆ. ನಾನು ಈ ಮಾತನ್ನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ನಮ್ಮ ಕರ್ನಾಟಕದಲ್ಲಿ ಬಹಳಷ್ಟು ವಿಧವಾದ ಕ್ರೀಡೆಗಳಿವೆ. ಎಲ್ಲ ಕ್ರೀಡಾ ಸಂಸ್ಥೆಗಳೂ ಟೂರ್ನಮೆಂಟ್ ಎಂದು ಮಾಡುತ್ತಾರೆ. ಕೆಲವಾರು ಸ್ಟೇಟ್‌ಟೂರ್ನಮೆಂಟ್‌ಗಳಿಗೆ ನಾನು ತಮ್ಮನ್ನೂ ಕರೆದುಕೊಂಡು ಹೋಗಿದ್ದೆ. ಈ ಸಂಸ್ಥೆಗಳು ಇಂಟರ್‌ಸ್ಟೇಟ್ ಟೂರ್ನಮೆಂಟ್ ಎಂದು ಮಾಡಿ ಸುಮಾರು 10–15 ದಿವಸಗಳ ಕಾಲ ನಡೆಸಿ ದೇಶಾದ್ಯಂತ ಒಳ್ಳೆಯ ಟೀಂಗಳನ್ನು ಕರೆಸಿಕೊಂಡು ಜನರಿಗೆ ಒಳ್ಳೆಯ ಮನರಂಜನೆಯನ್ನು ಮಾಡಿ ಸರ್ಕಾರದವರನ್ನು ಹಣ ಕೇಳಿದರೆ, ಈ ಸರ್ಕಾರದವರು ಕೊಡುವುದು ಕೇವಲ 2–3 ಸಾವಿರ ಮಾತ್ರ. ಇದನ್ನು ಕೊಡಬೇಕಾದರೂ ಕೂಡ ಆದಕ್ಕೆ ನಾನಾರೀತಿಯ ಕೊಕ್ಕೆಗಳನ್ನು ಹಾಕಿ ಕಿರಿಕಿರಿ ಮಾಡಿಕೊಡುತ್ತಾರೆ. ಇಂಥ ಒಂದು ವ್ಯವಸ್ಥೆ ಏತಕ್ಕೆ ಇದೆ ಎಂದರೆ ಹಣದ ಅಭಾವ ಇರುವುದರಿಂದ. ಆದರೆ ನಾವು ಒಂದು ಪ್ರಥಮ ಹೆಜ್ಜೆಯನ್ನು ಇಟ್ಟಿದ್ದೇವೆ. ಈ ಯುವಜನ ಸೇವಾ ಇಲಾಖೆ ಒಂದು ಪ್ರಥಮ ಸೋಪಾನವಾಗಿದ್ದು ನನಗೆ ಯುವಜನ ಸೇವಾ ಇಲಾಖೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಬಹಳ ಒಲವು ಇದೆ. ಮಾನ್ಯ ಮುಖ್ಯಮಂತ್ರಿಗಳೂ, ವಿರೋಧ ಪಕ್ಷದ ಸದಸ್ಯರೂ, ಆಡಳಿತ ಪಕ್ಷದವರೂ ಹೆಚ್ಚಿನ ಸಹಾಯ, ಸಹಕಾರವನ್ನು ನೀಡಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅಧಿಕ ಹಣವನ್ನೊದಗಿಸಿಕೊಟ್ಟರೆ ಒಳ್ಳೆಯ ಯುವಶಕ್ತಿಯನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆಂದು ಅಂದುಕೊಂಡಿದ್ದೇನೆ. ಈ ವ್ಯವಸ್ಥೆಯ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ನಮ್ಮ ಬೆಂಗಳೂರು ನಗರದ ಹತ್ತಿರ ಸುಮಾರು 12 ಕಿ.ಮೀ. ದೂರದಲ್ಲಿ ವಿದ್ಯಾನಗರ ಎಂಬ ಒಂದು ಸ್ಥಳ ಇದೆ. ಅಲ್ಲಿ ಟೀಚರ್ಸ್ ಟ್ರೈನಿಂಗ್ ಪ್ರೋಗ್ರಾಂ ಮಾಡುತ್ತಿದ್ದಾರೆ. ಸುಮಾರು 80–90 ಎಕರೆ ಪ್ರದೇಶ ಇದೆ. ಆ ಭೂಮಿಯನ್ನು ಸರ್ಕಾರದವರು ನಮ್ಮ ಯುವಜನ ಸೇವಾ ಇಲಾಖೆಗೆ ಒದಗಿಸಿಕೊಟ್ಟಿದ್ದಾರೆ. ನಮ್ಮ ಇಡೀ ಭಾರತದ ಯುವಜನರ ಆಶೋತ್ತರಗಳನ್ನು ಈಡೇರಿಸಲು ಅವಶ್ಯಕವಾದ ಒಂದು ಸಂಸ್ಥೆಯನ್ನು ಅಲ್ಲಿ ತೆರೆಯಬೇಕೆಂದು ಯೋಚನೆ ಮಾಡಿದ್ದೇವೆ. ಇಡೀ ಭಾರತದ ಯುವಜನತೆಗೆ ಕರೆಕೊಟ್ಟು ಯುವ ಸಂಘಟನೆಯ ನವನಿರ್ಮಾಣವನ್ನು ಮಾಡಿ, ನವಚೈತನ್ಯವನ್ನು ತುಂಬಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದಂಥ ಲೋಕನಾಯಕ ಶ್ರೀ ಜಯಪ್ರಕಾಶ ನಾರಾಯಣರ ಹೆಸರಿನಲ್ಲಿ ಸದ್ಯದಲ್ಲೇ ಒಂದು ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಬೇಕಾದ ಹಣದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೇನೆ. ಇದು ಅತ್ಯಂತ ದೊಡ್ಡ ಸಂಸ್ಥೆ. ನಮ್ಮಲ್ಲಿ ಬಹಳಷ್ಟು ಯುವಕಮಂಡಲಿಗಳಿವೆ. ಎನ್.ಸಿ.ಸಿ., ಭಾರತ ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್, ಕಲಾವಿದರು, ನಾಟಕಕಾರರ ಸಂಸ್ಥೆಗಳನ್ನೆಲ್ಲಾ ಕೇಂದ್ರೀಕರಿಸಿ ಒಂದೇ ಸ್ಥಳದಲ್ಲಿ ಇಡೀ ಯುವ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಸ್ಥಾನವನ್ನಾಗಿ ಮಾಡಬೇಕೆಂದು ಸರ್ಕಾರ ಉದ್ದೇಶ ಇಟ್ಟುಕೊಂಡಿದೆ ಯೆಂದೂ ಮತ್ತು ಸಧ್ಯದಲ್ಲಿಯೇ ಈ ಕಾರ್ಯವನ್ನು ಮಾಡುತ್ತೇವೆಂದೂ ಆಶ್ವಾಸನೆಯನ್ನು ಕೊಡುತ್ತೇನೆ.

ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆ ಕರ್ನಾಟಕದ ಸಂಸ್ಕೃತಿ ಮತ್ತು ಹಿರಿಮೆಯನ್ನು ಖಂಡಿತವಾಗಿಯೂ ಪ್ರತಿಬಿಂಬಿಸುವ ಇಲಾಖೆ. ಕಳೆದ ಸಾರಿ ಈ ಇಲಾಖೆಗೆ ಕೇವಲ 80 ಲಕ್ಷ ರೂ. ಮಾತ್ರ ಹಣ ಇತ್ತು. ನಂತರ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡು ಈ ಇಲಾಖೆಯನ್ನು ನಾನು ವಹಿಸಿಕೊಳ್ಳಲು ಸಾಧ್ಯವಿಲ್ಲ, ಇದು ಬಹಳ ದೊಡ್ಡ ಇಲಾಖೆಯಾಗಿದ್ದು ಜನರು ಏನೇನೋ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಾರೆ, ಅದನ್ನೆಲ್ಲಾ ಈಡೇರಿಸಬೇಕಾದರೆ ಸಾಕಷ್ಟು ಹಣ ಇರಬೇಕು, ತಾವು ಹಣ ವನ್ನು ಕೊಡದಿದ್ದರೆ ನಾನು ಇದರಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ ಮೇಲೆ ಕೂಡಲೇ 75 ಲಕ್ಷ ರೂ. ಗಳನ್ನು ಈ ಇಲಾಖೆಗೆ ಒದಗಿಸಿಕೊಟ್ಟಿದ್ದಾರೆ. ಈ ಹಣ ಕೂಡ ಸಾಲದು. ಕನ್ನಡ ಬೇಕೆಂದು ಹೇಳತಕ್ಕ ಮಾನ್ಯ ಸದಸ್ಯರಾದ ನಾರಾಯಣ ಕುಮಾರ್‌ರವರು ಇಲ್ಲಿ ಇಲ್ಲ. ಹಲವಾರು

ಮಾನ್ಯ ಸದಸ್ಯರು ಹೇಳುತ್ತಾರೆ, ಕನ್ನಡ ಸಂಸ್ಕೃತಿ ಮತ್ತು ಪರಂಪರೆಯನ್ನು ಸಾರುವಂಥ ಸಾಹಿತ್ಯ ಅಕಾಡೆಮಿ, ಲಲಿತ ಕಲಾ ಅಕಾಡೆಮಿ, ಉರ್ದು ಅಕಾಡೆಮಿ, ಸಂಗೀತ ಮತ್ತು ನೃತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ 6 ಅಕಾಡೆಮಿಗಳನ್ನು ಇಟ್ಟುಕೊಂಡಿರತಕ್ಕಂಥ ಈ ಇಲಾಖೆಗೆ ಹೆಚ್ಚಿನ ಹಣವನ್ನು ಹಣವನ್ನೊದಗಿಸಿ ಕೊಡಬೇಕೆಂದು ಕೇಳಿದರೂ ಕೂಡ ಹಣವನ್ನು ಕೊಡಲಿಲ್ಲ. ಆದರೆ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದ ಕೂಡಲೇ 75 ಲಕ್ಷ ರೂ. ಗಳನ್ನು ಈ ವರ್ಷಕ್ಕೆ ಒದಗಿಸಿಕೊಟ್ಟಿದ್ದಕ್ಕಾಗಿ ಅವರಿಗೆ ಅಭಾರಿಯಾಗಿದ್ದೇನೆ. ಅಂತರರಾಷ್ಟ್ರೀಯ ಸಾಂಸ್ಕೃತಿಕ ತಂಡಗಳನ್ನು ಪ್ರತಿಯೊಂದು ಸ್ಥಳಕ್ಕೂ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಮತ್ತು ಕನ್ನಡ ಕಲಾವಿದರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ. ಇದನ್ನು ನಾನು ಟೀಕೆ ಎಂದು ಹೇಳುತ್ತಿಲ್ಲ. ಹಿಂದಿನ ಸರ್ಕಾರದವರು ಮಾಡಿದಂಥ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಮ್ಮ ಕರ್ನಾಟಕದ ಕನ್ನಡ ಕಲಾವಿದರಿಗೆ ದೊರಕಿಸಿಕೊಟ್ಟ ಅವಕಾಶ ಹಾಗೂ ಪ್ರೋತ್ಸಾಹ ಏನೇನೂ ಸಾಲದು. ನಮ್ಮ ಈ ಸರ್ಕಾರ ಕನ್ನಡ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದಲ್ಲದೆ ಅಂತರರಾಷ್ಟ್ರೀಯ ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಿ ರಾಷ್ಟ್ರೀಯ ಭಾವೈಕ್ಯತೆಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತದೆ. ನಾವು ವರ್ಷಕ್ಕೊಮ್ಮೆ ರಾಷ್ಟ್ರೀಯ ಭಾವೈಕ್ಯತಾ ದಿನವೆಂದು ಮಾಡಿ ಅಲ್ಲಿ ದೇಶದ ಪ್ರಧಾನ ಮಂತ್ರಿಗಳು, ಮುಖ್ಯ ಮಂತ್ರಿಗಳು, ನಂತರ ಶಾಸಕರು ಪ್ರಮಾಣ ವಚನವನ್ನು ತೆಗೆದುಕೊಳ್ಳುತಾರೆ. ಮತ್ತು ಅಲ್ಲಿಂದ ಹೊರಟಕೂಡಲೇ ರಾಷ್ಟ್ರೀಯ ಭಾವೈಕ್ಯತಾ ವಿಷಯವನ್ನೇ ನಾವು ಮರೆತುಬಿಡುತ್ತೇವೆ.

ಅನಂತರ ಅಂತರ್ ರಾಜ್ಯ ಭಾಷಾ ವೈಷಮ್ಯ ಈ ಕಾರ್ಯಗಳನ್ನು ನಾವು ಇನ್ನೂ ತೊಡೆದು ಹಾಕಿಲ್ಲ. ಒಂದೇ ಒಂದು ಉದಾಹರಣೆ ಹೇಳುವುದಾದರೆ ನಾನು ಯಾವುದೋ ಒಂದು ಸಾಂಸ್ಕೃತಿಕ ಸಮಾರಂಭಕ್ಕೆ ಹೋದಾಗ ಶ್ರೀಮತಿ ಲಲಿತರಾವ್ ಎನ್ನತಕ್ಕ ಮಹಾರಾಷ್ಟ್ರದ ಮಂತ್ರಿಗಳು ಬಂದಿದ್ದರು. ಅವರ ಜೊತೆಯಲ್ಲಿ ಜನಾರ್ಧನ ಪೂಜಾರಿಯವರೂ ಕೂಡ ಬಂದಿದ್ದರು. ನ್ಯಾಷನಲ್ ಇಂಟಿಗ್ರೇಷನ್ ಎಂದು ಹೇಳಿ ಸಾವಿರಾರು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ; ಏಷ್ಯಾಡ್ ನಡೆಸಲಿಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರ. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಎಂದು ಎರಡು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾನ್ ಅಲೆಯನ್ಸ್ ಮೂವ್‌ಮೆಂಟ್‌ಗೆ ನಿಮ್ಮಗಳ ಹತ್ತಿರ ಸಾವಿರಾರು ಕೋಟಿ ಇದೆ ಆದರೆ, ನಮ್ಮ ದೇಶದ ರಾಷ್ಟ್ರೀಯ ಐಕ್ಯತೆಯನ್ನು ಕೂಡಿಸಲಿಕ್ಕೆ ಹಣ ಇಲ್ಲ ಎಂದರೆ ಇದಕ್ಕಿಂತ ಶೋಚನೀಯವಾದ ಪ್ರಸಂಗ ಯಾವುದೂ ಇಲ್ಲ, ರಾಷ್ಟ್ರೀಯ ಭಾವೈಕ್ಯತೆಯೆಂದು ಹೇಳುವಾಗ ಅಂತರ್‌ರಾಷ್ಟ್ರೀಯ ಸಾಂಸ್ಕೃತಿಕ ಸಂಘಗಳು, ಕನ್ನಡ ಮತ್ತು ತೆಲುಗು ಒಂದೇ ಭಾಷೆಯಾಗಿ ಬೆಳೆಯತಕ್ಕಂಥ ಒಂದು ಪ್ರಕಟಣೆಯಾಗಿ ಬರುವುದು ಇದ್ದರೂ ಕೂಡ, ಒಂದೇ ಒಂದು ಲಿಪಿಯನ್ನು ಕೊಡುವಂಥ ಸಂಗತಿ ಇದ್ದರೂ ಕೂಡ...

ಶ್ರೀ ಕೆ. ಎಚ್. ರಂಗನಾಥ್.—ನೀವು ಏನು ಮಾತನಾಡುತ್ತಿದ್ದೀರಿ, ನಾನ್ ಅಲೆಯನ್ಸ್ ಮೂವ್‌ಮೆಂಟ್ ಅದು ನಡೆಯಬಾರದು ಎಂದು ಹೇಳುತ್ತೀರಾ. ಬಹಳ ಹಣ ಖರ್ಚಾಗಿದೆ ಎಂದು ತಮ್ಮ ದೃಷ್ಟಿಯಲ್ಲಿ ಇದೆಯೆ? Sir. I am sorry for the interruption, Non-aligned movement ಇವೊತ್ತಿನ ದಿವಸ Representatives of as many as hundred countries of the third world met together and the Chair is occupied by India. The Chairman of the Non-aligned Movement is the Prime Minister of India ಇದಕ್ಕೆ ನೀವು ಆಗಬಾರದು ಎಂದು ತಮ್ಮ ಅಭಿಪ್ರಾಯವೆಂದು ಇದ್ದರೆ ಅದನ್ನು ಖಚಿತ ಹೇಳಿ. ನ್ಯಾಷನಲ್ ಇಂಟಿಗ್ರೇಷನ್ ಎಂದು ಹೇಳುವಾಗ rightly or wrongly, we are Members of the Commonwealth country. The Speaker is going to attend Common wealth Countries Conference. ತಮ್ಮ ಅಭಿಪ್ರಾಯವನ್ನು ಖಚಿತವಾಗಿ ಹೇಳಿ. ಇಲ್ಲಿ ಅದು ಆಗಬೇಕಾಗಿತ್ತಾ, ಆಗಬಾರದಾಗಿತ್ತಾ; ಪ್ರಾಯಶಃ ತಾವು ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿರಬಹುದು. ಏನು ಅಭಿಪ್ರಾಯಗಳು ಬಂದಿದೆ, ಏನು ತೀರ್ಮಾನ ತೆಗೆದುಕೊಂಡರು; ಅದರ ಬಗ್ಗೆ ಅಭಿಮಾನ ಇದೆಯೋ ಇಲ್ಲವೋ ಅದು ಬೇರೆ.

ಶ್ರೀ ಬಿ. ರಾಚಯ್ಯ.—ಒಂದು ಕಡೆ ಸ್ಕೂಲ್ ಕೊಡಿ, ಇನ್ನೊಂದು ಕಡೆ ಬೇಡ ಎಂದು ಹೇಳಿದರೆ ಹೇಗೆ?

ಶ್ರೀ ಕೆ. ಎಚ್. ರಂಗನಾಥ್.—ಸ್ಕೂಲ್ಸ್ ತೆಗೆದುಕೊಂಡು ಹೋಗಿ ನಾನ್ ಅಲೆಯನ್ಸ್‌ಗೆ ಹೋಲಿಸುತ್ತೀರಲ್ಲ. I am sorry if the Hon, Minister is ignorant of the International policy and of our own person involved in that.

SRI JEEVRAJ ALVA :—It is a slogan 'Jai Hind Jai Jagat'.

SRI K. H. RANGANATH. It is not an individual ನಾಳೆ ನೀವೇ ಪ್ರಧಾನ ಮಂತ್ರಿಯಾದರೂ ಆಗಬಹುದು. Itis the honour. of our Country.

ಅದಲ್ಲ ಪ್ರಶ್ನೆ—ನನ್ನ ಪ್ರಶ್ನೆ ಏನೆಂದರೆ ಇದು ಆಗಬೇಕಾಗಿತ್ತೇ, ಆಗಬಾರದಾಗಿತ್ತೇ ಎನ್ನುವುದು.

ಅಧ್ಯಕ್ಷರು .—ಈಗ ಅಂತರರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರೀಯ ಭಾವೈಕ್ಯತೆಯನ್ನು ಬಿಟ್ಟು ನಮ್ಮ ಕರ್ನಾಟಕದ ಭಾವೈಕ್ಯತೆಯ ಬಗ್ಗೆ ಹೇಳಿ.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿರುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸಚಿವರು ಈ ರೀತಿ ಮಾತನಾಡಿದರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ .—ಅವರು ಹೇಳುತ್ತಾರೆ, ನಾನ್‌ಅಲೆಯನ್ಸ್‌ಗೆ 1500 ಕೋಟಿ ರೂಪಾಯಿಗಳು ಖರ್ಚುಮಾಡಿದ್ದು ಜಾಸ್ತಿ ಎಂದು. ಇನ್ನೊಬ್ಬರು ಈವತ್ತಿನ ಪತ್ರಿಕೆಯಲ್ಲಿ ಬರೆದಿದ್ದಾರೆ ನಮ್ಮ ಕಾರ್ಪೊರೇಷನ್‌ನವರು ರಾಷ್ಟ್ರಪತಿಯವರು ಬಂದಾಗ ಸಿವಿಕ್ ರಿಸೆಪ್ಷನ್‌ಗಾಗಿ 50 ಸಹಸ್ರ ರೂಪಾಯಿಗಳನ್ನು ಏತಕ್ಕೆ ಖರ್ಚುಮಾಡಿದಿರಿ ಎಂದು. ಒಬ್ಬೊಬ್ಬರು ಒಂದೊಂದು ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದನ್ನು ನೋಡಿಕೊಂಡು ಮಾತನಾಡುವುದಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಮಂತ್ರಿಗಳು ಸರ್ಕಾರದ ಸದಸ್ಯರಾಗಿ, ಮಂತ್ರಿಗಳಾಗಿ ಮಾತನಾಡುವುದಕ್ಕೆ ,ಮತ್ತು ವೈಯಕ್ತಿಕವಾಗಿ ಮಾತನಾಡುವುದಕ್ಕೆ ವ್ಯತ್ಯಾಸ ಇದೆ. ಇವತ್ತು ತಾವು ಒಂದು ಪಕ್ಷದ ಸರ್ಕಾರದ ಮಂತ್ರಿಗಳಾಗಿ ಮಾತನಾಡುತ್ತಿದ್ದೀರಿ. ನಾನು ಅದಕ್ಕಾಗಿ ಕೇಳುತ್ತಾ ಇದ್ದೇನೆ, ಇದು ನಡೆಯಬೇಕಾಗಿತ್ತಾ, ನಡೆಯಬಾರದಾಗಿತ್ತಾ ಎಂದು. ಅದರ ಅಧ್ಯಕ್ಷಸ್ಥಾನ ಹಿಂದೂಸ್ಥಾನಕ್ಕೆ ಬರಬೇಕಾಗಿತ್ತೋ ಬೇಡವಾಗಿತ್ತೋ ? ಖರ್ಚು ಮಾಡತಕ್ಕಂಥ ಪ್ರಶ್ನೆ ಬೇರೆ. ಮಾನ್ಯ ರಾಮ್‌ದೇವ್‌ರವರು ಏಷ್ಯಾಡ್ ಗೇಮ್ಸ್‌ಗೆ ಮೆಂಬರ್ ಆಗಿದ್ದರು. ಅವರು ಹೇಳಿ ಖರ್ಚನ್ನು ಕಡಿಮೆ ಮಾಡಿಸಬಹುದಾಗಿತ್ತು. 1500 ಕೋಟಿ ಏತಕ್ಕೆ ಖರ್ಚುಮಾಡುವುದೆಂದು 100 ಕೋಟಿ ಖರ್ಚುಮಾಡಿ ಎಂದು ಹೇಳಬಹುದಾಗಿತ್ತು.

ಶ್ರೀ ಪಿ. ರಾಮ್‌ದೇವ್.—ಅದನ್ನು ಕಡಿಮೆ ಮಾಡಬೇಕಾಗಿತ್ತು ಎನ್ನುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಕೇಳುವ ಪ್ರಶ್ನೆಯೇ ಬೇರೆ. Do not try to mix up. I have clinched the issue.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ಅವರು ಜೈ ಜಗತ್ ಎಂದು ಹೇಳಿಬಿಟ್ಟರಲ್ಲ.

ಶ್ರೀ ಬಿ. ಪಿ. ಒಡೆಯರಾಜ್.—ತಾವು ಯುವಜನ ಸೇವಾ ಕ್ರೀಡಾಮಂತ್ರಿಗಳಾಗಿದ್ದೀರಿ. ಏಷ್ಯಾಡ್ ಆಗಬಾರದಾಗಿತ್ತು ಎನ್ನುವುದು ತಮ್ಮ ಅಭಿಪ್ರಾಯವೇ ? ಏಷ್ಯಾಡ್‌ನಿಂದ ನಮ್ಮ ದೇಶದ ಕ್ರೀಡಾಜನಗಳಿಗೆ ಉತ್ಸಾಹ ಸಿಕ್ಕಿದಂತಾಗಲಿಲ್ಲವೇ ?

ಶ್ರೀ ಜೀವರಾಜ ಆಳ್ವ.—ಅಲ್ಲಿ 1600 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು.

SRI K. H. RANGANATH.—He was still then the Member of the Party.

SRI JEEVRAJ ALVA.—Probably in the best interest of sports, Sri Ramdev participated in Asiad.

SRI P. RAMDEV.—Sir I did not attend Asiad as a Party Member, but as a Sportsman.

ಶ್ರೀ ಕೆ. ಹೆಚ್. ರಂಗನಾಥ್ .—ಅವರು ಯಾವಾಗ ಸ್ಪೋರ್ಟ್ಸ್‌ಮೆನ್, ಯಾವಾಗ ಪಾರ್ಟಿ ಮೆಂಬರ್ ಹೇಗೆ ಎಂದು ಗೊತ್ತಾಗುವುದಿಲ್ಲ. ಅವರು ಬೆಳಿಗ್ಗೆ ಜನತಾ ಪಾರ್ಟಿಯೋ, ಮಧ್ಯಾಹ್ನದ ಜನತಾ ಪಾರ್ಟಿಯೋ ಅಥವಾ ರಾತ್ರಿಯ ಜನತಾ ಪಾರ್ಟಿಯೋ ?

ಶ್ರೀ ಪಿ. ರಾಮದೇವ್ .—ಏಷ್ಯಾಡ್‌ನಿಂದ ರಾಷ್ಟ್ರದಲ್ಲಿ ಸ್ಪೋರ್ಟ್ಸ್‌ಮೆನ್‌ಗಳಿಗೆ ಒಂದು ರೀತಿಯಾದ ಸ್ಪಿರಿಟ್ ಬಂದಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—A country which had thousands and crores to spend on Stadia did not have one lakh for our Stadium. ಒಂದು ಸಾವಿರ ಕೋಟಿ ರೂಪಾಯಿಗಳನ್ನು ದೆಹಲಿಯಲ್ಲಿ ಏಷ್ಯಾಡ್‌ಗೆ ಖರ್ಚು ಮಾಡಿರುವವರು. ನಮ್ಮ ಸ್ಟೇಡಿಯಂ ಗೋಸ್ಕರ ಹಣವಿರಲಿಲ್ಲ. ನಮ್ಮ 19 ಸ್ಟೇಡಿಯಾಗೆ at every stage of construction we begged for money. At last, they gave us token one lakh rupees.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಹೇಳುವುದಾದರೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ 7 ಲಕ್ಷ ರೂಪಾಯಿಗಳನ್ನು ವಂತಿಗೆ ಮಾಡಿ ಕೊಟ್ಟಿದ್ದೇವೆ. The Government has not provided the money. Why should they not ? Why did they not put it in the budget ? Why do they want to blame Central Government for anything and everything.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—1977 ನೇ ಇಸವಿಯಲ್ಲಿ ನಿಮ್ಮ ಸರ್ಕಾರದವರೇ ಇದ್ದರು. ಬಡ್ಜೆಟ್‌ನಲ್ಲಿ ಸ್ಟೇಟ್ ಗೇಮ್ಸ್‌ಗೆ ಎಷ್ಟು ಹಣ ಒದಗಿಸಿದ್ದರು. ಅದನ್ನೆಲ್ಲಾ ಹೇಳುವುದಕ್ಕೆ ನಿಮಗೆ ಒಪ್ಪಿಗೆ ಇಲ್ಲ

ಅಧ್ಯಕ್ಷರು.—ಉತ್ತರ ಹೇಳುತ್ತಾರೆ ಬಿಡಿ. ಅದಕ್ಕೆಲ್ಲ ಒಪ್ಪಿಗೆ ಇಲ್ಲ ಎನ್ನುವ ದೃಷ್ಟಿಯಿಂದಲೇ ಅವರು ಕರೀ ಶರಟನ್ನು ಹಾಕಿಕೊಂಡು ಬಂದಿದ್ದಾರೆ.

ಶ್ರೀ ಜೀವರಾಜ ಆಳ್ವ.—ಇನ್ನೂ ಸಮಯ ಇದೆ. ಮಾಡಿ ತೋರಿಸುತ್ತೇವೆ. ಈ ಒಂದು ವ್ಯವಸ್ಥೆಯಲ್ಲಿ ನಾವು ಹಣದ ಕೊರತೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಎರಡೂ ಇಲಾಖೆಗೂ ಹಣದ ವ್ಯವಸ್ಥೆಯನ್ನು ಮಾಡುವ ಭರವಸೆಯನ್ನು ಕೊಟ್ಟಿದ್ದಾರ. ಆದ್ದರಿಂದ ಇದು ಕರ್ನಾಟಕದಲ್ಲೇ ಅಲ್ಲ, ಜಿಲ್ಲಾ ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಮಾಡಬೇಕೆಂದು ಸುಮಾರು 19 ಕ್ರೀಡಾಂಗಣಗಳನ್ನು ವಿವಿಧ ಹಂತದಲ್ಲಿ ಕಟ್ಟುತ್ತಾ ಇದ್ದಾರೆ. ಏಳು ಕ್ರೀಡಾಂಗಣಗಳು ಪೂರ್ತಿಯಾಗಿ ಮುಗಿದು ಅದನ್ನು ಕ್ರೀಡೆಗಳಿಗಾಗಿ ಜನರು ಉಪಯೋಗಿಸುತ್ತಿದ್ದಾರೆ. ಉಳಿದ 13 ಕ್ರೀಡಾಂಗಣಗಳು ವಿವಿಧ ಹಂತದಲ್ಲಿ ಇವೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಅಗತ್ಯವಾಗಿದೆ. ಕೇಂದ್ರದ ಸಹಾಯ ಖಂಡಿತವಾಗಿಯೂ ಬರುತ್ತದೆಂದು ಭಾವಿಸಿಕೊಂಡಿರುತ್ತೇವೆ. ಆನಂತರ ನಮ್ಮ ಮಾನ್ಯ ಮಿತ್ರರಾದಂತಹ ಶ್ರೀ ನಾನಯ್ಯನವರು ಯುವಕ ಯುವತಿಯರ ಮಂಡಲಿಗಳಿಗೆ ಹೆಚ್ಚಿನ ಹಣದ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಸ್ವಾಮಿ ನಾನು ಈಗಾಗಲೇ ಹೇಳಿರುತ್ತೇನೆ. ಕರ್ನಾಟಕದಲ್ಲಿ ಸುಮಾರು 16 ಸಾವಿರ ಯುವಕ ಯುವತಿಯರ ಮಂಡಲಿಗಳು ಇತ್ತು. ಆದರೆ, ಇವತ್ತು ಅದರ ಸಂಖ್ಯೆ 6 ಸಾವಿರಕ್ಕೆ ಇಳಿದಿದೆ. ಹಲವಾರು ಯುವಕ ಯುವತಿಯರ ಮಂಡಲಿಗಳು ಸಂಘಟನೆಯ ಕಾರ್ಯವನ್ನು, ಪ್ರಯತ್ನವನ್ನು ನಡೆಸಿದರೂ ಕೂಡ ಅವರಿಗೆ ಕಿಂಚಿತ್ತಾದರೂ ಹಣದ ವ್ಯವಸ್ಥೆಯನ್ನು ಮಾಡದೇ ಹೋದರೆ ಅವರು ಯಾವ ಕಾರ್ಯಗಳನ್ನೂ ರೂಪಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಈ 6 ಸಾವಿರ ಯುವಕ ಮತ್ತು ಯುವತಿ ಮಂಡಲಿಗಳಿಗೆ 500 ರೂಪಾಯಿಗಳ ಪ್ರಕಾರ ಅವರ ಒಂದು ಕಾರ್ಯ ಚಟುವಟಿಕೆಗೆ ಉಪಯೋಗಿಸಲು ಮತ್ತು ತಾಲ್ಲೂಕು ಮಟ್ಟದ ಆಟಪಾಟದ ಸ್ಪರ್ಧೆಗೆ ಉಪಯೋಗಿಸಲು ಹಣ ಕೊಡುವ ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—12 ಸಾವಿರದಿಂದ 6 ಸಾವಿರಕ್ಕೆ ಇಳಿಯಬೇಕಾದರೆ ಕಾರಣವೇನು ?

ಶ್ರೀ ಜೀವರಾಜ ಆಳ್ವ.—ಈ ಬಗ್ಗೆ ಹೇಳುವುದಕ್ಕೆ ಹೋದರೆ ಬಹಳ ಹೇಳಬೇಕಾಗುತ್ತದೆ. 1976 ರಿಂದ 1980 ರವರೆಗೆ ಎಲ್ಲ ಇಲಾಖೆಗಳ ಬಡ್ಜೆಟ್ ಹೆಚ್ಚುತ್ತಾ ಹೋಗಿದ್ದರೆ ಈ ಇಲಾಖೆಗೆ ಮಾತ್ರ 40 ಲಕ್ಷ ರೂಪಾಯಿಗಳು ಖೋತಾ ಆಗಿದೆ. ಇದು ತಮಗೂ ಗೊತ್ತಿದೆ. ಆದರೆ ಏತಕ್ಕೆ ಎಂದು ನಾನು ಬಿಡಿಸಿ ಹೇಳಬೇಕಾಗಿಲ್ಲ. ಸುಮಾರು 40 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗದಂಥ ಇಲಾಖೆಯೆಂದರೆ, ಯುವ ಜನರ ಪ್ರತಿಬಿಂಬದಂತಿರುವ ಈ ಯುವಜನ ಶಾಖೆ. ಆಂತರಿಕ ಜಗಳದಿಂದ 40 ಲಕ್ಷ ರೂಪಾಯಿಗಳು ಖೋತಾ ಆಗಿದೆ. ಇಲ್ಲದಿದ್ದರೆ ಯುವಕ ಯುವತಿಯರ ಮಂಡಲಿಗಳು ಇಷ್ಟೊಂದು ಕಡಿಮೆಯಾಗಲು ಕಾರಣ ಏನೆಂಬುದನ್ನು ತಾವು ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದಕ್ಕೆ ಹಣದ ಅಭಾವವಲ್ಲ ; ರಿಜಿಸ್ಟ್ರೇಷನ್‌ನ್ನು ರಿನ್ಯೂ ಮಾಡುವುದಕ್ಕೆ ಇದ್ದಂಥ ತೊಂದರೆಯಿಂದ ಈರೀತಿ ಆಗಿದ್ದು.

ಶ್ರೀ ಜೀವರಾಜ ಆಳ್ವ.—ಇನ್ನು ಶ್ರೀ ನಾನಯ್ಯನವರು ಕೊಡಗಿನಲ್ಲಿರುವ ಕ್ರೀಡಾ ಶಾಲೆಗೆ ಅಧ್ಯಾಪಕರ ಸೌಲಭ್ಯವನ್ನು ಒದಗಿಸಬೇಕು ಮತ್ತು ಅಲ್ಲಿ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಈಗ ಅಲ್ಲಿ ಕ್ರೀಡಾ ಶಾಲೆಯನ್ನು ಆರಂಭ ಮಾಡಿದ್ದರೂ ಸಹ ಅದಕ್ಕೆ ಸೇರಿದ ಜಾಗ ಮತ್ತು ಕಟ್ಟಡಗಳು ವ್ಯವಸಾಯ ಇಲಾಖೆಗೆ ಸೇರಿವೆ. ಎರಡು ವರ್ಷಗಳಲ್ಲಿ ಈ ಕಟ್ಟಡವನ್ನು ಬಿಟ್ಟುಕೊಡುತ್ತೇವೆಂದು ವ್ಯವಸಾಯ ಇಲಾಖೆಯವರು ನಮಗೆ ತಿಳಿಸಿದ್ದರು. ಆದರೆ ಕಾರಣಾಂತರಗಳಿಂದ ಅವರು ಇನ್ನೂ ಬಿಟ್ಟುಕೊಟ್ಟಿಲ್ಲ. ಈಗ ಮತ್ತೆ ನಾವು ಅವರಲ್ಲಿ ಅರಿಕೆ ಮಾಡಿಕೊಂಡಿದ್ದೇವೆ. ಅವರು ಆ ಕಟ್ಟಡವನ್ನು ಬಿಟ್ಟುಕೊಟ್ಟ ಕೂಡಲೇ ಅದನ್ನು ಒಂದು ಪೂರ್ಣ ಸುಸಜ್ಜಿತವಾದಂತಹ ಕ್ರೀಡಾ ಶಾಲೆಯನ್ನಾಗಿ ಮಾಡುತ್ತೇವೆ. ಆ ಕಟ್ಟಡವನ್ನು ಬಿಟ್ಟುಕೊಡಲು ಮಾನ್ಯ ವ್ಯವಸಾಯ ಮಂತ್ರಿಗಳೂ ಸಹ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅವರು ಬಿಟ್ಟುಕೊಟ್ಟ ಕೂಡಲೇ ಈ ಕೆಲಸವನ್ನು ಮಾಡುತ್ತೇವೆಂಬ ಆಶ್ವಾಸನೆಯನ್ನು ಮಾನ್ಯ ನಾನಯ್ಯ ಅವರಿಗೆ ಕೊಡುತ್ತೇನೆ. ಆನಂತರ ಅವರು ನಾಪೊಕ್ಲುವಿನಲ್ಲಿ ಒಂದು ಕ್ರೀಡಾಶಾಲೆಯನ್ನು ಸ್ಥಾಪನೆ ಮಾಡಬೇಕೆಂದು ಹೇಳಿದ್ದಾರೆ. ಈಗ ಅಲ್ಲಿ ಒಂದು ಒಳ್ಳೆಯ ಕಟ್ಟಡವಿರುವುದರಿಂದ ನಮ್ಮ ಕರ್ನಾಟಕ ಯುವಜನ ಸೇವಾ ಕಾರ್ಯಕ್ರಮದ ಪ್ರಕಾರ ಅಲ್ಲಿ ನೂರು ಅಥವಾ ಇನ್ನೂರು ಜನರಿಗೆ ಟ್ರೈನಿಂಗ್ ಕೊಡಬಹುದು. ಆದ್ದರಿಂದ ನಾಪೊಕ್ಲುವಿನಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲು ನಾವು ಪ್ರಯತ್ನ ಮಾಡುತ್ತೇವೆ.

ಇನ್ನು ಕ್ರೀಡಾಪಟುಗಳಿಗೆ ಈಗ ಕೊಡುತ್ತಿರುವ 100 ರಿಂದ 200 ರೂಪಾಯಿಗಳ ಗೌರವಧನ ಸಾಲದು. ಇದನ್ನು 250 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಈಗ ನಾವು 143 ಕ್ರೀಡಾಪಟುಗಳಿಗೆ ಗೌರವಧನ ಕೊಡುವ ಬಗ್ಗೆ ಸರ್ಕಾರಕ್ಕೆ ಬರೆದಿದ್ದೇವೆ. ಆದರೆ ಈ ಬಗ್ಗೆ ಕಟ್ಟುನಿಟ್ಟಾದ ಗೈಡ್‌ಲೈನ್ಸ್ ಇಲ್ಲದಿರುವುದರಿಂದ ಮತ್ತು ಒಂದು ಸ್ಕ್ರೀನಿಂಗ್ ಕಮಿಟಿ ಇಲ್ಲದಿರುವುದರಿಂದ ಇನ್ನೂ ಅಂತಿಮ ತೀರ್ಮಾನ ಕೈಗೊಳ್ಳುವುದಕ್ಕೆ ಆಗಿಲ್ಲ. ಆದರೂ ಸಹ ಇನ್ನು 3 ವಾರದೊಳಗಾಗಿ ಸ್ಕ್ರೀನಿಂಗ್ ಕಮಿಟಿ ಆಗಬೇಕು ಮತ್ತು ಈ 143 ಕ್ರೀಡಾಪಟುಗಳಿಗೆ ಮಾಸಾಶನ ಕೊಡುವಂತಹ ವ್ಯವಸ್ಥೆಯಾಗಬೇಕೆಂದು ಮುಖ್ಯ ಮಂತ್ರಿಗಳು ಈಗಾಗಲೇ ಆಜ್ಞೆ ಮಾಡಿದ್ದಾರೆ.

ಇನ್ನು ನಾಟಿ ಓಟಕ್ಕೆ ಪ್ರೋತ್ಸಾಹ ಕೊಡಬೇಕೆಂದು ಶ್ರೀ ನಾನಯ್ಯ ಅವರು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಂಬಳ ಎಂದು ಇದೆ. ಇಲ್ಲಿ ಕೋಣಗಳನ್ನು ಗದ್ದೆಯಲ್ಲಿ ಓಡಿಸಿದರೆ ನಾಟಿ ಓಟದಲ್ಲಿ ಮನುಷ್ಯರೇ, ಓಡುತ್ತಾರೆ. ನಾನು ಮತ್ತು ಶ್ರೀ ಜೀವಿಜಯ ಅವರು ಅಲ್ಲಿಗೆ ಹೋಗಿದ್ದಾಗ ಮಳೆಯಲ್ಲಿಯೇ ಒಂದು ಕಿಲೋ ಮೀಟರ್ ಒಟ್ಟಿಗೆ ಓಡಿದ್ದೇವೆ. ಆದ್ದರಿಂದ ಮಾನ್ಯ ನಾನಯ್ಯ ಅವರು ನಮಗೇ ಪ್ರೈಜ್ ಕೊಡಬೇಕಾಗಿತ್ತು. ಈ ನಾಟಿ ಓಟದ ಕ್ರೀಡೆ ಒಳ್ಳೆಯ ಆಕರ್ಷಕವಾದಂಥ ಕ್ರೀಡೆಯಾಗಿದೆ. ಇದನ್ನು ರಾಜ್ಯ ಕ್ರೀಡೆಯನ್ನಾಗಿ ಪರಿಗಣಿಸಬೇಕೆಂದು ಕೇಳಿದ್ದಾರೆ. ಈ ನಾಟಿ ಓಟದ ಕ್ರೀಡೆಗೆ ಬೇಕಾದ ಎಲ್ಲ ಪ್ರೋತ್ಸಾಹವನ್ನೂ ಸರ್ಕಾರ ಕೊಡುತ್ತದೆಂದು ಮಾನ್ಯ ನಾನಯ್ಯ ಅವರಿಗೆ ಹೇಳುತ್ತೇನೆ.

ಇನ್ನು ಶ್ರೀ ಸಿದ್ದರಾಮಯ್ಯನವರು ಜಿಲ್ಲಾ ಕ್ರೀಡಾ ಶಾಖೆಗಳಿಗೆ ಹೆಚ್ಚಿನ ಸೌಲಭ್ಯ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಈಗ ಗ್ರಾಮೀಣ ಕ್ರೀಡೆಗಳನ್ನು ಅಭಿವೃದ್ಧಿ ಮಾಡಬೇಕೆಂಬುದು ಸರ್ಕಾರದ ಆಲೋಚನೆಯಲ್ಲಿದೆ. ಈ ಕಾರಣಕ್ಕಾಗಿ ನಮ್ಮ ಯುವಕ ಮತ್ತು ಯುವತಿಯರ ಮಂಡಲಿಗಳನ್ನು ಮತ್ತು ಕ್ಲಬ್‌ಗಳನ್ನು ಉಪಯೋಗಿಸಿಕೊಂಡು ನಮ್ಮ ಗ್ರಾಮೀಣ ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು 50 ತರಬೇತಿದಾರರು ಬೇಕೆಂದು ಸರ್ಕಾರಕ್ಕೆ ಬರೆದು ತಿಳಿಸಿದ್ದಾರೆ. ಅದನ್ನು ಮಾಡಿಕೊಡುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಟದ ಮೈದಾನಗಳಿಲ್ಲ ಮತ್ತು ಆಟದ ಸಾಮಗ್ರಿಗಳಿಲ್ಲವೆಂದು ಶ್ರೀ ಸಿದ್ದರಾಮಯ್ಯನವರು ಹೇಳಿದ್ದಾರೆ. ಈ ಆಟದ ಮೈದಾನಗಳ ಬಗ್ಗೆ ಹೇಳಬೇಕಾದರೆ, ಎಲ್ಲಿಯಾದರೂ ಖಾಲಿ ನಿವೇಶನ ಇದೆ ಎಂದು ತಿಳಿದುಬಂದರೆ ಸಾಕು, ಅದು ಆಟದ ಮೈದಾನವಾಗಿದ್ದರೂ ಸಹ ಜನರ ಕಣ್ಣು ಅದರ ಮೇಲೆ ಬಿದ್ದು, ಬೇನಾಮಿ ವ್ಯವಹಾರ ಮಾಡಿಕೊಂಡು ಅದನ್ನು ತಮ್ಮ ಸ್ವಂತ ಆಸ್ತಿಯನ್ನಾಗಿ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಇದನ್ನು ತಡೆಗಟ್ಟಲು ಜನತಾ ಪ್ರತಿನಿಧಿಗಳಾದಂತಹ ಶಾಸಕರು ಇಂಥ ಪ್ರಕರಣಗಳು ಎಲ್ಲಿಯಾದರೂ ನಡೆದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರಬೇಕೆಂದೂ ಕೇಳಿಕೊಳ್ಳುತ್ತೇನೆ. ನನಗೆ ಗೊತ್ತಿರುವಂತೆ ನನ್ನ ಕ್ಷೇತ್ರದಲ್ಲಿ ಸರ್ಕಾರದ ಹೈಸ್ಕೂಲು ಇದೆ. ಈ ಸ್ಕೂಲಿನ ಮುಂದೆ ಒಂದು ಆಟದ ಮೈದಾನ ಕಳೆದ 30 ವರ್ಷಗಳಿಂದ ಇತ್ತು. ಈ ಜಾಗವನ್ನು ಬೇನಾಮಿ ವ್ಯವಹಾರದ ಮೂಲಕ ಕಬಳಿಸಲು ಕೆಲವು ಕುತಂತ್ರಿಗಳು ಸೇರಿಕೊಂಡು ಪ್ರಯತ್ನ ಮಾಡಿದರು. ಇಂತಹ ಪ್ರಯತ್ನವನ್ನು ನಿಲ್ಲಿಸುವುದಕ್ಕೆ ಶಾಸಕರು ಹಾಗೂ ಇತರೇ ಸಮಾಜ ಸೇವಕರು ಸರ್ಕಾರದ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು ವಿಜಯನಗರದ ಪುನರುತ್ಥಾನದ ಬಗ್ಗೆ, ಹಂಪೆಯ ಗತ ವೈಭವದ ಬಗ್ಗೆ ಮಾತನಾಡಿದರು. ಇದರ ಸಂಶೋಧನಾ ಕೇಂದ್ರಕ್ಕೆ ಪ್ರಾಚ್ಯ-ವಸ್ತು ಇಲಾಖೆಯಿಂದ ಸುಮಾರು 8·4 ಎಕರೆ ಜಾಗವನ್ನು ನಮ್ಮ ಇಲಾಖೆ ಹೆಸರಿಗೆ ವರ್ಗಾಯಿಸಲಾಗಿದೆ. ಈ ಸಂಶೋಧನಾ ಕೇಂದ್ರದ ರೂಪ ರೇಖೆ ಹಾಗೂ ವಿನ್ಯಾಸ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಸಂಶೋಧನಾ ಕಾರ್ಯದ ಪ್ರಗತಿಯ ವರದಿಯನ್ನು ನಮ್ಮ ಇಲಾಖೆ ಪ್ರಕಟ ಮಾಡಿದೆ ಮತ್ತು ಈ ಬಗ್ಗೆ ಒಂದು ಕಮಿಟಿಯನ್ನು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ರಚಿಸಲಾಗಿದೆ. ಈ ಕಮಿಟಿಯ ಉಪಾಧ್ಯಕ್ಷನಾಗಿ ನಾನಿದ್ದೇನೆ. ಹಂಪೆಯ ಬಗ್ಗೆ ನಾವು ಒಂದು ಬುಕ್-ಲೆಟ್ ಹೊರತಂದಿದ್ದೇವೆ. ಈ ಒಂದು ಕಮಿಟಿಯ ಪ್ರಥಮ ಸಭೆಯನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ಕರೆಯಲಾಗುತ್ತದೆ. ಈ ಒಂದು ಕೆಲಸದ ಜೊತೆಗೆ ಹೊಯ್ಸಳ ರಾಜ್ಯದ ವಿಷ್ಣುವರ್ಧನ ಮತ್ತು ಶಾಂತಲೆಯರ ಒಂದು ಸಾವಿರ ವರ್ಷವು ಈ ವರ್ಷಕ್ಕೆ ಕಳೆದಿರುವ ಪ್ರಯುಕ್ತ "ವೇಲಾಪುರಿ" ವೈಭವವನ್ನು ಮಾಡಬೇಕಾಗಿದೆ. ಇದನ್ನು ಹಂಪೆಯಲ್ಲಿ ಮಾಡಬೇಕೋ ಅಥವಾ ಬೇಲೂರು ಮತ್ತು ಹಳೆಯಬೀಡುವಿನಲ್ಲಿ ಮಾಡಬೇಕೋ ಎಂಬುದು ಸರ್ಕಾರದ ಆಲೋಚನೆಯಲ್ಲಿದೆ. ಈ ಬಗ್ಗೆ ತಮ್ಮ ಸಹಕಾರ ಮತ್ತು ಸಲಹೆಗಳನ್ನು ಕೊಡಬೇಕು ಮತ್ತು ಈಗ ರಚಿಸಲಾಗಿರುವ ಸಮಿತಿ ಜೊತೆಯಲ್ಲಿ ಸಹಕರಿಸಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ತಾವು University of Fine Arts ಮಾಡಬೇಕೆಂದು ಸಲಹೆ ಕೊಟ್ಟಿದ್ದೀರಿ. ಈ ಆಲೋಚನೆ ಕೂಡ ಸರ್ಕಾರದಲ್ಲಿದೆ. ಇನ್ನು ಶ್ರೀ ರಾಣೆ ಅವರು District Youth Boards are not functioning well because the Deputy Commissioners are the head of the Departments ಎಂದು ಹೇಳಿದ್ದಾರೆ. ಇದು ಒಂದು ತರಹದಲ್ಲಿ ಸತ್ಯಸಂಗತಿ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸಾಧಾರಣವಾಗಿ Deputy Commissioners are over-loaded with various multifarious activities of the District. ಅದಕ್ಕೋಸ್ಕರವಾಗಿ ಡಿಸ್ಟ್ರಿಕ್ಟ್ ಬೋರ್ಡುಗಳನ್ನು ಪುನರ್ ರಚನೆ ಮಾಡುವಾಗ ಪೂರ್ತಿಯಾಗಿ ಅಲ್ಲಿ ಯುವಕರ ಪ್ರಾತಿನಿಧ್ಯ ಇರುವಂತಹ ಮಂಡಲಿಗಳನ್ನಾಗಿ ಪರಿವರ್ತಿಸಬೇಕು ಎನ್ನುವ ಅಭಿಪ್ರಾಯವಿದೆ. ಈ ಬಗ್ಗೆ ಶ್ರೀ ರಾಣೆ ಅವರ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಇನ್ನು ಶ್ರೀ ರಾಣೆಯವರು ಕಾರವಾರ ಮತ್ತು ಸಿರ್ಸಿ ಕ್ರೀಡಾಂಗಣದ ಬಗ್ಗೆ ಹೇಳಿದ್ದಾರೆ. ಈ ವರ್ಷದ ಮಟ್ಟಿಗೆ 19 ಕ್ರೀಡಾಂಗಣಗಳ ಪೈಕಿ 5 ಕ್ರೀಡಾಂಗಣಗಳ ಕೆಲಸಕಾರ್ಯವನ್ನು ಪೂರ್ಣವಾಗಿ ಮುಗಿಸಬೇಕೆಂದು ಕರ್ನಾಟಕ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಇದಕ್ಕೆ ಆಗುವಂತಹ ಖರ್ಚನ್ನು ಸರ್ಕಾರ ಕೊಡುತ್ತದೆಂದು ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಎರಡು ಕ್ರೀಡಾಂಗಣಗಳಲ್ಲಿ

ಮೊದಲನೇ ಕ್ರೀಡಾಂಗಣವನ್ನು ಸಿರಸಿಯಲ್ಲಿ ತೆಗೆದುಕೊಳ್ಳುತ್ತಾ ಇದ್ದೇವೆ ಎನ್ನುವ ಆಶ್ವಾಸನೆಯನ್ನು ಮಾನ್ಯ ರಾಣೆಯವರಿಗೆ ಕೊಡಬಯಸುತ್ತಾ ಇದ್ದೇನೆ. ಮಾನ್ಯ ಬಿ. ಬಿ. ಶೆಟ್ಟರು ಉಡುಪಿ ಸ್ಪೋರ್ಟ್ಸ್ ಕಲ್ಚರಲ್ ಅಸೋಸಿಯೇಷನ್‌ನವರು ಸುಮಾರು 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸುಸಜ್ಜಿತ ಕ್ರೀಡಾಂಗಣವನ್ನಾಗಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಕರ್ನಾಟಕ ಯುವಜನ ಸೇವೆಯಲ್ಲಿ ಈ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ನಾವು ಜಿಲ್ಲೆಗೊಂದು ಕ್ರೀಡಾಂಗಣವನ್ನು ಮಾಡಿಸಲಾರದಂಥ ಶೋಚನೀಯ ಪರಿಸ್ಥಿತಿಯಲ್ಲಿರುವಾಗ ನಾವು ತಾಲ್ಲೂಕು ಕೇಂದ್ರಕ್ಕೆ ಹೋಗುವುದು ಕಷ್ಟವಾದೀತು. ಮಾನ್ಯ ಬಿ. ಬಿ. ಶೆಟ್ಟರ ಮಟ್ಟಿಗೆ ಹೇಳುತ್ತೇನೆ. ಮಾನ್ಯ ಆಚಾರ್ಯರು ಇದ್ದಾರೆ. ಅವರು ಹುಮ್ಮಸ್ಸಿನ ವ್ಯಕ್ತಿಗಳು, ಡಾಕ್ಟರೂ, ಶೆಟ್ಟರೂ ಇಬ್ಬರೂ ಸೇರಿಕೊಂಡರೆ ಒಂದು ಲಕ್ಷ, ಎರಡು ಲಕ್ಷ ಸಾರ್ವಜನಿಕರಿಂದ ವಂತಿಗೆ ಕಲೆಕ್ಟ್ ಮಾಡುವುದಕ್ಕೆ ಕಷ್ಟವಾಗಲಾರದು. ಈ ಕ್ರೀಡಾಂಗಣದ ವ್ಯವಸ್ಥೆಯನ್ನು ಉಡುಪಿ ಸ್ಪೋರ್ಟ್ಸ್ ಕಲ್ಚರಲ್ ಅಸೋಸಿಯೇಷನ್‌ನವರೇ ವಹಿಸಿಕೊಂಡರೆ ಸರ್ಕಾರಕ್ಕೂ ಸಹಾಯ ಮಾಡಿದಂತಾಗುತ್ತದೆ. ಮತ್ತು ಜನತೆಗೂ ಸಹಾಯ ಮಾಡಿದಂತಾಗುತ್ತದೆ.

ಡಾ॥ ವಿ. ಎಸ್. ಆಚಾರ್ಯ.—ನಾವು ಭಾರವನ್ನು ಹೊರುತ್ತೇವೆ. ಆದರೆ ಸರ್ಕಾರ ಹಿಂದೆ ಭರವಸೆ ಕೊಟ್ಟಂತೆ ಒಂದು ಲಕ್ಷ ರೂಪಾಯಿಯಾದರೂ ಕೊಡಿ.

ಶ್ರೀ ಬಿ. ಬಿ. ಶೆಟ್ಟಿ.—ಅಲ್ಲಿ 20–30 ಮಕ್ಕಳು ರಾತ್ರಿ ಮಲಗಿಕೊಳ್ಳುವುದಕ್ಕೆ ಅವಕಾಶವಾಗುವಂತೆ ಎರಡು ಲಕ್ಷ ರೂಪಾಯಿಗಳ ಪ್ರೋಗ್ರಾಂ ಹಾಕಿಕೊಂಡಿದ್ದು ಈ ತಿಂಗಳಿನಲ್ಲಿ ಎಕ್ಸ್‌ಪೆರಿಮೆಂಟ್ ಮಾಡುತ್ತೇವೆ. ಅದಕ್ಕೆ 2 ಲಕ್ಷ ಮತ್ತು ಇದಕ್ಕೆ ಒಂದು ಲಕ್ಷ, ಒಟ್ಟು ಮೂರು ಲಕ್ಷ ರೂಪಾಯಿಗಳು ಬೇಕಾದೀತು ಎಂದು ಹೇಳಬಯಸುತ್ತೇನೆ

ಡಾ ॥ ಜೀವರಾಜ ಆಳ್ವ.—ಮಾನ್ಯ ಹಿರಿಯರಾದ ರಂಗನಾಥ್ ಅವರು ಫುಟ್‌ಬಾಲ್ ಸ್ಟೇಡಿಯಂ ಇನ್ನೂ ಪೂರ್ತಿಯಾಗಿಲ್ಲ; ಕ್ರಿಕೆಟ್‌ನವರಿಗೆ ಸಹಾಯ ಮಾಡಿದ್ದೀರಿ, ವಾಲಿಬಾಲ್ ಅಂತಹವರಿಗೆ, ಟೆನಿಸ್‌ನವರಿಗೆ ಕಬ್ಬನ್‌ಪಾರ್ಕಿನಲ್ಲಿ ಅವಕಾಶ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಎಲ್ಲಾ ಕ್ರೀಡೆಗಳೂ ನಮಗೆ ಸರಿಸಮಾನ. ಕ್ರಿಕೆಟ್ ಅಸೋಸಿಯೇಷನ್‌ನವರು ಕೇಳಿದರು ಅವರಿಗೆ ನಿವೇಶನ ಕೊಟ್ಟಿದೆ, ಫುಟ್‌ಬಾಲ್‌ನವರಿಗೆ ನಿವೇಶನ ಕೊಟ್ಟಿದೆ ಎಂದು ಹೇಳಿದ್ದಾರೆ. ಈ ಫುಟ್‌ಬಾಲ್ ಸ್ಟೇಡಿಯಂ ಬಗ್ಗೆ ಹೇಳುವುದಾದರೆ ಇಷ್ಟರವರೆಗೆ ಅವರು ಖರ್ಚು ಮಾಡಿದ 64·30 ಲಕ್ಷದಲ್ಲಿ ನಾವು ಕೊಟ್ಟಂತಹ ಹಣ 55 ಲಕ್ಷ ರೂಪಾಯಿಗಳು. ಕ್ರಿಕೆಟ್ ಅಸೋಸಿಯೇಷನ್‌ನವರಿಗೆ ನಾವು 40 ಲಕ್ಷ ರೂಪಾಯಿಗಳನ್ನು ಕೊಟ್ಟೆವು, ನಿವೇಶನ ಕೊಟ್ಟೆವು, ಅವರು ಮಾಡಿಕೊಂಡರು. ಫುಟ್‌ಬಾಲ್ ಕೂಡ ಮನರಂಜನೆ ಕೊಡುವಂಥ ಕ್ರೀಡೆ. ಅವರೂ ಕೂಡ ಪ್ರಯತ್ನ ಮಾಡಿದ್ದರೆ ಹಣ, ಬಂಡವಾಳ ಹಾಕುವಂಥ ವ್ಯವಸ್ಥೆ ಆಗುತ್ತಿತ್ತು. ಇದಕ್ಕೆ ಸರ್ಕಾರದಿಂದ ಯಾವ ರೀತಿಯಾದ ವೈಫಲ್ಯತೆ ಆಗಿಲ್ಲ, ನಿವೇಶನ ಕೊಟ್ಟಿದ್ದೇವೆ, ದುಡ್ಡು ಕೊಟ್ಟಿದ್ದೇವೆ. ಕರ್ನಾಟಕ ಸ್ಟೇಟ್ ಫುಟ್‌ಬಾಲ್ ಅಸೋಸಿಯೇಷನ್‌ನವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸರ್ಕಾರದ ಹತ್ತಿರ ಬಂದಿದ್ದಾರೆ. ಅವರ ಪಕ್ಕದಲ್ಲಿರತಕ್ಕಂಥ ನಿವೇಶನ ಈಗಾಗಲೇ ಅವರಿಗೆ ಕೊಟ್ಟಿದೆ. ಅದರ ಮುಂದಿನ ಜಾಗವನ್ನೂ ಅವರಿಗೆ ಸಬ್‌ಲೀಸ್ ಮಾಡುವಂಥ ಅವಕಾಶ ಕೊಟ್ಟರೆ ಸುಮಾರು ಒಂದು ಕೋಟಿ ರೂಪಾಯಿ ಜನರೇಟ್ ಮಾಡುವಂಥ ಅವಕಾಶ ಬರುತ್ತದೆ ಈ ಒಂದು ಕೋಟಿ ಮತ್ತು ಮೊದಲನೇ ಹಂತದ ಕಾರ್ಯಕ್ರಮವನ್ನು ನಾವು ಮುಗಿಸುತ್ತೇವೆ ಎನ್ನುವ ಆಶ್ವಾಸನೆ ಕೊಟ್ಟಿದ್ದಾರೆ. ಆ ಒಂದು ಕಾರ್ಯಕ್ರಮ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ; ಇದನ್ನು ಒಪ್ಪಬಹುದು ಎನ್ನುವುದು ನನ್ನ ಭಾವನೆ. ಏಕೆಂದರೆ, ಫುಟ್‌ಬಾಲ್ ಸ್ಟೇಡಿಯಂ ಅರ್ಧ ಹಂತದಲ್ಲಿದೆ. ಆ ಒಂದು ಕಾರ್ಯಕ್ರಮ ಅಂದರೆ ಸರ್ಕಾರ ಫುಟ್‌ಬಾಲ್ ಸ್ಟೇಡಿಯಂನವರಿಗೆ ಆ ಜಾಗವನ್ನು ಸಬ್‌ಲೀಸಾಗಿ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಫುಟ್‌ಬಾಲ್ ಅಸೋಸಿಯೇಷನ್‌ನವರಿಗೆ ಒಂದು ಕೋಟಿ ಜನರೇಟ್ ಮಾಡಲಿಕ್ಕೆ ಅವಕಾಶ ಕೊಡಿ. ನಿಧಾನವಾಗಿ. ಒಂದು ಕೋಟಿ ಜನರೇಟ್ ಮಾಡುವಂಥ ಮಾತು ಬೆಳೆದು 2–3 ವರ್ಷಗಳಾಯಿತು. ಅವರಿಗೆ 25 ಲಕ್ಷ ಕೊಟ್ಟರೆ ಸಧ್ಯ ಅದರಲ್ಲಿ ವ್ಯವಹರಿಸಿ ಅದನ್ನು ಸರಿದೂಗಿಸತಕ್ಕ ವ್ಯವಸ್ಥೆಯಾಗುತ್ತದೆ. ಆದುದರಿಂದ 30–35 ಲಕ್ಷ ರೂಪಾಯಿಗಳನ್ನು ಸರ್ಕಾರ ಲೋನ್ ಅಥವಾ ಗ್ರಾಂಟ್ ರೂಪವಾಗಿ ಕೊಟ್ಟು ಈ ಕೆಲಸ ಆಗುವ ಹಾಗೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡಿ. ಒಂದು ಕೋಟಿ ಜನರೇಟ್ ಆಗುವ ವಿಷಯವನ್ನು ಒಂದೆರಡು ವರ್ಷಗಳಿಂದ ಮಾತನಾಡುತ್ತಾ ಬಂದಿದ್ದೇವೆ. ಇದನ್ನು ಕೊಡಬೇಕು ಎಂದು ನಿರ್ಣಯವಾಗಿತ್ತು, ಅದನ್ನು ಇಂಪ್ಲಿಮೆಂಟ್ ಮಾಡುತ್ತೀರಾ ?

ಡಾ ॥ ಜೀವರಾಜ ಆಳ್ವ.—ರಾತ್ರಿ ಎಲ್ಲಾ ರಾಮಾಯಣ ಕೇಳಿದಮೇಲೆ ಬೆಳಿಗ್ಗೆ ರಾಮನಿಗೂ ಸೀತೆಗೂ ಏನು ಸಂಬಂಧ ಎಂದು ಕೇಳಿದಹಾಗೆ ಆಯಿತು.

ಶ್ರೀ ಪಿ. ರಾಮದೇವ್.—ಸರ್ಕಾರ ಪೂರ್ತಿಹಣ ಕೊಟ್ಟು ಕಟ್ಟಿಸಿ ಅವರ ವಶಕ್ಕೆ ಕೊಟ್ಟರೆ ಆಗಬಹುದು. ಬೇರೆ ಸ್ಟೇಡಿಯಂ ಹಾಗೆ ಮಾಡಿದ್ದಾರೆ. ಕಾರ್ಪೋರೇಷನ್‌ನವರು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಸ್ವಿಮ್ಮಿಂಗ್‌ಪೂಲ್‌ಗೆ ಖರ್ಚುಮಾಡಿದ್ದಾರೆ. ಈಗ ಅವರೇ ಮೈನ್‌ಟೈನ್ ಮಾಡುತ್ತಾರೆ. ಅಸೋಸಿಯೇಷನ್‌ನವರಿಗೆ ಪ್ರಾಕ್ಟೀಸ್ ಮಾಡುವುದಕ್ಕೆ ಕೊಟ್ಟುಬಿಡಬಹುದು. ಇಲ್ಲಿ ಅವರೇ ಖರ್ಚುಮಾಡಿ ಎಂದರೆ ಅವರಿಗೆ ಶಕ್ತಿ ಇದೆ ಎಂದು ನನಗೆ ಅನ್ನಿಸುವುದಿಲ್ಲ.

ಡಾ ॥ ಜೀವರಾಜ ಆಳ್ವ.—ಈ ರಂಗಮಂದಿರಗಳ ಬಗ್ಗೆ ಕೂಡ ಹಿರಿಯ ಶಾಸಕರಾದ ಮಾನ್ಯ ರಂಗನಾಥ್‌ರವರು ಒಂದು ಮಾತು ಹೇಳಿದರು. ಈ ರಂಗಮಂದಿರಗಳ ಬಗ್ಗೆ ಹೇಳುವುದಾದರೆ ಗುಬ್ಬಿ ವೀರಣ್ಣ ರಂಗಮಂದಿರವನ್ನು ಎಷ್ಟೋ ವರ್ಷಗಳಿಂದ ಕಾರ್ಪೊರೇಷನ್ ಮಾಡಬೇಕೋ ಸರ್ಕಾರ ಮಾಡಬೇಕೋ ಎನ್ನುವ ಚಿಂತನೆಯಲ್ಲಿ ಕಳೆದು ಹೋಗಿದೆ. ನಂತರ ಅಲ್ಲಿ ಕೊಳಚೆ ಪ್ರದೇಶದವರು ಲಗ್ಗೆ ಹೂಡಿದರು. ಈಗ ನಮ್ಮ ಸರ್ಕಾರ ಬಂದಮೇಲೆ ಆ ಕೊಳಚೆ ನಿವಾಸಿಗಳನ್ನು ಅಲ್ಲಿಂದ ತೆಗೆದು ಅದನ್ನು ಕಾರ್ಪೊರೇಷನ್ ಪರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಿಕೊಡಬೇಕು ಎನ್ನುವ ತೀರ್ಮಾನವಾಗಿದೆ. ಸಧ್ಯದಲ್ಲೇ ಕಾರ್ಪೊರೇಷನ್ನಿನಿಂದ ಧನಸಹಾಯ ಪಡೆದುಕೊಂಡು ಈ ಒಂದು ರಂಗಮಂದಿರದ ಕಾರ್ಯವನ್ನು ಆರಂಭ ಮಾಡುವುದಕ್ಕೆ ನಾವು ಪೂರ್ಣ ಪ್ರಯತ್ನ ಮಾಡುತ್ತೇವೆ. ಮತ್ತೆ ಮಾನ್ಯ ರಾಂದೇವ್‌ರವರು ಕ್ರೀಡಾಮಂತ್ರಿ ಆಗಿರಬೇಕಾಗಿತ್ತು. ಅವರು ಬೈಫರ್‌ಕೇಷನ್ ಆಫ್ ಡಿಪಾರ್ಟ್‌ಮೆಂಟ್ ಮಾಡಬೇಕು, ಕ್ರೀಡೆಗೆ ಸೆಪರೇಟ್ ಡಿಪಾರ್ಟ್‌ಮೆಂಟ್ ಕಾನ್‌ಸ್ಟಿಟ್ಯೂಟ್ ಮಾಡಬೇಕು, ಎಂದು ಹೇಳಿದ್ದಾರೆ. ನಮಗೆ ಸ್ಪೋರ್ಟ್ಸ್‌ಗೆ ಸೆಪರೇಟ್ ಡೈರಕ್ಟೊರೇಟ್ ಮಾಡಬೇಕು ಎನ್ನುವ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಈ ಹಂತದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. ಯುವಜನ ಸೇವಾ ಇಲಾಖೆ ಮತ್ತು ಕ್ರೀಡಾ ಇಲಾಖೆ ಎಂದು ಬೇರೆ ಬೇರೆ ಇಲಾಖೆಗಳನ್ನಾಗಿ ಪರಿಗಣಿಸಬೇಕು ಎಂದು ನಾವು ಪೂರ್ತಿಯಾಗಿ ಕೆಲಸಮಾಡುತ್ತಿದ್ದೇವೆ. ಸಧ್ಯದಲ್ಲೇ ಕ್ರೀಡಾ ಇಲಾಖೆಯನ್ನು ಕೂಡ ಮಾಡುತ್ತೇವೆ. 1980 ರಲ್ಲಿ ಕರ್ನಾಟಕ ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್‌ನ್ನು ಹಿಂದಿನ ಸರ್ಕಾರ ತೆಗೆದುಹಾಕಿತ್ತು. ಆದರೆ ಅದರ ಔಚಿತ್ಯವೇನು ಎನ್ನುವುದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಈಗಿನ ಸರ್ಕಾರಕ್ಕೆ ಒಂದು ಮನಸ್ಸು ಬಂದಿದೆ; ಸ್ಪೋರ್ಟ್ಸ್ ಕೌನ್ಸಿಲ್‌ನ್ನು ರೀಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು. ಈಗ ಅದರ ಬೈಲಾಸ್ ಎಲ್ಲಾ ಮಾಡುವಂಥಾ ಕಾರ್ಯಕ್ರಮ ನಡೆಯುತ್ತಾ ಇದೆ. ಇನ್ನು ಒಂದು ತಿಂಗಳಲ್ಲಿ ಕರ್ನಾಟಕ ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್‌ನ್ನು ರೀಕಾನ್‌ಸ್ಟಿಟ್ಯೂಟ್ ಮಾಡುತ್ತೇವೆ ಮತ್ತು ಮಾನ್ಯ ರಾಂದೇವ್‌ರವರನ್ನೇ ಅದರ ಅಧ್ಯಕ್ಷರನ್ನಾಗಿ ಮಾಡಬೇಕು ಎನ್ನುವ ಆಸೆ ಕರ್ನಾಟಕ ಸರ್ಕಾರಕ್ಕೆ ಇದೆ ಎಂದು ಈ ಮೂಲಕ ಸಭೆಗೆ ಹೇಳುತ್ತಾ ಇದ್ದೇನೆ. ಆಮೇಲೆ ಮಾನ್ಯ ರಾಂದೇವ್‌ರವರು ಪ್ಲೈನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಬಗ್ಗೆ ಮಾತನಾಡಿದರು. ಪ್ಲೈನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ರಾಜ್ಯದ ವೆರಿಮಚ್ ಪ್ರಿಸ್ಟೀಜಿಯಸ್ ಇನ್‌ಸ್ಟಿಟ್ಯೂಟ್ ಆಗಿದೆ. ಪ್ರತಿವರ್ಷ ವಿಮಾನ ತರಬೇತಿಗಾಗಿ ಬರೀ ಎರಡು ವ್ಯಕ್ತಿಗಳನ್ನು ಟ್ರೈನ್ ಮಾಡುತ್ತಾ ಇಲ್ಲ. 15 ರಿಂದ 20 ಎನ್.ಸಿ.ಸಿ. ವಿದ್ಯಾರ್ಥಿಗಳನ್ನು ಹಾಗೂ ರಾಜ್ಯ ಸರ್ಕಾರದ 5 ರಿಂದ 10 ಜನ ವಿದ್ಯಾರ್ಥಿಗಳನ್ನು ವಿಮಾನ ತರಬೇತಿಗಾಗಿ ಸೇರಿಸಿಕೊಳ್ಳಲಾಗಿದೆ. ಮತ್ತೆ ಹೆಚ್ಚಿನ ಸಂಖ್ಯೆಯಲ್ಲಿ ವಿಮಾನಗಳನ್ನು ಒದಗಿಸಲು ಭಾರತ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ. ಆ ವಿಮಾನಗಳು ಬಂದಾಗ ಈ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ನಮ್ಮಲ್ಲಿ "ಸೆಸ್ನ" ಎಂಬ ಹೊಸ ವಿಮಾನವಿದೆ. ಇದರ ಜೊತೆಗೆ ಈ ಇನ್ನೊಂದು ಸೆಸ್ನ ಕೊಳ್ಳುವಂಥ ವ್ಯವಸ್ಥೆ ಮಾಡಿದ್ದೇವೆ. ಈ ಎರಡು ಸೆಸ್ನ ವಿಮಾನಗಳನ್ನು ಟ್ರೈನಿಂಗ್‌ಗೋಸ್ಕರವಾಗಿ ಉಪಯೋಗಿಸಲಾಗುತ್ತದೆ. ನಂತರ ಮಾನ್ಯ ಫರ್ನಾಂಡಿಸಿಸ್ ಅವರು ಮಾತನಾಡುತ್ತಾ ಕನ್ನಡ ಕಲಿಸಲಿಕ್ಕೆ ಸರಿಯಾದ ಉಪಾಧ್ಯಾಯರಿಲ್ಲ ಎಂದು ಹೇಳಿದರು., ತಮಗೆ ಆಶ್ವಾಸನೆ ಕೊಟ್ಟಿದ್ದೆ. ತಾವು ಯಾವತ್ತು ಇಚ್ಛೆಪಡುತ್ತೀರೋ ಆಗ ಒಳ್ಳೆಯ ಕನ್ನಡ ಉಪಾಧ್ಯಾಯರನ್ನು ಕನ್ನಡ ಕಲಿಸಲಿಕ್ಕೆ ಏರ್ಪಾಡು ಮಾಡುತ್ತೇನೆ.

———

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪಿ.ರಾಂದೇವ್‌ರವರು ಮಾತನಾಡುತ್ತಾ, ಹೇಳಿದರು, ಕಲಾಶಾಲೆಗಳನ್ನು ತೆಗೆಯಬೇಕೆಂದು. ಆದರೆ ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡಲಾಗುವುದು. ಮತ್ತು ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ನಾನು ಹೇಳುವುದಾದರೆ ದಾವಣಗೆರೆ ಜಯಚಾಮರಾಜೇಂದ್ರ ವಿಶುವಲ್ ಆರ್ಟ್ಸ್ ಕೂಡ ಕರ್ನಾಟಕ ಸರ್ಕಾರದಿಂದ ಬಂದಿದೆ. ಆದ್ದರಿಂದ ನಾವು ಇದರಲ್ಲಿ ಎಲ್ಲಾ ಯೋಜನೆಗಳನ್ನು ಅಳವಡಿಸಿಕೊಂಡು ಕೆಲಸಕಾರ್ಯಗಳನ್ನು ಮಾಡುತ್ತೇನೆಂದು ಹೇಳುತ್ತೇನೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಾಂದೇವ್‌ರವರು ಮಾತನಾಡುತ್ತಾ ಹೇಳಿದರು, ಈ ಸಾರಿ ನೀವು ವಿಶ್ವ-ಕನ್ನಡ ಸಮ್ಮೇಳನವನ್ನು ಆಚರಿಸುತ್ತೀರಾ ಎಂಬು. ಆದರೆ ಮಾನ್ಯ ಸದಸ್ಯರಿಗೆ ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಈ ಸಾರಿ ನಾವು ಖಂಡಿತವಾಗಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುವುದರಲ್ಲಿ ಯಾವ ಸಂದೇಹ ಕೂಡಾ ಬೇಡ. ಮತ್ತೆ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಆ ಪುಸ್ತಕಗಳಲ್ಲಿ ಸುಮಾರು 117 ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲಾಯಿತು. ನಾವು ಒಟ್ಟು ಸುಮಾರು 5 ಸಾವಿರ ಪುಸ್ತಕಗಳನ್ನು ಅಚ್ಚು ಮಾಡಿಸಿದ್ದೆವು. ಇದರಲ್ಲಿ ಸುಮಾರು 3 ಸಾವಿರ ಪುಸ್ತಕಗಳನ್ನು ಇದುವರೆಗೂ ಮಾರಾಟ ಮಾಡ ಲಾಗಿದೆ. ಒಂದು ಪುಸ್ತಕದ ಬೆಲೆ 307 ರೂಪಾಯಿಗಳು. ಆದರೆ ಅದೇ ಪುಸ್ತಕಗಳಿಗೆ ಸುಮಾರು 600 ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳುವವರೂ ಸಹ ಇದ್ದಾರೆ. ಆದರೆ ನಾವು ನಮ್ಮ ಶಾಸಕರಿಗೆ ಮಾತ್ರ 307 ರೂಪಾಯಿಗಳ ದರದಲ್ಲಿ ಮಾರಾಟ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ 307 ರೂಪಾಯಿಗಳನ್ನು ಕೊಟ್ಟು ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ

ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಕೆಲವು ಜನ ಮಾನ್ಯ ಸದಸ್ಯರು ಪುಸ್ತಕಗಳನ್ನು ಕೊಂಡು ಕೊಂಡಿದ್ದಾರೆಂದು ಕೂಡ ನಾನು ಕೇಳಿದ್ದೇನೆ. ಮಾನ್ಯ ಸದಸ್ಯರು ಪುಸ್ತಕಗಳನ್ನು ತೆಗೆದುಕೊಂಡರೆ ಅವರ ಪುಸ್ತಕದ ಹಣವನ್ನು ಅವರ ಸಂಬಳದಲ್ಲಿ ವಜಾ ಹಾಕಿಕೊಳ್ಳಬಹುದು.

ಶ್ರೀ ವಿ. ಎಸ್. ಆಚಾರ್.—ಸ್ವಾಮಿ, ನಾವು ಸುಮಾರು 15 ಪುಸ್ತಕಗಳಿಗೆ ಹಣವನ್ನು ಕೊಟ್ಟಿದ್ದರೂ ಸಹ ಇದುವರೆಗೂ ನಮಗೆ ಪುಸ್ತಕಗಳು ಬಂದಿಲ್ಲ. ಆದ್ದರಿಂದ ದಯವಿಟ್ಟು ಪುಸ್ತಕಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ನಾವು ವಿಶ್ವ ಕನ್ನಡ ಸಮ್ಮೇಳವನ್ನು ಕಡಿಮೆ ಖರ್ಚಿನಲ್ಲಿಮಿತ ವ್ಯಯದಿಂದ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಈ ವಿಶ್ವ ಕನ್ನಡ ಸಮ್ಮೇಳನವನ್ನು 1984 ನೇ ಇಸವಿ ನವೆಂಬರ್ ತಿಂಗಳಲ್ಲಿ ಆಚರಣೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತು ಮೈಸೂರಿನಲ್ಲಿ ಈ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ನಡೆಯುತ್ತಿರುವ ಕೆಲಸ ಕಾರ್ಯಗಳು ಅರ್ಧಂಬರ್ಧವಾಗಿ ನಿಂತಿವೆ. ಆ ಕೆಲಸಗಳನ್ನೂ ಸಹ ಅಷ್ಟರಲ್ಲಿ ನಾವು ಪೂರ್ತಿ ಮಾಡಿಸುವವರಿದ್ದೇನೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಾಮ್‌ದೇವ್‌ರವರು ಮಾತನಾಡುತ್ತಾ ಹೇಳಿದರು, ಕನ್ನಡ ಸಾಹಿತ್ಯ ಪರಿಷತ್ ಬಗ್ಗೆ. ಅಲ್ಲಿ ಇರುವಂಥ ಅಧ್ಯಕ್ಷರನ್ನು ತೆಗೆದುಹಾಕಿ ಅಲ್ಲಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಸಲಹೆಯನ್ನೂ ಸಹ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಜನ ಮಾನ್ಯ ಸದಸ್ಯರೂ ಕೂಡ ಆ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ಆ ಬಗ್ಗೆ ಸರ್ಕಾರದವರು ಪೂರ್ಣವಾಗಿ ವಿಷಯವನ್ನು ಸಂಗ್ರಹಿಸಲು ಒಂದು ತನಿಖೆಯನ್ನು...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—1984 ರಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನೀವೇ ಆಚರಣೆ ಮಾಡುತ್ತೀರೋ ?

ಶ್ರೀ ಜೀವರಾಜ ಆಳ್ವ.—ಖಂಡಿತವಾಗಿ ನಾವೇ ವಿಶ್ವಕನ್ನಡ ಸಮ್ಮೇಳನವನ್ನು ಆಚರಣೆ ಮಾಡುತ್ತೇವೆ, ಅದರಲ್ಲಿ ಮಾನ್ಯ ಸದಸ್ಯರಿಗೆ ಯಾವ ಅನುಮಾನವೂ ಬೇಡ.

ಶ್ರೀ ಎಂ. ನಾರಾಯಣಗೌಡ.—ಮಾನ್ಯ ಅಧ್ಯಕ್ಷರೇ, ವಿಶ್ವಕನ್ನಡ ಸಮ್ಮೇಳನಕ್ಕೆ ಇಟ್ಟಿದ್ದ 10 ಕೋಟಿ ರೂಪಾಯಿಗಳಲ್ಲಿ ಇನ್ನು ಎಷ್ಟು ಹಣ ಉಳಿದಿದೆ ?

ಶ್ರೀ ಜೀವರಾಜ ಆಳ್ವ.—ಅದರ ಬಗ್ಗೆ ಈಗ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಒದಗಿಸಿಕೊಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ನಾರಾಯಣ ಕುಮಾರ್‌ರವರು ಮಾತನಾಡುತ್ತಾ ಹೇಳಿದರು, ಕನ್ನಡದ ಅಭಿವೃದ್ಧಿಯ ಬಗ್ಗೆ. ಆದರೆ ಕನ್ನಡದ ಅಭಿವೃದ್ಧಿ ಸಾಧನೆಯನ್ನು ವೀಕ್ಷಣೆ ನಡೆಸಲು ಶ್ರೀಮಾನ್ ಸಿದ್ದರಾಮಪ್ಪ ಎಂಬುವರ ನೇತೃತ್ವದಲ್ಲಿ ಎಲ್ಲಾ ಕಡೆ ಪ್ರವಾಸ ಹೋಗಿದ್ದಾರೆ. ಅವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ಆ ಬಗ್ಗೆ ನನಗೆ ನಂಬಿಕೆ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. All these committees are constituted at the pleasure of the Government ಇವತ್ತು ನಾವು ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೂ ಸಹ ಅದರಲ್ಲಿ ಒಳ್ಳೆಯ ನಾಟಕ ಕಾರರನ್ನು ಮತ್ತು ಕಲಾ ಪ್ರದರ್ಶಕರನ್ನೇ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಒಳ್ಳೆಯ ಸಾಹಿತಿಗಳು ಇದ್ದಾರೆ. ಅದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಯಾವ ಅನುಮಾನ ಬೇಡವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ನಾರಾಯಣ ಕುಮಾರ್‌ರವರು ಮಾತನಾಡುತ್ತಾ ಹೇಳಿದರು. ಯಾವ ಪಕ್ಷದ ರಾಜಕೀಯ ಚೇಲಾಗಳೂ ಬೇಡವೆಂದು. ಅಂಥ ರಾಜಕೀಯ ಚೇಲಾಗಳು ಯಾರಾದರೂ ಇದ್ದಾರೆಯೋ ?

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ತಮ್ಮ ಸರ್ಕಾರವಿದ್ದಾಗ ಶ್ರೀಮಾನ್ ಗುಂಡೂರಾಯರ ಜೊತೆಯಲ್ಲಿ ವಾಟಾಳ್ ನಾಗರಾಜ್‌ರವರಂಥ ಚೇಲಾಗಳು ಇರುವುದು ಬೇಡವೆಂದು ನಾನು ಹೇಳಿದ್ದು.

ಶ್ರೀ ಕೆ. ಹೆಚ್. ರಂಗನಾಥ್.—ಆದರೆ ತಾವು ರಾಜಕೀಯ ಪಕ್ಷದ ಚೇಲಾಗಳು ಎಂದು ಹೇಳಿದಿರಿ

ಶ್ರೀ ಜೀವರಾಜ ಆಳ್ವ.— ಆದರೆ ನಾನು ಈ ಸಂದರ್ಭದಲ್ಲಿ ಒಂದು ಸಂತೋಷದ ಸುದ್ದಿಯನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ಅದು ಏನೆಂದರೆ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ 1985 ನೇ ಇಸವಿಯನ್ನು ಅಂತರರಾಷ್ಟ್ರೀಯ ಯುವಕರ ವರ್ಷವೆಂದು ಆಚರಣೆ ಮಾಡಲು ಯೋಚನೆ ಮಾಡಲಾಗಿದೆ. We have requested the Prime Minister of the country to adopt 1986 as an year of international Folk arts. ಮತ್ತೆ ಮೂರು ವರ್ಷಗಳಿಂದ ಉರ್ದು ಅಕ್ಯಾಡೆಮಿಯನ್ನೂ ಸಹ ಕರ್ನಾಟಕ ರಾಜ್ಯದಲ್ಲಿ ಆಚರಣೆ ಮಾಡಿರಲಿಲ್ಲ. ಆದ್ದರಿಂದ ನಮ್ಮ ಸರ್ಕಾರ ಉರ್ದು ಅಕ್ಯಾಡೆಮಿಯನ್ನು ಆಚರಣೆ ಮಾಡಲು ಶ್ರೀಮಾನ್ ಮಹಮದ್ ರಿಯಾಜ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರಿಗೆ ಎಲ್ಲಾ ರೀತಿಯ ಹಣಕಾಸಿನ ನೆರವನ್ನೂ ನೀಡಲಾಗಿದೆ. ಈಗಾಗಲೇ ಸರ್ಕಾರದವರು ಸುಮಾರು 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಕ್ರೀಡೆಗಳ ಬಗ್ಗೆ

ಸ್ಪೋರ್ಟ್ಸ್ ವೆಲ್‌ಫೇರ್ ಫಂಡ್ ಎಂದು ಮಾಡಿದ್ದು ಅದಕ್ಕೆ ರಾಜ್ಯ ಸರ್ಕಾರದ ವಂತಿಕೆ 1 ಲಕ್ಷ ರೂಪಾಯಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದಲ್ಲಿ ಕ್ರೀಡೆಯ ಸರ್ವಾಂಗೀಣ ಬೆಳವಣಿಗೆಯಾಗಲು ಒಂದು ಪ್ರಾಸ್‌ಪೆಕ್ಟೀವ್ ಪ್ಲಾನಿಂಗ್ ಆಗಬೇಕೆನ್ನುವ ಒಂದು ಆಸೆ ಇದೆ. ಮತ್ತು ಇಷ್ಟರ ಮಟ್ಟಿಗೆ ಅಭಿವೃದ್ಧಿ ಯಾವತ್ತೂ ಆಗಿಲ್ಲ. ಕರ್ನಾಟಕದಲ್ಲಿ ಯುವಜನರಿಗೆ ಪ್ರೋತ್ಸಾಹ ಕೊಡುವ ಯೋಜನೆ ಕ್ರೀಡಾ ಪಟುಗಳಿಗೆ ಪ್ರೊತ್ಸಾಹ ಕೊಡುವ ಬಗ್ಗೆ ಈ ಸಾರಿ ಪ್ರಥಮವಾಗಿ ರಾಜ್ಯದಲ್ಲಿ ಮಾಡಿದ್ದೇವೆ. ಎನ್.ಸಿ.ಸಿ. ಆಗಿರುವವರಿಗೆ ಮೆಡಿಕಲ್ ಕಾಲೇಜಿನಲ್ಲಿ 10 ಸೀಟುಗಳನ್ನು ಸ್ಪೋರ್ಟ್ಸ್‌ನಲ್ಲಿ 6 ಸೀಟ್‌ಗಳನ್ನು ಇಂಜಿನಿಯರಿಂಗ್‌ನಲ್ಲಿ 20 ಸೀಟುಗಳನ್ನು ಕೊಟ್ಟಿದ್ದೇವೆ. ಇದು ಬಹಳ ದೊಡ್ಡ ಸಾಧನೆ. ಇಂತಹದ್ದನ್ನು ಹಿಂದಿನ ಸರ್ಕಾರ ಮಾಡಿರಲಿಲ್ಲ. ಯುವಕರಿಗೆ, ಕ್ರೀಡಾಪಟುಗಳಿಗೆ ಕೊಟ್ಟ ಒಂದು ದೊಡ್ಡ ಪ್ರೋತ್ಸಾಹ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ವಿವರಗಳನ್ನು ತರಿಸಿ ನೋಡಬೇಕು. ಈ ಸೀಟ್ ರಿಜರ್ವೇಷನ್ ಮೊದಲೇ ಇತ್ತು.

ಶ್ರೀ ಜೀವರಾಜ ಆಳ್ವ.—ನಾವು ಇದನ್ನು ಇಂಕ್ರೀಸ್ ಮಾಡಿದ್ದೇವೆ. ಸ್ಪೋರ್ಟ್ಸ್‌ಗೆ ಮೊದಲು ಇರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಎನ್.ಸಿ.ಸಿ. ಸೇರುವವರೆಲ್ಲರೂ ಮಿಲಿಟರಿ ಅಧಿಕಾರಿಗಳ ಮಕ್ಕಳೇ, ಬೇರೆ ಯುವರಿಗೆ ಇದಕ್ಕೆ ಅವಕಾಶ ಸಿಗುವುದಿಲ್ಲ ಎನ್ನುವ ದೂರು ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಕೆಲವು ಎನ್.ಸಿ.ಸಿ. ಯುವರನ್ನು ದೆಹಲಿಗೆ ಕಳುಹಿಸಿದ್ದೀರಿ. ಸಂತೋಷ, ಹಣ ಇದೆ ನೀವು ಕಳುಹಿಸಿಕೊಡಿ. ಆದರೆ ಅವರ ಸಾಮಾಗ್ರಿಗಳನ್ನು ವಿಮಾನದಲ್ಲಿ ಕಳುಹಿಸಿಕೊಟ್ಟಿದ್ದೀರಲ್ಲಾ ಇದು ಏಕೆ? ಇದು ಯಾವ ಖರ್ಚು? ಇದನ್ನು ವಿಚಾರ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ಭಾರತದ ಸ್ಕೌಟ್ಸ್ ಅಂಡ್ ಗೈಡ್ಸ್ ನವರಿಗೂ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶಾವಕಾಶದ ಬಗ್ಗೆ ಶೇಕಡಾವಾರು ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಇದು ಒಳ್ಳೆಯ ಸಲಹೆ. ಮುಂದಿನ ವರ್ಷ ಇದನ್ನು ಗಮನದಲ್ಲಿ ಇಟ್ಟುಕೊಂಡು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಮಾಡೋದಿದ್ರೆ ಮಾಡ್ತೇವೆ ಅನ್ನಿ. ಇಲ್ದಿದ್ರೆ ಇಲ್ಲ ಎನ್ನಿ. ತೊಂದರೆ ಇದ್ರೆ ತೊಂದ್ರೆ ಅಂತ ಹೇಳಿ.

ಶ್ರೀ ಜೀವರಾಜ ಆಳ್ವ.—ಇನ್ನು, ಗುಬ್ಬಿ ವೀರಣ್ಣನವರಂತಹ...

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಪ್ರಶ್ನೆಗೆ ಉತ್ತರಾನೇ ಬರಲಿಲ್ಲ.

ಶ್ರೀ ಜೀವರಾಜಆಳ್ವ.—ಕನ್ನಡ ರಂಗಭೂಮಿಯ ಹಿರಿಯ ನಟ ಗುಬ್ಬಿ ವೀರಣ್ಣನವರ ನಾಟಕ ಸಂಸ್ಥೆಯ ಶತಮಾನೋತ್ಸವ, ಕನ್ನಡ ನಾಡಿನ ಷೇಕ್ಸ್‌ಪಿಯರ್ ಎನಿಸಿಕೊಂಡಿರುವ ಕುಂದಗಲ್ ಹನುಮಂತರಾವ್ ಮತ್ತು ಕರ್ನಾಟಕ ಪ್ರಹಸನ ಪಿತಾಮಹ ತ್ಯಾಗರಾಜ ಪರಮಶಿವ ಕೈಲಾಸಂರವರ ಶತಮಾನೋತ್ಸವ ನಡೆಸಲು ನಾವು ನಿರ್ಧರಿಸಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಹಲಗೇರಿ ಜಟ್ಟಪ್ಪನವರ ಕಂಪೆನಿ ಉತ್ತರ ಕರ್ನಾಟಕದಲ್ಲಿ ಬಹಳ ದೊಡ್ಡ ಕಂಪೆನಿಯಾಗಿತ್ತು. ಅದು ಕಾರಣಾಂತರದಿಂದ ನಶಿಸಿಹೋಯಿತು. ಹಾಗೆಯೇ ಬಾಳಪ್ಪನವರ ಕಂಪೆನಿ ಇತ್ತು. ಇವರನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಇವರ ಶತಮಾನೋತ್ಸವದ ಬಗ್ಗೆ ಸಹ ತಾವು ಕಾರ್ಯಕ್ರಮ ಹಾಕಿಕೊಳ್ಳಿ.

ಶ್ರೀ ಜೀವರಾಜ ಆಳ್ವ.—ಈ ಮೂವರು ರಂಗಭೂಮಿ ನಟರ ಜ್ಞಾಪಕಾರ್ಥ ಶ್ರೇಷ್ಠ ಕಾರ್ಯಕ್ರಮ ಹಾಕಿಕೊಳ್ಳಬೇಕೆನ್ನುವ ಆಸೆ ಸರ್ಕಾರಕ್ಕೆ ಇದೆ; ಹಾಗೂ ಹೊಯ್ಸಳ ರಾಜ್ಯಸ್ಥಾಪನೆಯಾಗಿ ಒಂದು ಸಾವಿರ ವರ್ಷಗಳಾದ ಈ ಸಂದರ್ಭದಲ್ಲಿ ಪ್ರಾಚ್ಯ ವಸ್ತು ಸಂಗ್ರಹಾಲಯ ಸ್ಥಾಪನೆಯಾಗಿ 100 ವರ್ಷಗಳಾಗಿದ್ದು ಇದರ ಶತಮಾನೋತ್ಸವ ಆಗಬೇಕಾಗಿದೆ. ಪ್ರಾಚ್ಯ ವಸ್ತು ಸಂಗ್ರಹಾಲಯವನ್ನು 100 ವರ್ಷಗಳ ಮೊದಲೇ ಆರಂಭಿಸಿದ ರಾಷ್ಟ್ರ ಖ್ಯಾತಿ ಕರ್ನಾಟಕದ್ದು. ಇದರ ಒಂದು ಶತಮಾನೋತ್ಸವ ಆಗಬೇಕಾಗಿದೆ. ಅದೇ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಹಂಪೆ, ಬೇಲೂರು, ಹಳೇಬೀಡು ಹಾಗೇ ಸೋಮನಾಥಪುರ ಹಾಗೂ ಮುಖ್ಯವಾಗಿ ಹೇಳಬೇಕೆಂದರೆ ನಂದಳಿಕೆ ಮುದ್ದಣ್ಣನವರ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ರಾಜ್ಯ ಯುವಜನ ಸೇವಾ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಕಿಕೊಂಡಿದೆ. ಆದ್ದರಿಂದ ಮಾನ್ಯ ಹಿರಿಯ ಸದಸ್ಯರು ಈ ನನ್ನ ಬೇಡಿಕೆಗಳ ಬಗ್ಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು. ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ವ್ಯಾಯಾಮ ಶಿಕ್ಷಣದ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಜೀವರಾಜ ಆಳ್ವ.—ಮಾನ್ಯ ವಿದ್ಯಾ ಮಂತ್ರಿಯವರ ಉತ್ತರ ಆದಮೇಲೆ ಕ್ಲಾರಿಫಿಕೇಷನ್‌ಗಳನ್ನು ಕೇಳಿ, ನಾನು ಉತ್ತರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಇವತ್ತಿನವರೆಗೆ ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಮಾಡಿರತಕ್ಕ ಭಾಷಣವನ್ನು ಕಿವಿಗೊಟ್ಟು ಕೇಳಿದ್ದೇನೆ. ಮತ್ತು ಅವರು ಕೊಟ್ಟಿರತಕ್ಕ...

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಇವತ್ತು ಆಗಲೇ 5 ಗಂಟೆ ಆಗಿಹೋಗಿದೆ. ಮಾನ್ಯ ಮಂತ್ರಿಗಳಿಗೂ ವಯಸ್ಸಾಗಿದ್ದು ಅವರು ಸುಧಾರಿಸಿಕೊಂಡು ಸೋಮವಾರ ಉತ್ತರ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ನಾವು ಬೆಳಿಗ್ಗೆ 10 ಗಂಟೆಯಿಂದ ಕುಳಿತಿದ್ದೇವೆ. ಅವರು ಸೋಮವಾರ ಉತ್ತರ ಕೊಡಲಿ.

ಅಧ್ಯಕ್ಷರು.—ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ 5 ಗಂಟೆ ಆಗಿದೆ. ಸೋಮವಾರ ಅವರು ಉತ್ತರ ಕೊಡಲಿ.

ಅಧ್ಯಕ್ಷರು.—ಇವತ್ತು ಈ ಬೇಡಿಕೆ ಮುಗಿಯಬೇಕೆಂದು ತೀರ್ಮಾನ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೋಮವಾರ 1 ಗಂಟೆ ಮುಂಚಿತವಾಗಿ ಸೇರೋಣ.

ಶ್ರೀ ಬಾಪೂಗೌಡ ದರ್ಶನಾಪುರ.—ಮಾನ್ಯ ಮಂತ್ರಿಗಳು ಅರ್ಧ ಗಂಟೆ ಉತ್ತರ ಕೊಡಲಿ. ಹೇಗೂ ಮುಗಿಯುತ್ತದೆ.

ಶ್ರೀ ಬಿ. ರಾಚಯ್ಯ.—ನನಗೆ ಕನಿಷ್ಟ 2 ಗಂಟೆಗಳ ಅವಕಾಶ ಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಬೆಳಿಗ್ಗೆಯಿಂದ ಕುಳಿತಿದ್ದೇವೆ. ಈಗ ಮತ್ತೆ 2 ಗಂಟೆ ಅವರಿಗೆ ಬೇಕು. ನಂತರ ಈ ವಿಷಯದ ಬಗ್ಗೆ ಮಾತನಾಡಿರುವ 25–30 ಜನರೆಲ್ಲಾ ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಇವಕ್ಕೆಲ್ಲಾ ವೇಳೆ ಎಷ್ಟು ಆಗುತ್ತದೆ? ಆದ್ದರಿಂದ ಸೋಮವಾರ ಇದನ್ನು ಮುಂದುವರಿಸೋಣ.

ಅಧ್ಯಕ್ಷರು.—ಸಭೆಯ ಅಭಿಪ್ರಾಯ ಹೇಗೋ ಹಾಗೇ ಆಗಲಿ. ಹಾಗಾದರೆ ಸೋಮವಾರ 1 ಗಂಟೆ ಮುಂಚಿತವಾಗಿ ಕೂರೋಣವೇ? ಅಂದರೆ ನಾಳೆ ಪ್ರಶ್ನೋತ್ತರ ವೇಳೆ ಇಲ್ಲ, ಗಮನ ಸೆಳೆಯುವ ಸೂಚನೆ ಇಲ್ಲ, ಅವುಗಳನ್ನೆಲ್ಲಾ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ರಂಗನಾಥ್.—ಪ್ರಶ್ನೋತ್ತರ ವೇಳೆ ಇರಬೇಕಾಗುತ್ತದೆ. ಬೇಕಾದರೆ ಬೆಳಿಗ್ಗೆ 10–00 ಘಂಟೆಗೆ ಸೇರೋಣ. ಮಂತ್ರಿಗಳ ಉತ್ತರ ಮುಗಿದ ಮೇಲೆ ನಮ್ಮ ರೆಗ್ಯುಲರ್ ಬಿಜಿನೆಸ್ ಇಟ್ಟುಕೊಳ್ಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆ ಬೆಳಿಗ್ಗೆ 10–00 ಘಂಟೆಗೆ ಸೇರೋಣ. ಪ್ರಶ್ನೋತ್ತರಗಳ ವೇಳೆಯೂ ಇರಬೇಕಾಗುತ್ತದೆ.

ಅಧ್ಯಕ್ಷರು.—ಸಭೆಯು ಈಗ ಎದ್ದು ನಾಳೆ ಬೆಳಿಗ್ಗೆ 10–00 ಘಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 5 ಘಂಟೆ 10 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 5 ನೇ ಸೆಪ್ಟೆಂಬರ್ 1983 ರಂದು ಸೋಮವಾರ ಬೆಳಿಗ್ಗೆ 10–00 ಘಂಟೆಗೆ ಸಮಾವೇಶಗೊಳ್ಳುವುದಾಗಿ ನಿರ್ಧರಿಸಲಾಯಿತು.)